# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಜನವರಿ 26, 2021

ಸಂಪುಟ : 47 ಸಂಚಿಕೆ : 267 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




**ನಾಟಿ ಜೋರು** ಜಿಲ್ಲೆಯ ಎಲ್ಲೆಡೆ ಬೇಸಿಗೆ ಹಂಗಾಮಿಗೆ ಭತ್ತದ ನಾಟಿ ಪ್ರಕ್ರಿಯೆ ಚುರುಕುಗೊಂಡಿದೆ. ದಾವಣಗೆರೆಗೆ ಸಮೀಪದ ಜಮೀನೊಂದರಲ್ಲಿ ನಾಟಿ ಮಾಡುತ್ತಿರುವ ಕೂಲಿ ಕಾರ್ಮಿಕರು.

# ಒಂದೇ ದಿನ 2 ಬಾರಿ ಖಾತೆ ಮರು ಹಂಚಿಕೆ!

**ರಾಜೀನಾಮೆ ಬೆದರಿಕೆ ಹಾಕಿ ಸಣ್ಣ ನೀರಾವರಿ ಗಿಟ್ಟಿಸಿದ ಮಾಧುಸ್ವಾಮಿ**

ಬೆಂಗಳೂರು, ಜ. 25 - ಇತ್ತೀಚೆಗೆ ನಡೆದ ಸಂಪುಟ ವಿಸ್ತರಣೆ ನಂತರ ದಿನಕ್ಕೊಂದು, ಗಂಟೆಗೊಂದು ಖಾತೆ ಬದಲಾವಣೆ ಮುಂದುವರೆದಿದೆ. ಸೋಮವಾರ ಒಂದೇ ದಿನ ಎರಡು ಬಾರಿ ಖಾತೆಗಳ ಮರು ಹಂಚಿಕೆ ಮಾಡುವ ಮೂಲಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಚಿವರನ್ನು ಸಂತೃಪ್ತಗೊಳಿಸುವ ಕಸರತ್ತು ನಡೆಸಿದ್ದಾರೆ.

ಮುಖ್ಯಮಂತ್ರಿಗೆ ರಾಜೀನಾಮೆ ಬೆದರಿಕೆ ಹಾಕಿದ ಜೆ.ಸಿ. ಮಾಧುಸ್ವಾಮಿ, ಕೊನೆಗೂ ತಾವು ಬಯಸಿದ ಸಣ್ಣ ನೀರಾವರಿ ಖಾತೆ ಗಿಟ್ಟಿಸಿದ್ದಾರೆ.

ದಿನದ ಆರಂಭದಲ್ಲಿ ಯಡಿಯೂರಪ್ಪ ಅವರು ಸಣ್ಣ ಪ್ರಮಾಣದ ಖಾತೆಗಳ ಪುನರ್ ಹಂಚಿಕೆ ಮಾಡಿದ್ದರು. ಇದು ವಾರದಲ್ಲೇ ಮೂರನೇ ಬದಲಾವಣೆಯಾಗಿತ್ತು. ಜೆ.ಸಿ. ಮಾಧುಸ್ವಾಮಿ, ಆನಂದ್ ಸಿಂಗ್ ಹಾಗೂ ಕೆ. ಸುಧಾಕರ್ ಅವರ ಖಾತೆಗಳಲ್ಲಿ ಬದಲಾವಣೆ ಮಾಡಲಾಗಿತ್ತು.

ಮಾಧುಸ್ವಾಮಿ ಅವರಿಗೆ ಮಧ್ಯಾಹ್ನ ಪ್ರವಾಸೋದ್ಯಮ ಹಾಗೂ ಪರಿಸರ ಇಲಾಖೆ ಗಳನ್ನು ನೀಡಲಾಗಿತ್ತು. ಇದರಿಂದ ಸಿಡಿದ್ದೆದ ಮಾಧುಸ್ವಾಮಿ, ರಾಜೀನಾಮೆಯ ಎಚ್ಚರಿಕೆ ನೀಡಿದರು ಎಂಬ ವರದಿಗಳು ಬಂದವು. ಅಂತಿಮವಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮಾಧುಸ್ವಾಮಿಗೆ ಸಿ.ಪಿ. ಯೋಗೇಶ್ವರ್ ಬಳಿ ಇದ್ದ ಸಣ್ಣ ನೀರಾವರಿ ಪಡೆದು ಮಾಧು ಸ್ವಾಮಿಗೆ ನೀಡಿದರು. ಇದರೊಂದಿಗೆ ಸೋಮವಾರದ ಬದಲಾವಣೆಗಳಿಗೆ ತೆರೆ ಬಿದ್ದಿದೆ.

ಜನವರಿ 21ರಂದು ಖಾತೆ ಬದಲಾವಣೆ ಮಾಡಿದಾಗಿನಿಂದಲೂ ಮಾಧುಸ್ವಾಮಿ ಅಸಮಾಧಾನಗೊಂಡಿದ್ದರು. ತಮ್ಮ ಆತ್ಮಗೌರವಕ್ಕೆ ತೀವ್ರ ಧಕ್ಕೆಯಾಗಿದೆ ಎಂದು ಮುಖ್ಯಮಂತ್ರಿ ಬಳಿ ಹೇಳಿದ್ದ ಅವರು, ಗಣರಾಜ್ಯೋತ್ಸವದ (2ನೇ ಪುಟಕ್ಕೆ)

# ಹರಿಹರದಲ್ಲಿ ಅನಾವರಣಗೊಂಡ ಪಂಚಮಸಾಲಿ ಸಮಾಜದ ಒಡಕು


**ಪ್ರತ್ಯೇಕ ಪತ್ರಿಕಾಗೋಷ್ಠಿಗಳಲ್ಲಿ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಹಾಗೂ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತಿನ ಜಟಾಪಟಿ**

**ಹರಪನಹಳ್ಳಿಯಲ್ಲಿ ಒಂದೇ ವೇದಿಕೆಯಲ್ಲಿ ಸಮಾಗಮಗೊಂಡ ಇಬ್ಬರೂ ಪೀಠಾಧಿಪತಿಗಳು.**

ದಾವಣಗೆರೆ, ಜ. 25- ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಅವರ ಪಾದಯಾತ್ರೆ ಹರಿಹರಕ್ಕೆ ಆಗಮಿಸಲು ಮೂರು ದಿನಗಳು ಬಾಕಿ ಇರುವಾಗಲೇ ಬೂದಿ ಮುಚ್ಚಿದ ಕೆಂಡದಂತಿದ್ದ ಪಂಚಮಸಾಲಿ ಸಮಾಜದಲ್ಲಿನ ಒಡಕು ಸೋಮವಾರ ಹರಿಹರದಲ್ಲಿ ಮತ್ತೆ ಅನಾವರಣಗೊಂಡಿದೆ.

ಹಗರಿಬೊಮ್ಮನಹಳ್ಳಿಯಲ್ಲಿ ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಸ್ವಾಗತ ಕಾರ್ಯಕ್ರಮದಲ್ಲಿ ಹರಿಹರದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿಗಳ (2ನೇ ಪುಟಕ್ಕೆ)

# ಕಂಬಾರ 'ಪದ್ಮಭೂಷಣ' ರಾಜ್ಯದ ಐವರಿಗೆ 'ಪದ್ಮ' ಪ್ರಶಸ್ತಿ




ಬೆಂಗಳೂರು, ಜ. 25 – ಕೇಂದ್ರ ಸರ್ಕಾರ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಿದ್ದು ಹೆಸರಾಂತ ವೈದ್ಯ ಡಾ. ಬಿ.ಎಂ. ಹೆಗ್ಡೆ ಅವರು ಪದ್ಮವಿಭೂಷಣ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ರಾಜ್ಯದ ಒಟ್ಟು ಐವರಿಗೆ ಈ ಬಾರಿ ಪದ್ಮ ಪ್ರಶಸ್ತಿಗಳು ದೊರೆತಿವೆ. ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಅವರು ಪದ್ಮಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಅವರು ಕಲೆಯಲ್ಲಿ ಮಾಡಿದ ಸಾಧನೆಗಾಗಿ, ಸಾಹಿತ್ಯ ಕೃಷಿಗಾಗಿ ರಂಗಸ್ವಾಮಿ ಲಕ್ಷ್ಮಿನಾರಾಯಣ ಕಶ್ಯಪ್ ಹಾಗೂ ಕ್ರೀಡೆಗಾಗಿ ಕೆ.ವೈ. ವೆಂಕಟೇಶ್ ಅವರು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದಿಸಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಇಡೀ ರಾಜ್ಯ ನಿಮ್ಮ ಸಾಧನೆಗೆ ಹೆಮ್ಮೆಪಡುತ್ತಿದೆ ಎಂದಿದ್ದಾರೆ.

# ಗಾಯಕ ಎಸ್‌ಪಿಬಿ, ವೈದ್ಯ ಬಿ.ಎಂ. ಹೆಗಡೆ ಜಪಾನ್ ಮಾಜಿ ಪ್ರಧಾನಿ ಅಬೆಗೆ 'ಪದ್ಮವಿಭೂಷಣ'

**119 ಸಾಧಕರಿಗೆ ಕೇಂದ್ರ ಸರ್ಕಾರದ ಪದ್ಮ ಪ್ರಶಸ್ತಿ**

ನವದೆಹಲಿ, ಜ. 25 – ಜಪಾನಿನ ಮಾಜಿ ಪ್ರಧಾನ ಮಂತ್ರಿ ಶಿಂಜೊ ಅಬೆ, ದಿವಂಗತ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂ ಹಾಗೂ ವೈದ್ಯ ಡಾ. ಬಿ.ಎಂ. ಹೆಗಡೆ ಸೇರಿದಂತೆ ಏಳು ಜನರು ಈ ಬಾರಿ ಪದ್ಮವಿಭೂಷಣ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಕೇಂದ್ರ ಸರ್ಕಾರ ಗಣರಾಜ್ಯೋ ತ್ಸವದ ಮುನ್ನಾ ದಿನ ಪದ್ಮ ಪ್ರಶಸ್ತಿ ಗಳನ್ನು ಪ್ರಕಟಿಸಿದೆ. ಒಟ್ಟು 119 ಪದ್ಮ





ಪ್ರಶಸ್ತಿಗಳನ್ನು ಗೃಹ ಸಚಿವಾಲಯ ಪ್ರಕಟಿಸಿದೆ. ಇದರಲ್ಲಿ ಏಳು ಪದ್ಮ ವಿಭೂಷಣ, 10 (5ನೇ ಪುಟಕ್ಕೆ)

# ಮೀಸಲಾತಿ ವಿಚಾರ ಶಾಂತಿ, ಸಹನೆ ಮೀರಿದೆ, ರಾಣಿ ಚನ್ನಮ್ಮನಂತೆ ಹೋರಾಟ ಅನಿವಾರ್ಯ



**ಬಸವ ಜಯ ಮೃತ್ಯುಂಜಯ ಶ್ರೀ**

ಹರಪನಹಳ್ಳಿ, ಜ. 25 - ಲಿಂಗಾಯತ ಪಂಚಮಸಾಲಿ ಸಮಾಜವನ್ನು ಮೀಸಲಾತಿ ಸೇರ್ಪಡೆಗೊಳಿಸುವ ವಿಚಾರದಲ್ಲಿ ಸರ್ಕಾರ ಮೀನಾ ಮೇಷ ಎಣಿಸುತ್ತಿದ್ದು ಶಾಂತಿ, ಸಹನೆ ಮೀರಿದೆ. ಇನ್ನೇನಿದ್ದರೂ ಕಿತ್ತೂರು ರಾಣಿ ಚನ್ನಮ್ಮನಂತೆ ಹೋರಾಟ ಅನಿವಾರ್ಯವಾಗಿದೆ ಎಂದು ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಲಿಂಗಾಯತ ಪಂಚಮಸಾಲಿ ಮಕ್ಕಳ ಶಿಕ್ಷಣ, ಉದ್ಯೋಗಕ್ಕಾಗಿ 2ಎ ಮೀಸಲಾತಿಗಾಗಿ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ಹಾಗೂ ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿಗೆ ಸೇರ್ಪಡೆಗೊಳಿಸುವ ಹಕ್ಕೊತ್ತಾಯಿಸಿ ಕೂಡಲ ಸಂಗಮದ ಲಿಂಗಾಯತ ಧಾರ್ಮಿಕ ಪೀಠದಿಂದ ಬೆಂಗಳೂರಿನ ವಿಧಾನಸೌಧದವರೆಗೂ ಪಂಚಲಕ್ಷ ಹೆಜ್ಜೆಗಳ ಬೃಹತ್ ಐತಿಹಾಸಿಕ ಪಾದಯಾತ್ರೆಯ ನಿಮಿತ್ತ ಜರುಗಿದ ಜನ ಜಾಗೃತಿ ಸಮಾವೇಶದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಈ ದೇಶಕ್ಕೆ ಲಿಂಗಾಯತ ಪಂಚಮಸಾಲಿ ಸಮಾಜ ತನ್ನದೇ ಆದ ಕೊಡುಗೆ ನೀಡಿದ್ದು, ಸಂವಿಧಾನ ಬದ್ದವಾದ 2ಎ ಮೀಸಲಾತಿಯನ್ನು ರಾಜ್ಯ ಸರ್ಕಾರ ನೀಡಬೇಕು ಎಂದರು.

ಈ ದೇಶದ ಇತಿಹಾಸದಲ್ಲಿ ಹೋರಾಟ ಮಾಡದೇ ಯಾವುದೇ ಹಕ್ಕು ದೊರೆಯುವುದಿಲ್ಲ. ಈಗಾಗಲೇ ಮೀಸಲಾತಿ ವಿಚಾರವಾಗಿ ವಾಲ್ಮೀಕಿ ನಾಯಕ ಸಮಾಜ, ಹಾಲುಮತ ಕುರುಬ ಸಮಾಜಗಳು ಹೋರಾಟ ಮಾಡುತ್ತಿದ್ದು ಬಹು ಸಂಖ್ಯಾತ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಹೋರಾಟದ ದಾರಿ ಅನಿವಾರ್ಯವಾಗಿದ್ದು, ಹರಿಹರ ಹಾಗೂ ಕೂಡಲ ಸಂಗಮ ಪೀಠಗಳು ಎರಡು ಕಣ್ಣುಗಳಾಗಿ ಕೆಲಸ ಮಾಡುತ್ತಿವೆ. ನಮ್ಮದು ಸರ್ಕಾರದ ವಿರುದ್ದ ಪ್ರತಿಭಟನೆ ಅಲ್ಲ, ಹಕ್ಕುಗಳನ್ನು ಪಡೆದುಕೊಳ್ಳಲು ನಮ್ಮ ಪ್ರತಿಭಟನೆ ಎಂದು ಹೇಳಿದರು.

ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ (2ನೇ ಪುಟಕ್ಕೆ)

# ಕೇಂದ್ರದ 3 ಕಾಯ್ದೆಗಳು ಪ್ರತಿ ಪ್ರಜೆಗೂ ಮಾರಕ

## ರೈತರ ಹೋರಾಟವನ್ನು ಎಲ್ಲರೂ ಬೆಂಬಲಿಸಬೇಕು: ಡಾ.ಸಿದ್ದನಗೌಡ ಪಾಟೀಲ್




**ಖಾಸಗಿ ಕಂಪನಿಗಳಿಂದ ಒಕ್ಕಲುತನ, ರೈತರು ಬೀದಿಗೆ**

ದೇಶದಲ್ಲಿ ಶೇ.85ರಷ್ಟು ಸಣ್ಣ ಹಾಗೂ ಅತಿ ಸಣ್ಣ ರೈತರಿದ್ದಾರೆ. ದೇಶದ ಶೇ.53ರಷ್ಟು ಭೂಮಿ ಈ ರೈತರ ಕೈಯ್ಯಲ್ಲಿದೆ. ಅದನ್ನು ಅಂಬಾನಿ, ಅದಾನಿಯಂತಹ ಉದ್ಯಮಿಗಳು ಪಡೆದು ದೊಡ್ಡ ಹಿಡುವಳಿ ಮಾಡುವ ಆಲೋಚನೆ ಹೊಂದಿದ್ದಾರೆ. ಉಳುವವನೇ ಭೂಮಿಯ ಒಡೆಯ ಎಂಬ ಹೋರಾಟದ ಮೂಲಕ 1974ರಲ್ಲಿ 28 ಲಕ್ಷ ಕುಟುಂಬಗಳು ಸ್ವಂತ ಭೂಮಿ ಪಡೆದವು. ಆದರೆ ಈಗ ಆ ಎಲ್ಲಾ ವಾಪಾಸ್ ಪಡೆಯುವಂತಹ ಕಾನೂನು ತರಲಾಗುತ್ತಿದೆ. ಕಂಪನಿಗಳು ಒಕ್ಕಲುತನ ಮಾಡಿದರೆ ಸಣ್ಣ ರೈತರು ಬೀದಿಗೆ ಬೀಳುತ್ತಾರೆ ಎಂದು ಡಾ. ಸಿದ್ದನಗೌಡ ಪಾಟೀಲ ಆತಂಕ ವ್ಯಕ್ತಪಡಿಸಿದರು.

ದಾವಣಗೆರೆ, ಜ. 24- ರೈತರ ಉತ್ಪಾದನೆ, ಮಾರಾಟ ಹಾಗೂ ಸಂಗ್ರಹಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ಮೂರು ಕಾಯ್ದೆಗಳು ಕೇವಲ ರೈತನಿಗಷ್ಟೇ ಅಲ್ಲ, ಇಡೀ ದೇಶದ ಪ್ರಜೆಗಳಿಗೂ ಮಾರಕವಾಗಿವೆ. ಈ ಹಿನ್ನೆಲೆಯಲ್ಲಿ ದೇಶದ ಪ್ರತಿ ಪ್ರಜೆಯೂ ರೈತರ ಹೋರಾಟವನ್ನು ಬೆಂಬಲಿಸಬೇಕಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಮಾಜಿ ರಾಜ್ಯ ಕಾರ್ಯದರ್ಶಿಗಳು, ಹೊಸತು ಪತ್ರಿಕೆ ಸಂಪಾದಕರೂ ಆದ ಡಾ. ಸಿದ್ದನಗೌಡ ಪಾಟೀಲ ಕರೆ ನೀಡಿದರು.

ಅಖಿಲ ಭಾರತ ಕಿಸಾನ್ ಸಭಾದ ಜಿಲ್ಲಾ ಮಂಡಳಿಯಿಂದ ನಗರದ ಕಾಂ.ಪಂಪಾವತಿ ಭವನದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ 'ಜಿಲ್ಲಾ ಮಟ್ಟದ ರೈತ ಪ್ರತಿನಿಧಿ ಸಮಾವೇಶ' ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಒಕ್ಕೂಟದ ವ್ಯವಸ್ಥೆ ಅಪಾಯಕಾರಿ ಸ್ಥಿತಿಯಲ್ಲಿದ್ದು, ಎರಡೂ ವ್ಯವಸ್ಥೆಗಳ ಉಳಿವಿಗಾಗಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಎಲ್ಲರೂ ಬೆಂಬಲ ನೀಡಬೇಕಿದೆ. ದೆಹಲಿಯಲ್ಲಿ ನಡೆಯುತ್ತಿರುವ ರೈತರ (2ನೇ ಪುಟಕ್ಕೆ)

# ವೇಣುಗೋಪಾಲ ರೆಡ್ಡಿ ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ



ದಾವಣಗೆರೆ,ಜ.25- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾಗಿ ಜಗಳೂರಿನ ಹಿರಿಯ ಸಹಕಾರಿ ಧುರೀಣ ಜೆ.ಎಸ್. ವೇಣುಗೋಪಾಲ ರೆಡ್ಡಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ಅಧ್ಯಕ್ಷರಾಗಿದ್ದ ಜೆ.ಆರ್. ಷಣ್ಮುಖಪ್ಪ ಅವರು ನೀಡಿದ್ದ ರಾಜೀನಾಮೆಯಿಂದಾಗಿ ತೆರವಾದ ಸ್ಥಾನಕ್ಕೆ ನಗರದ ಡಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಇಂದು ನಡೆದ ಬ್ಯಾಂಕಿನ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಚಿತ್ರದುರ್ಗ ಮತ್ತು ದಾವಣಗೆರೆ ಅವಿಭಜಿತ ಜಿಲ್ಲೆಯ ಸಿಡಿಸಿಸಿ ಬ್ಯಾಂಕ್ ಒಂದು ಅವಧಿಗೆ ನಿರ್ದೇಶಕರಾಗಿದ್ದ ವೇಣುಗೋಪಾಲ ರೆಡ್ಡಿ ಅವರು, ದಾವಣಗೆರೆ ನೂತನ ಜಿಲ್ಲೆ ರಚನೆ ನಂತರ 2002 ರಲ್ಲಿ ಸ್ಥಾಪನೆಗೊಂಡ (5ನೇ ಪುಟಕ್ಕೆ)

# ದೇಶದಲ್ಲಿ 2 ಪ್ಲಾಸ್ಟಿಕ್ ಪಾರ್ಕ್ ಅಭಿವೃದ್ಧಿ

ಬೆಂಗಳೂರು, ಜ.25 - ಸ್ವಾವಲಂಬಿ ಭಾರತ ಯೋಜನೆಯಡಿ ದೇಶದ ಪ್ಲಾಸ್ಟಿಕ್ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ದೇಶದಲ್ಲಿ ಎರಡು



ಪ್ಲಾಸ್ಟಿಕ್ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ. ವಿ. ಸದಾನಂದಗೌಡ ತಿಳಿಸಿದ್ದಾರೆ.

ಕರ್ನಾಟಕದ ಕರಾವಳಿ ಮಂಗಳೂರು ಹಾಗೂ ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ತಲಾ ಒಂದು ಪ್ಲಾಸ್ಟಿಕ್ ಪಾರ್ಕ್ ಸ್ಥಾಪಿಸಲು ಕೇಂದ್ರ ರಾಸಾಯನಿಕ ಇಲಾಖೆಯ ಯೋಜನೆ ಚಾಲನಾ ಸಮಿತಿ ಸಭೆಯಲ್ಲಿ ತಾತ್ವಿಕ ಒಪ್ಪಿಗೆ ನೀಡಲಾಗಿದೆ ಎಂದರು.

ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಸೂಚಿಸಲಾಗಿದೆ, ಆರು ತಿಂಗಳೊಳಗೆ ಅಂತಿಮ ಒಪ್ಪಿಗೆ ನೀಡಿ ಯೋಜನೆಯ ಆರಂಭಕ್ಕೆ ಕ್ರಮ ಕೈಗೊಳ್ಳಲಾಗುವುದು. ಪ್ಲಾಸ್ಟಿಕ್ ಪಾರ್ಕ್‌ನಲ್ಲಿ ಪ್ಲಾಸ್ಟಿಕ್ ಸಂಬಂಧಿತ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲ ಆಧುನಿಕ ತಂತ್ರಜ್ಞಾನ ಸೌಕರ್ಯಗಳೂ (2ನೇ ಪುಟಕ್ಕೆ)

# ಸಿಕ್ಕಿಂನ ಲಕು ಲಾದಲ್ಲಿ ಭಾರತ-ಚೀನಾ ಪಡೆಗಳ ನಡುವೆ ಸಣ್ಣ ಚಕಮಕಿ

ನವದೆಹಲಿ, ಜ. 25 – ಭಾರತ ಹಾಗೂ ಚೀನಾ ಪಡೆಗಳು ಉತ್ತರ ಸಿಕ್ಕಿಂನ ಲಕು ಲಾ ಪ್ರದೇಶದಲ್ಲಿ ಜನವರಿ 20ರಂದು ಸಣ್ಣ ಚಕಮಕಿ ನಡೆಸಿದ್ದವು. ಈ ವಿಷಯವನ್ನು ಸ್ಥಳೀಯ ಕಮಾಂಡರ್ ಹಂತದಲ್ಲಿ ಶಿಷ್ಟಾಚಾರಗಳ ಪ್ರಕಾರ ಬಗೆಹರಿಸಿಕೊಳ್ಳಲಾಗಿದೆ ಎಂದು ಭಾರತೀಯ ಸೈನ್ಯ ತಿಳಿಸಿದೆ.

ಲಡಾಖ್‌ನಲ್ಲಿ ಕಳೆದ ವರ್ಷ ಮೇ 5ರಿಂದ ಸುದೀರ್ಘ ಅವಧಿಯ ಸೈನಿಕ ಬಿಕ್ಕಟ್ಟು ಉಂಟಾಗಿರುವ ನಡುವೆ ಸಿಕ್ಕಿಂನಲ್ಲಿ ಈ ಬೆಳವಣಿಗೆಯಾಗಿದೆ.

ಲಕು ಲಾ ಪ್ರದೇಶದಲ್ಲಿ ಜನವರಿ 20ರಂದು ಸಣ್ಣ ಮುಖಾಮುಖಿ ಉಂಟಾಗಿತ್ತು. ಈ ವಿಷಯವನ್ನು ಸ್ಥಳೀಯ ಕಮಾಂಡರ್‌ಗಳ ಮೂಲಕ (2ನೇ ಪುಟಕ್ಕೆ)

# ದೇಶದಲ್ಲಿ ವಾಟ್ಸ್‌ಆಪ್ ಪಕ್ಷಪಾತ

## ಯುರೋಪಿಗೊಂದು ನಿಯಮ, ಭಾರತಕ್ಕೊಂದು ನಿಯಮ ಎಂದು ಹೈಕೋರ್ಟ್‌ಗೆ ತಿಳಿಸಿದ ಕೇಂದ್ರ

ನವದೆಹಲಿ, ಜ. 25 – ವಾಟ್ಸ್‌ಆಪ್‌ನ ಪರಿವರ್ತಿತ ಖಾಸಗಿತನದ ನಿಯಮಗಳಿಗೆ ಸಂಬಂಧಿಸಿದಂತೆ ಭಾರತೀಯರನ್ನು ಯುರೋಪಿನವರಿಗಿಂತ ಭಿನ್ನವಾಗಿ ಪರಿಗಣಿಸಲಾಗುತ್ತಿದೆ. ಇದು ತನಗೆ ಕಳವಳಕಾರಿ ಎಂದು ದೆಹಲಿ ಹೈಕೋರ್ಟ್‌ನಲ್ಲಿ ಕೇಂದ್ರ ಸರ್ಕಾರ ಅರ್ಜಿ ದಾಖಲಿಸಿದೆ.

ಭಾರತೀಯ ಬಳಕೆದಾರರನ್ನು ಏಕಪಕ್ಷೀಯವಾಗಿ ಹೊಸ ನಿಯಮಗಳಿಗೆ ಸಿಲುಕಿಸಲಾಗುತ್ತಿದೆ. ಈ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಕೇಂದ್ರ (5ನೇ ಪುಟಕ್ಕೆ)




# ಎರಡು ಬಾರಿ ಖಾತೆ ಮರು ಹಂಚಿಕೆ!

**(1ನೇ ಪುಟದಿಂದ)** ಧ್ವಜಾರೋಹಣದ ನಂತರ ರಾಜೀನಾಮೆ ನೀಡುವುದಾಗಿ ತಿಳಿಸಿದ್ದರು ಎಂದು ಮೂಲಗಳು ಹೇಳಿವೆ.

ಇದರಿಂದಾಗಿ ಸೋಮವಾರ ರಾತ್ರಿಯೇ ಖಾತೆ ಬದಲಾವಣೆ ಮಾಡಿದ ಯಡಿಯೂರಪ್ಪ, ಮಾಧುಸ್ವಾಮಿಗೆ ಸಣ್ಣ ನೀರಾವರಿ ಖಾತೆ ನೀಡಿದ್ದಾರೆ. ಇದರಿಂದ ಸದ್ಯಕ್ಕೆ ಮಾಧುಸ್ವಾಮಿ ರಾಜೀನಾಮೆಗೆ ಮುಂದಾಗುವ ಸಾಧ್ಯತೆ ತಪ್ಪಿದಂತಾಗಿದೆ.

ಮಾಧುಸ್ವಾಮಿ ಬಳಿ ಈ ಹಿಂದೆ ಕಾನೂನು ಹಾಗೂ ಸಣ್ಣ ನೀರಾವರಿ ಖಾತೆಗಳಿದ್ದವು. ಅದನ್ನು ಪಡೆದು ವೈದ್ಯಕೀಯ ಶಿಕ್ಷಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡಲಾಗಿತ್ತು. ಆದರೆ, ಮರು ದಿನವೇ ಇನ್ನೊಂದು ಬದಲಾವಣೆ ಮಾಡಿ ಅವರ ಬಳಿ ಇದ್ದ ವಕ್ಫ್ ಖಾತೆ ಕೊಟ್ಟು ಕನ್ನಡ ಮತ್ತು ಸಂಸ್ಕೃತಿ ಖಾತೆ ಪಡೆಯಲಾಗಿತ್ತು. ಜೊತೆಗೆ ಸಚಿವ ಡಾ. ಸುಧಾಕರ್ ಒತ್ತಡಕ್ಕೆ ಮಣಿದ ಮುಖ್ಯಮಂತ್ರಿ, ಮಾಧುಸ್ವಾಮಿ ಅವರಿಗೆ ನೀಡಿದ್ದ ವೈದ್ಯಕೀಯ ಶಿಕ್ಷಣ ಖಾತೆಯನ್ನು ಕಸಿದು, ಸುಧಾಕರ್‌ಗೆ ನೀಡಿದ್ದರು.

ಸೋಮವಾರ ರಾತ್ರಿಯ ಈ ಕಿರು ಬದಲಾವಣೆಯಿಂ ದಾಗಿ ಮಾಧುಸ್ವಾಮಿ ಬಳಿ ಸಣ್ಣ ನೀರಾವರಿ ಉಳಿದುಕೊಂ ಡಿದೆ. ನೀರಾವರಿ ಕಳೆದುಕೊಂಡ ಸಿ.ಪಿ ಯೋಗೇಶ್ವರ್‌ಗೆ ಪ್ರವಾಸೋದ್ಯಮ ಹಾಗೂ ಪರಿಸರ ಇಲಾಖೆ ನೀಡಲಾಗಿದೆ.

ಈ ನಡುವೆ, ಆನಂದ್ ಸಿಂಗ್ ಸಹ ಅಸಮಾಧಾನಗೊಂಡಿದ್ದಾರೆ. ಅವರ ಖಾತೆಯಲ್ಲಿ ಎರಡನೇ ಬಾರಿ ಬದಲಾವಣೆ ಮಾಡಿ ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ವಕ್ಫ್ ಕೊಡಲಾಗಿತ್ತು.

ವಕ್ಫ್ ಖಾತೆ ತೆಗದುಕೊಂಡು ಏನು ಮಾಡಲಿ? ನನ್ನನ್ನು ಸಚಿವ ಸ್ಥಾನದಿಂದ ಬಿಟ್ಟುಬಿಡಿ ಎಂದು ಸಿಂಗ್ ಮುಖ್ಯಮಂತ್ರಿ ಯಡಿಯೂರಪ್ಪ ಬಳಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ನಡುವೆ ಪತ್ರಕರ್ತರೊಂದಿಗೆ ಮಾತನಾಡಿರುವ ಸಿಂಗ್, ನಾನು ಮುಖ್ಯಮಂತ್ರಿಯವರ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ. ನನ್ನ ಬಳಿ ಇರುವ ಖಾತೆಗಳನ್ನೇ ಬೇರೆ ಆಕಾಂಕ್ಷಿಗಳಿಗೆ ಕೊಡಿ. ನಾನು ಸಾಮಾನ್ಯ ಶಾಸಕನಾಗಿ ಕಾರ್ಯ ನಿರ್ವಹಿಸುತ್ತೇನೆ. ಮುಖ್ಯಮಂತ್ರಿಯವರು ಬಳ್ಳಾರಿ ಜಿಲ್ಲೆ ವಿಭಜಿಸಿ ವಿಜಯನಗರ ಜಿಲ್ಲೆ ರೂಪಿಸಿ ಕೊಟ್ಟಿರುವುದೇ ಸಾಕು ಎಂದಿದ್ದಾರೆ.

ಈ ಮಧ್ಯೆ, ಮೂಲ ಬಿಜೆಪಿ ಶಾಸಕರಲ್ಲಿ ಕೆಲವರು, ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹಾಗೂ ಮುಖ್ಯಮಂತ್ರಿ ಅವರ ಕೈ ಬಲಪಡಿಸಲು ನಾಳೆ ಸಂಜೆ ಖಾಸಗಿ ಹೋಟೆಲ್ ಒಂದರಲ್ಲಿ ಸಭೆ ಕರೆದಿದ್ದಾರೆ.

ಶಾಸಕ ತಿಪ್ಪಾರೆಡ್ಡಿ, ಎಂ.ಪಿ. ರೇಣುಕಾಚಾರ್ಯ, ರಾಜೂಗೌಡ ಅವರು ಶಾಸಕರಾದ ಪೂರ್ಣಿಮಾ ನೇತೃತ್ವದಲ್ಲಿ ಸಭೆ ನಡೆಸಲಿದ್ದಾರೆ.

ಸುಧಾಕರ್ ಒಬ್ಬರೇ ಇಲಾಖೆ ನೋಡಿಕೊಳ್ಳಲು ಅರ್ಹರಾ? ಯಾವ ಶಾಸಕರಿಗೆ ನೀಡಿದರೂ ನಿಭಾಯಿಸುತ್ತಾರೆ, ಒತ್ತಡಗಳಿಗೆ ಮಣಿದು ಖಾತೆ ಕಸಿದರೆ ಹೇಗೆ? ಎಂದವರು ಪ್ರಶ್ನಿಸಿದ್ದಾರೆ. ನಾಳೆ ಸಭೆಯಲ್ಲಿ ಎಲ್ಲಾ ವಿದ್ಯಮಾನಗಳ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಈ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿದ ಯುವಜನ ಸೇವಾ ಖಾತೆ ಸಚಿವ ನಾರಾಯಣ ಗೌಡ, ಬಿಜೆಪಿ ಸರ್ಕಾರ ಅಧಿ ಕಾರಕ್ಕೆ ತರಲು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಹೊರಬಂದ ಶಾಸಕರನ್ನು ಒಂದುಗೂಡಿಸುವ ಕೆಲಸ ಮಾಡುವುದಾಗಿ ತಿಳಿಸಿದ್ದಾರೆಯೇ ಹೊರತು, ಮುಂದೇನು ಮಾಡುವಿರಿ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಲಿಲ್ಲ.

## ನಗರಕ್ಕೆ ನಾಳೆ ಕೈಗಾರಿಕಾ ಸಚಿವ ಶೆಟ್ಟರ್

ದಾವಣಗೆರೆ ಜ. 25 - ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವ ಜಗದೀಶ ಶೆಟ್ಟರ್ ಅವರು ನಾಡಿದ್ದು ದಿನಾಂಕ 27 ರ ಬುಧವಾರ ನಗರಕ್ಕೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 9 ಗಂಟೆಗೆ ಹುಬ್ಬಳ್ಳಿಯಿಂದ ಹೊರಟು 11 ಗಂಟೆಗೆ ನಗರಕ್ಕೆ ಆಗಮಿಸಿ, ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಅಧಿಕಾರಿ ಗಳೊಂದಿಗೆ ಹಾಗೂ ಕೈಗಾರಿಕೋದ್ಯಮಿ ಗಳೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 2 ಗಂಟೆಗೆ ನಗರದಿಂದ ನಿರ್ಗಮಿಸುವರು.

# ಜಗಳೂರು : 27 ರಂದು ಜನಸ್ಪಂದನ



ಜಗಳೂರು, ಜ.25 - ಇಲ್ಲಿನ ಗುರುಭವನದ ಆವರಣದಲ್ಲಿ ನಾಡಿದ್ದು ದಿನಾಂಕ 27ರ ಬುಧವಾರ ಬೃಹತ್ ಜನಸ್ಪಂದನ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಸಾವಿರಾರು ಫಲಾನುಭವಿಗಳಿಗೆ ಸರ್ಕಾರದ ಸೌಲತ್ತುಗಳನ್ನು ವಿತರಿಸಲಾಗುವುದು ಎಂದು ಶಾಸಕರು ಹಾಗೂ ಎಸ್.ಟಿ. ಅಭಿವೃದ್ದಿ ನಿಗಮದ ಅಧ್ಯಕ್ಷರೂ ಆದ ಎಸ್.ವಿ ರಾಮಚಂದ್ರ ತಿಳಿಸಿದರು.

ಗುರುಭವನ ಆವರಣದಲ್ಲಿ ವಿವಿಧ ಇಲಾಖೆಗಳ ಅನುಷ್ಠಾನ ಅಧಿಕಾರಿಗಳೊಂದಿಗೆ ಇಂದು ಸಭೆ ನಡೆಸಿದ ಶಾಸಕರು, ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಕ್ತ ಸಲಹೆ ಸೂಚನೆ ನೀಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಸಿದ್ದೇಶ್ವರ, ಡಿಸಿ ಮಹಾಂತೇಶ್ ಬೀಳಗಿ ಸೇರಿದಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ಭಾಗವಹಿಸಲಿದ್ದಾರೆ.

ವಿವಿಧ ಇಲಾಖೆಗಳಿಗೆ ಸೇರಿದ ರಸ್ತೆ, ಕಟ್ಟಡಗಳು ಸೇರಿದಂತೆ ಹಲವಾರು ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ನಡೆಯಲಿದೆ. ಪರಿಶಿಷ್ಟ ವರ್ಗದ ಅಭಿವೃದ್ದಿ ನಿಗಮದಿಂದ ಮಂಜೂ ರಾಗಿರುವ 176 ಬೋರ್‌ವೆಲ್‌ಗಳು 23 ಜನಕ್ಕೆ ಕಾರುಗಳು, 223 ಜನರಿಗೆ ನೇರ ಸಾಲ ಹಾಗೂ 36 ಮಹಿಳಾ ಗುಂಪುಗಳಿಗೆ ಧನ ಸಹಾಯವನ್ನು ಅರ್ಹ ಫಲಾನುಭವಿಗಳಿಗೆ ವಿತರಿಸಲಾಗುವುದು ಎಂದು ಶಾಸಕರು ತಿಳಿಸಿದರು.

ಸಭೆಯಲ್ಲಿ ತಹಶೀಲ್ದಾರ್ ಡಾ. ನಾಗವೇಣಿ, ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಾನಾಯ್ಕ್ ಲೋಕೋಪಯೋಗಿ ಇಲಾಖೆ, ಎ.ಇ.ಇ ರುದ್ರಪ್ಪ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ. ಮಹೇಶ್, ಬಿ.ಇ.ಓ, ವೆಂಕಟೇಶ್, ಸಿಪಿಐ ದುರುಗಪ್ಪ, ಪ.ಪಂ. ಅಧ್ಯಕ್ಷ ಆರ್.ತಿಪ್ಪೇಸ್ವಾಮಿ, ಪ.ಪಂ. ಸದಸ್ಯರು, ವಿವಿಧ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

## ಮಲೇಬೆನ್ನೂರು: ಮತದಾರರ ದಿನಾಚರಣೆ



ಮಲೇಬೆನ್ನೂರು, ಜ.25- ಇಲ್ಲಿನ ಪುರಸಭೆ, ನಾಡಕಛೇರಿ ಮತ್ತು ಸಮೂಹ ಸಂಪನ್ಮೂಲ ಕೇಂದ್ರದ ವತಿಯಿಂದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಪಟ್ಟಣದಲ್ಲಿ ಸೋಮವಾರ ಜಾಗೃತಿ ಜಾಥಾ ನಡೆಸಲಾಯಿತು.

ಇದಕ್ಕೆ ಮುನ್ನ ಪುರಸಭೆ ಆವರಣದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಪುರಸಭೆ ಅಧ್ಯಕ್ಷೆ ನಾಹೀದಾ ಅಂಜುಂ ಸೈಯದ್ ಇಸ್ರಾರ್, ಉಪಾಧ್ಯಕ್ಷೆ ಅಂಜಿನಮ್ಮ ವಿಜಯಕುಮಾರ್, ಉಪತಹಶೀಲ್ದಾರ್ ಆರ್. ರವಿ, ಪುರಸಭೆ ಸದಸ್ಯರಾದ ಬಿ. ಸುರೇಶ್, ಎ. ಆರೀಫ್‌ಅಲಿ, ಕೆ.ಜಿ. ಲೋಕೇಶ್, ಪರಿಸರ ಇಂಜಿನಿಯರ್ ಉಮೇಶ್, ಆರೋಗ್ಯಾಧಿಕಾರಿ ಗುರುಪ್ರಸಾದ್, ನವೀನ್ ಮತ್ತಿತರರು ಜಾಥಾದಲ್ಲಿ ಭಾಗವಹಿಸಿದ್ದರು.

## ವೀರಶೈವ ಮಹಾಸಭಾದ ಚುನಾವಣೆಗೆ ಕೊಟ್ರಯ್ಯ ಸಹಾಯಕ ಚುನಾವಣಾಧಿಕಾರಿ



ಹರಪನಹಳ್ಳಿ, ಜ.25- ಅಖಿಲ ಭಾರತ ವೀರಶೈವ ಮಹಾಸಭಾ ಚುನಾವಣೆಯ ಹರಪನಹಳ್ಳಿ ತಾಲ್ಲೂಕು ಘಟಕದ ಸಹಾಯಕ ಚುನಾವಣಾಧಿಕಾರಿಯಾಗಿ ಸ್ಥಳೀಯ 7ನೇ ವಾರ್ಡ್‌ನ ಬಂಗ್ಲೇರ ಓಣಿಯ ಮೇಗಳಪೇಟೆ ನಿವಾಸಿ ನಿವೃತ್ತ ಮುಖ್ಯಶಿಕ್ಷಕ ಸಿ.ಎಂ. ಕೊಟ್ರಯ್ಯ ಅವರನ್ನು ನೇಮಕ ಮಾಡಲಾಗಿದೆ.

**ಹರಪನಹಳ್ಳಿ**

ಇದೇ ದಿನಾಂಕ 28 ರ ಬೆಳಿಗ್ಗೆ 10.30 ರಿಂದ ಫೆಬ್ರವರಿ 2 ರ ಮಧ್ಯಾಹ್ನ 3 ಗಂಟೆಯವರೆಗೆ ನಾಮಪತ್ರ ಸಲ್ಲಿಸಲು ಅವಕಾಶವಿದೆ. ಫೆ. 3 ರಂದು ನಾಮಪತ್ರ ಪರಿಶೀಲನೆ, ಫೆ.6 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದ್ದು, ಕೆಸಿಎ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಫೆಬ್ರವರಿ 14ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಮತದಾನ ಆರಂಭವಾಗಿ ಸಂಜೆ 4 ಗಂಟೆಗೆ ಮುಕ್ತಾಯವಾಗಲಿದೆ. ಮತದಾನದ ಬಳಿಕ ಮತ ಎಣಿಕೆ ಕಾರ್ಯ ನಡೆಯಲಿದೆ.

ಸಹಾಯಕ ಚುನಾವಣಾಧಿಕಾರಿಗಳು ಮೇಲ್ಕಂಡ ಪ್ರೌಢಶಾಲೆಯಲ್ಲಿ ಲಭ್ಯವಿರುತ್ತಾರೆ ಎಂದು ಚುನಾವಣಾಧಿಕಾರಿ ಹೆಚ್.ಎಂ. ರೇಣುಕ ಪ್ರಸನ್ನ ತಿಳಿಸಿದ್ದಾರೆ.

# ಪಂಚಮಸಾಲಿ ಸಮಾಜದ ಒಡಕು

**(1ನೇ ಪುಟದಿಂದ)** ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಇದು ಹರಿಹರ ಪಂಚಮಸಾಲಿ ಮಠದ ಕೆಲವು ಭಕ್ತರನ್ನು ಕೆರಳಿಸಿತ್ತು.

ಸೋಮವಾರ ಬೆಳಿಗ್ಗೆ ಹರಿಹರದ ಹೊರ ವಲಯದಲ್ಲಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಪತ್ರಿಕಾಗೋಷ್ಠಿ ನಡೆಸಿ, ಹಗರಿಬೊಮ್ಮನಹಳ್ಳಿಯಲ್ಲಿ ಶಿವಶಂಕರ್ ಅವರು ಆಡಿರುವ ಮಾತುಗಳನ್ನು ತೀವ್ರವಾಗಿ ಖಂಡಿಸಿದ್ದಾರೆ.

ಸಮಾಜದ ಒಳಿತಿಗಾಗಿ ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಸಮಂಜಸವಾಗಿದೆ. ಪಾದ ಯಾತ್ರೆ ಹರಪನಹಳ್ಳಿ ಪ್ರವೇಶಿಸಿದಾಗ ಸ್ವಾಗತಿಸಿ, ಬೆಂಬಲಿಸುವುದಾಗಿ ಹೇಳಿದ್ದರು. ಪಾದಯಾತ್ರೆಯ ಲಾಭವನ್ನು ತಮ್ಮ ರಾಜಕೀಯಕ್ಕೆ ಬಳಸಿಕೊಳ್ಳಬಾರದು ಎಂದು ಶಿವಶಂಕರ್ ಅವರಿಗೆ ಸೂಚ್ಯವಾಗಿ ಹೇಳಿದರು.

ಶ್ರೀಪೀಠದಲ್ಲಿ ಶ್ರೀಗಳು ಇದ್ದರೂ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿರಲಿಲ್ಲ. ಅಲ್ಲದೆ, ಟ್ರಸ್ಟ್‌ನ ಅಧ್ಯಕ್ಷರು, ಸದಸ್ಯರ ಅನುಪಸ್ಥಿತಿಯಲ್ಲಿಯೇ ಪತ್ರಿಕಾಗೋಷ್ಠಿ ನಡೆಯಿತು.

ಇತ್ತ ಸಂಜೆ 4 ಗಂಟೆಗೆ ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್ ಹರಿಹರದಲ್ಲಿ ದಿಢೀರ್ ಪತ್ರಿಕಾಗೋಷ್ಠಿ ನಡೆಸಿ, ಚಂದ್ರಶೇಖರ ಪೂಜಾರ್ ಅವರ ಬಗ್ಗೆ ಕಿಡಿಕಾರಿದ್ದಾರೆ.

ನಿಮ್ಮ ಪಾಡಿಗೆ ನೀವು ಇರಿ. ನಮ್ಮನ್ನು ತಡವಿ ಸಂಘರ್ಷಕ್ಕೆ ಎಡೆ ಮಾಡಿಕೊಡಬೇಡಿ ಎಂದು ಖಾರವಾಗಿಯೇ ತಿರುಗೇಟು ನೀಡಿದ್ದಾರೆ.

ಪಂಚಮಸಾಲಿ ಸಮಾಜದ ಮುಖಂಡರಾದ ಪರಮೇಶ್ವರ ಗೌಡ್ರು, ವಚನಾನಂದ ಶ್ರೀಗಳು ಇದುವರೆಗೆ ತಾಲ್ಲೂಕಿನ ಒಂದೂ ಮನೆಗೆ ತೆರಳಿ ಪಾದಪೂಜೆ ಮಾಡಿಸಿಕೊಂಡಿಲ್ಲ, ಸಮಾಜದ ಜನತೆಗೆ ಧರ್ಮದ ಆಚರಣೆಗಳ ಬಗ್ಗೆ ತಿಳಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಏತನ್ಮಧ್ಯೆ ಜಯ ಮೃತ್ಯುಂಜಯ ಶ್ರೀಗಳ ಪಾದಯಾತ್ರೆ ಸೋಮವಾರ ಸಂಜೆ ಹರಪನಹಳ್ಳಿಗೆ ಪ್ರವೇಶಿಸಿದ್ದು, ಶ್ರೀ ವಚನಾನಂದ ಸ್ವಾಮೀಜಿಯವರು ತೆರಳಿ ಸ್ವಾಗತಿಸಿ, ಬೆಂಬಲ ಸೂಚಿಸಿದ್ದಾರೆ. ಇಬ್ಬರೂ ಶ್ರೀಗಳು ವೇದಿಕೆ ಮೇಲೆ ಸಮಾಗಮಗೊಂಡು ಸಮಾಜದಲ್ಲಿನ ಬಿರುಕು ನಿವಾರಣೆಗೆ ಮುಂದಾಗಿದ್ದಾರೆ.

ವಚನಾನಂದ ಶ್ರೀಗಳ ವಿರುದ್ಧ ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿರುವ ಹೆಚ್.ಎಸ್. ಶಿವಶಂಕರ್, ಕೂಡಲ ಸಂಗಮ ಶ್ರೀಗಳ ಪಾದಯಾತ್ರೆಯನ್ನು ಹರಿಹರದಲ್ಲಿ ಅದ್ದೂರಿಯಾಗಿ ಸ್ವಾಗತಿಸಲು ನಿರ್ಧರಿಸಿದ್ದಾರೆ.

28ರಂದು ಹರಿಹರಕ್ಕೆ ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಆಗಮಿಸಲಿದ್ದು, ಶ್ರೀಗಳ ವಾಸ್ತವ್ಯಕ್ಕೆ ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ವ್ಯವಸ್ಥೆ ಕಲ್ಪಿಸಿರುವುದಾಗಿ ಶಿವಶಂಕರ್ ಹೇಳಿದ್ದಾರೆ. ಇತ್ತ ಹರಿಹರ ಪೀಠದಲ್ಲಿಯೇ ಶ್ರೀಗಳು ವಾಸ್ತವ್ಯ ಮಾಡಲಿದ್ದಾರೆ ಎಂದು ಹರಿಹರ ವೀರಶೈವ ಲಿಂಗಾಯತ ಪೀಠದ ಧರ್ಮದರ್ಶಿ ಹೇಳಿದ್ದಾರೆ.

## ನಗರದಲ್ಲಿ ಇಂದು ಉತ್ಸವಾಂಬದೇವಿ ಜಾತ್ರೋತ್ಸವ



ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗ ದಲ್ಲಿರುವ ಶ್ರೀ ಉತ್ಸವಾಂಬದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಜಾತ್ರಾ ಮಹೋತ್ಸವ ಇಂದಿನಿಂದ ಇದೇ ದಿನಾಂಕ 28 ರವರೆಗೆ ನಡೆಯಲಿದೆ. ದಿನಾಂಕ 28ರ ಗುರುವಾರ ಬೆಳಗಿನ ಜಾವ 4.30 ಕ್ಕೆ ಅಮ್ಮನವರಿಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ವಿಶೇಷ ಪುಷ್ಪಾಲಂಕಾರ ಪೂಜೆ, ಬೆಳಿಗ್ಗೆ 9.30 ಕ್ಕೆ ಭಕ್ತಾದಿಗಳಿಂದ ಉಡಿ ಅಕ್ಕಿ ಸೇವೆ ನಂತರ ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗ ವಿರುತ್ತದೆ ಮತ್ತು ಸಂಜೆ 5.30 ಕ್ಕೆ ಶ್ರೀ ಉತ್ಸವಾಂಬ ದೇವಿಯ ಮೆರವಣಿಗೆ ನಡೆಯುವುದು.

# ಚನ್ನಮ್ಮನಂತೆ ಹೋರಾಟ ಅನಿವಾರ್ಯ

**(1ನೇ ಪುಟದಿಂದ)** ವಚನಾನಂದ ಸ್ವಾಮೀಜಿ ಮಾತನಾಡಿ ಹರಪನಹಳ್ಳಿ ನೆಲದಲ್ಲಿ ದಿವ್ಯ ಶಕ್ತಿ ಇದ್ದು ಎರಡು ಜಾತ್ರೆಗಳ ಯಶಸ್ಸಿಗೆ ಈ ನೆಲ ಕಾರಣವಾಗಿದ್ದು ಇಂದು ಎರಡು ಪೀಠಗಳು ಒಂದಾಗುವ ಮೂಲಕ ರಾಜ್ಯದ 80 ಲಕ್ಷ ಭಕ್ತರ ಆಸೆ ಈಡೇರಿದಂತಾಗಿದ್ದು, ಕಾಡಿ ಕೂಡಿದ್ದೇವೆ, ಇನ್ನು ಮುಂದೆ ಕೂಡಿ ಕಾಡುವುದಿಲ್ಲ ಎಂದು ಹೇಳಿದರು.

ವೀರಶೈವ ಒಳ ಪಂಗಡಗಳಿಗೆ ಸಿಕ್ಕ ಸೌಲಭ್ಯಗಳು ನಮಗೆ ಸಿಗದೇ ಇದ್ದಲ್ಲಿ ಹೋರಾಟದ ಹಾದಿ ಅನಿವಾರ್ಯವಾಗಿದ್ದು ನಮ್ಮಲ್ಲಿ ತಾತ್ವಿಕ ಭಿನ್ನಭಿಪ್ರಾಯಗಳು ಇದ್ದರೂ ಸೂರ್ಯ, ಚಂದ್ರರಂತೆ ಸಮಾಜಕ್ಕೆ ಬೆಳಕು ಕೊಡುವ ಕೆಲಸ ಮಾಡುತ್ತೇವೆ ಎಂದ ಅವರು ಇವತ್ತು ಚೆನ್ನಮ್ಮನ ವಿಜಯೋತ್ಸವವಾಗಿದ್ದು ಮೀಸಲಾತಿ ನಮ್ಮ ಜನ್ಮ ಸಿದ್ದ ಹಕ್ಕಾಗಿದ್ದು ನಾವಿಬ್ಬರೂ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳಂತೆ ಕೆಲಸ ಮಾಡುತ್ತೇವೆ. ನಮ್ಮ ಮಧ್ಯೆ ಗೋಡೆ ಕಟ್ಟಲು ಬರುವವರನ್ನು ನಾವು ಸಹಿಸುವುದಿಲ್ಲ ಎಂದರು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಕನ್ನಡ ನಾಡಿನಲ್ಲಿ ಅನೇಕ ಮಠಗಳು ಅನ್ನ ದಾಸೋಹ, ಅಕ್ಷರ ದಾಸೋಹ ನೀಡುವ ಮೂಲಕ ಉತ್ತಮ ಕೆಲಸಗಳನ್ನು ಮಾಡುತ್ತಿವೆ. ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗಾಗಿ ಮುಖ್ಯಮಂತ್ರಿಯವರ ಮೇಲೆ ಒತ್ತಡ ಹಾಕುವ ಮೂಲಕ ಸಮಸ್ತ ಪಂಚಮಸಾಲಿ ಸಮಾಜದ ಹೋರಾಟಕ್ಕೆ ಸದಾ ನನ್ನ ಬೆಂಬಲವಿದೆ ಎಂದರು.

ಈ ಸಂದರ್ಭದಲ್ಲಿ ಸಂಸದ ವೈ. ದೇವೇಂದ್ರಪ್ಪ, ಹೋರಾಟ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಅಧ್ಯಕ್ಷ ಡಾ.ವಿಜಯನಂದ ಕಾಶೆಪ್ಪನವರ್, ವೀಣಾ ಕಾಶೆಪ್ಪನವರ್, ಹಡಗಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಹರಿಹರದ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಲಿಂಗಾಯತ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಿ.ಬೆಟ್ಟನಗೌಡ, ಅಕ್ಷರ ಸೀಡ್ಸ್ ಮಾಲೀಕ ಅರಸಿಕೇರಿ ಎನ್. ಕೊಟ್ರೇಶ್, 2ಎ ಮೀಸಲಾತಿ ಸಮಿತಿ ಅಧ್ಯಕ್ಷ ಚಂದ್ರಶೇಖರ ಪೂಜಾರ್, ಗೌರವಾಧ್ಯಕ್ಷ ಎಂ. ಪರಮೇಶ್ವರಪ್ಪ, ಎಂ.ಪಿ. ಪ್ರಕಾಶ್ ಸಮಾಜಮುಖಿ ಟ್ರಸ್ಟ್ ಅಧ್ಯಕ್ಷೆ ಎಂ.ಪಿ. ವೀಣಾ ಮಹಾಂತೇಶ್, ಎಸ್.ಪಿ. ಪ್ರಭಾಕರ್ ಗೌಡ, ಕಂಚಿಕೇರಿ ಎಂ.ಟಿ ಸುಭಾಶ್‌ಚಂದ್ರ, ವಿವಿಧ ಸಮಾಜಗಳ ಅಧ್ಯಕ್ಷರುಗಳಾದ ಕೆ. ಉಚ್ಚೆಂಗೆಪ್ಪ, ಬಂದೋಳ್ ಮಂಜುನಾಥ, ಎಂ. ರಾಜಶೇಖರ್, ಪ್ರಚಾರ ಸಮಿತಿ ಅಧ್ಯಕ್ಷ ಪಿ. ಕರಿಬಸಪ್ಪ, ಕಾರ್ಯದರ್ಶಿ ಬಸವರಾಜ ಅಡವಿಹಳ್ಳಿ, ತಿಮ್ಲಾಪುರ ನಾಗರಾಜ್, ಮುಖಂಡರುಗಳಾದ ಕುಂಚೂರು ವೀರಣ್ಣ, ಶಶಿಧರ್ ಪೂಜಾರ್, ಮತ್ತಿಹಳ್ಳಿ ಅಜ್ಜಣ್ಣ, ಎಂ.ಟಿ.ಬಸವನಗೌಡ, ಮಂಜುನಾಥ್ ಪೂಜಾರ್, ಬಿ.ಎಸ್. ಲಿಂಗರಾಜ್, ಹಾರಕನಾಳು ಪ್ರಕಾಶಗೌಡ, ವೀರೇಶ್, ನೀಲಗುಂದ ಸಿದ್ದೇಶ್, ಆರ್. ರೇವಣ್ಣ, ಬಸವರಾಜ, ಕೆಇಬಿ ಕರಿಬಸಪ್ಪ, ಪರಮೇಶ್, ಎ.ಜಿ. ಕೊಟ್ರಗೌಡ, ಕೊಟ್ರೇಶ್, ಎಂ.ಪಿ. ನಾಯ್ಕ, ನಿಟ್ಟೂರು ಸಣ್ಣಹಾಲಪ್ಪ, ಬಾಗಳಿ ಕೊಟ್ರೇಶಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಬಸಾಪುರದಲ್ಲಿಂದು ಗಣರಾಜ್ಯೋತ್ಸವ

ರೇವಣಸಿದ್ದೇಶ್ವರ ಪ್ರೌಢಶಾಲೆ, ಶ್ರೀಮತಿ ನಾಗಮ್ಮ ಹಿರಿಯ ಪ್ರಾಥಮಿಕ ಶಾಲೆ ಬಸಾಪುರ ಇವರ ಸಂಯುಕ್ತಾಶ್ರಯದಲ್ಲಿ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮ ಶಾಲೆಯ ಆವರಣದಲ್ಲಿ ಇಂದು ಬೆಳಿಗ್ಗೆ 8 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಧ್ವಜಾರೋಹಣವನ್ನು ಎಲ್.ಹೆಚ್.ಅರುಣ್‌ಕುಮಾರ್ ನೆರವೇರಿಸುವರು. ಎಂ.ಎಸ್.ನಾಗರಾಜ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಸತ್ಯಭಾಮ, ಶ್ರೀಮತಿ ಸೌಭಾಗ್ಯಮ್ಮ ಭಾಗವಹಿಸುವರು.

### ದಿನದ ಚುಟುಕು

ಅನುದಿನದ ಧ್ಯಾನ
ಹೆಚ್ಚಿಸುವುದು ಜ್ಞಾನ
ಮೌನದಲ್ಲಿಹ ಮನನ
ಬೆಳಕಿನಲ್ಲಿ ಚಿಂತನ.!

- ಶ್ರೀಮತಿ ವೀಕೆಎಂ

# ಭಾರತ-ಚೀನಾ ಪಡೆಗಳ ಚಕಮಕಿ

**(1ನೇ ಪುಟದಿಂದ)** ಬಗೆಹರಿಸಿಕೊಳ್ಳಲಾಗಿದೆ. ಮಾಧ್ಯಮಗಳು ಈ ಕುರಿತು ಅತಿರಂಜಿತ ವರದಿ ಮಾಡುವುದರಿಂದ ದೂರವಿರಬೇಕು ಎಂದು ಸೈನ್ಯ ಸಂಕ್ಷಿಪ್ತ ಹೇಳಿಕೆಯಲ್ಲಿ ತಿಳಿಸಿದೆ.

ಉತ್ತರ ಸಿಕ್ಕಿಂನ ನೈಜ ನಿಯಂತ್ರಣ ರೇಖೆ (ಎಲ್.ಎ.ಸಿ.)ಯಲ್ಲಿ ಚೀನಾ ಪಡೆಗಳು ಭಾರತದ ಕಡೆ ನುಗ್ಗುವ ಯತ್ನ ನಡೆಸಿದ್ದವು. ಆದರೆ, ಅವರನ್ನು ಭಾರತೀಯ ಸೈನಿಕ ಸಿಬ್ಬಂದಿ ತಡೆದಿದ್ದಾರೆ. ಈ ಸಂದರ್ಭದಲ್ಲಿ ಉಭಯರ ನಡುವೆ ಚಕಮಕಿ ಉಂಟಾಗಿದೆ ಎಂದು ಈ ಬೆಳವಣಿಗೆಯ ಬಗ್ಗೆ ತಿಳಿದಿರುವ ಮೂಲಗಳು ಹೇಳಿವೆ.

ಕಳೆದ ವರ್ಷ ಮೇ 9ರಂದು ನಕು ಲಾ ಪ್ರದೇಶದಲ್ಲೇ ಉಭಯ ಪಡೆಗಳ ನಡುವೆ ತೀವ್ರ ಚಕಮಕಿ ಉಂಟಾಗಿತ್ತು. ಆನಂತರದಲ್ಲಿ ಪೂರ್ವ ಲಡಾಖ್‌ನಲ್ಲಿ ಪಂಗಾಂಗ್ ಕೊಳ ಪ್ರದೇಶದಲ್ಲಿ ತೀವ್ರ ಸಂಘರ್ಷ ಉಂಟಾಗಿತ್ತು.

# 2 ಪ್ಲಾಸ್ಟಿಕ್ ಪಾರ್ಕ್ ಅಭಿವೃದ್ಧಿ

**(1ನೇ ಪುಟದಿಂದ)** ಇರುತ್ತವೆ. ಇಲ್ಲಿ ಸ್ಥಾಪಿತವಾಗುವ ಎಲ್ಲ ಕೈಗಾರಿಕಾ ಘಟಕಗಳೂ ಸೌಲಭ್ಯಗಳನ್ನು ಬಳಸಿಕೊಳ್ಳಬಹುದಾಗಿದೆ, ಸ್ವದೇಶಿ ಪ್ಲಾಸ್ಟಿಕ್ ಕೈಗಾರಿಕೆಗಳು ಅಂತರರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಬಹುದು. ಭಾರತದ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸಲು ಶಕ್ತವಾಗುತ್ತವೆ, ರಫ್ತು ವೃದ್ಧಿಯಾಗುತ್ತದೆ ಎಂದರು.

ಇದು ಕೇಂದ್ರ ಮತ್ತು ರಾಜ್ಯದ ಜಂಟಿ ಯೋಜನೆಯಾಗಿದ್ದು, ಕೆಎಸ್‌ಐಡಿಸಿ ಮೂಲಕ ಅಥವಾ ಹೊಸ ವಿಶೇಷ ಉದ್ದೇಶದ ಕಂಪನಿ ಸ್ಥಾಪಿಸುವ ಮೂಲಕ ಅನುಷ್ಠಾನಗೊಳಿಸಬಹುದಾಗಿದೆ. ಈ ಪ್ಲಾಸ್ಟಿಕ್ ಪಾರ್ಕ್‌ನಲ್ಲಿ ಅಭಿವೃದ್ಧಿಪಡಿಸುವ ಸಾಮಾನ್ಯ ಸೌಕರ್ಯಗಳ ಅರ್ಧ ಹಣ ಬಿಡುಗಡೆ ಆಗಲಿದೆ ಎಂದರು ಹೇಳಿದ್ದಾರೆ.

ಭಾರತವನ್ನು ಎಲ್ಲಾ ಕ್ಷೇತ್ರಗಳಲ್ಲೂ ಸ್ವಾವಲಂಬಿ ಮಾಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಯೋಜಿತ ಹೆಜ್ಜೆ ಇಡುತ್ತಿದೆ. ದೇಶದ ರಸಗೊಬ್ಬರ ವಲಯವನ್ನು ಸಂಪೂರ್ಣ ಸ್ವಾವಲಂಬಿ ಮಾಡಲು ರಸಗೊಬ್ಬರ ಇಲಾಖೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದರು. ಸ್ಥಗಿತಗೊಂಡಿದ್ದ ನಾಲ್ಕು ರಸಗೊಬ್ಬರ ಕಾರ್ಖಾನೆಗಳ ಪುನಃಶ್ಚೇತನಕ್ಕೆ 50 ಸಾವಿರ ಕೋಟಿ ರೂ.ಗಿಂತ ಹೆಚ್ಚು ಹಣ ವೆಚ್ಚ ಮಾಡಲಾಗುತ್ತಿದೆ. ಔಷಧ ಉತ್ಪಾದನೆಯಲ್ಲಿ ಭಾರತವನ್ನು ಸ್ವಾವಲಂಬಿ ಮಾಡಲು ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಈ ಉಪಕ್ರಮಗಳಲ್ಲಿ ಮೂರು ಬಲ್ಕ್ ಡ್ರಗ್ ಪಾರ್ಕ್‌ಗಳು ಹಾಗೂ ನಾಲ್ಕು ಮೆಡಿಕಲ್ ಡಿವೈಸ್ ಪಾರ್ಕ್‌ಗಳು ಸೇರಿವೆ ಎಂದರು.

## ನಗರದಲ್ಲಿ ಇಂದು ಗಣರಾಜ್ಯೋತ್ಸವ

ಮಾಗನೂರು ಸರ್ವಮಂಗಳಮ್ಮ ಬಸಪ್ಪ ಕಾಲೇಜಿನಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮವು ಇಂದು ಬೆಳಿಗ್ಗೆ 8.30 ಕ್ಕೆ ನಡೆಯಲಿದೆ.

# ಕೇಂದ್ರದ ಮೂರು ಕಾಯ್ದೆ ಪ್ರತಿ ಪ್ರಜೆಗೂ ಮಾರಕ

**(1ನೇ ಪುಟದಿಂದ)** ಹೋರಾಟ ಮೇಲ್ನೋಟಕ್ಕೆ ರೈತರ ಬೇಡಿಕೆಗಳಿಗೆ ಮಾತ್ರ ಎನ್ನುವಂತಿದೆ. ಆದರೆ ಇದು ದೇಶದ ಸ್ವಾತಂತ್ರ್ಯ ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟವಾಗಿದೆ. ಆಹಾರ ಉಣ್ಣುವ ಎಲ್ಲರೂ ಇದರ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದೆ ಎಂದರು.

ದೇಶದ ಇತಿಹಾಸದಲ್ಲಿಯೇ ಇದೊಂದು ಸುದೀರ್ಘ ಹೋರಾಟವಾಗಿದೆ. ನಾಳೆ ಜನವರಿ 26 ರಂದು ನಡೆಯುವ ಗಣರಾಜ್ಯೋತ್ಸವವು ಅನ್ನದಾತನ ಸಂಕೇತವಾದ ಗಣರಾಜ್ಯೋತ್ಸವವಾಗಲಿದೆ. ರಫೇಲ್‌ಗಳಿಗೆ ಎದುರಾಗಿ ರೈತರ ಟ್ರ್ಯಾಕ್ಟರ್ ಗಳು ರಾಜಧಾನಿ ಕಡೆ ಹೊರಟಿವೆ. ದೇಶದ ಐನೂರಕ್ಕೂ ಹೆಚ್ಚು ಸಂಘಟನೆಗಳು ಒಂದೇ ವೇದಿಕೆಗೆ ಬಂದಿವೆ. ಈ ಹೋರಾಟ ಜನವರಿ 26ಕ್ಕೆ ಮುಗಿಯುವುದಿಲ್ಲ. ಹಳ್ಳಿ ಹಳ್ಳಿಗಳಿಗೂ ವ್ಯಾಪಿಸುತ್ತದೆ. ಕಮ್ಯೂನಿಸ್ಟ್ ಪಕ್ಷ ಹಾಗೂ ಕಿಸಾನ್ ಸಭಾ ದೊಡ್ಡ ಹೋರಾಟ ಕೈಗೊಳ್ಳಬೇಕು ಎಂದು ಹೇಳಿದರು.

ದೇಶದಲ್ಲಿ ರೈತರ ಹೋರಾಟ ನಡೆದಾಗಲೆಲ್ಲಾ ಸರ್ಕಾರಗಳು ಬದಲಾಗಿವೆ. 1980ರಲ್ಲಿ ಗುಂಡೂರಾಯರ ಸರ್ಕಾರ ನಡೆಸಿದ ಗೋಲಿಬಾರ್ ವಿರುದ್ಧ ರೈತ ಚಳವಳಿ ನಡೆದಾಗ 1983ರಲ್ಲಿ ಸರ್ಕಾರ ಬದಲಾಗಿತ್ತು. ರೈತ ದೇಶದ ಅತ್ಯಂತ ಕೆಳಸ್ತರದ ಪ್ರಜೆ. ಆತನಿಗೆ ಅನ್ಯಾಯವಾದರೆ ಯಾವ ಸರ್ಕಾರವೂ ಉಳಿಯುವುದಿಲ್ಲ ಎನ್ನುವ ವಾಸ್ತವ ಎಲ್ಲರ ಕಣ್ಣ ಮುಂದಿದೆ ಎಂದರು.

ಶಾಸಕರು, ಸಂಸದರು, ಪ್ರಧಾನಿ ನಮ್ಮ ನಾಯಕರಾಗುವ ಬದಲು ಖಳನಾಯಕರಾಗಿದ್ದಾರೆ. ಜನತಂತ್ರವನ್ನು ನಾಶ ಮಾಡುತ್ತಿದ್ದಾರೆ. ಇದನ್ನು ಉಳಿಸಿಕೊಳ್ಳಲೆಂದೇ ರೈತರು ಬೀದಿಗಿಳಿದಿದ್ದಾರೆ. ಕೇಂದ್ರ ಸರ್ಕಾರದ ಕಾಯ್ದೆಗಳ ವಿರುದ್ಧ ಪ್ರತಿಭಟಿಸುತ್ತಿರುವವರು ರೈತರಲ್ಲ, ಪಾಕ್ ಪ್ರಚೋದಿತರು, ಖಲಿಸ್ತಾನಿಗಳು, ದಲ್ಲಾಲಿಗಳು ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಹಾಗಾದರೆ ಅವರ ಜೊತೆಯೇ 11 ಸುತ್ತಿನ ಮಾತುಕತೆ ನಡೆಸಿದ್ದೇಕೆ ? ಎಂದು ಸಿದ್ದನಗೌಡ ಪಾಟೀಲ ಪ್ರಶ್ನಿಸಿದರು.

ಚಹಾ ವ್ಯಾಪಾರಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ದೇಶವನ್ನು ವ್ಯಾಪಾರಿಗಳಿಗೆ ಮಾರಾಟ ಮಾಡಲು ಹೊರಟಿದ್ದಾರೆ. ಇದರ ಪರಿಣಾಮ ಸಣ್ಣ ರೈತರು ಭೂಮಿಯಿಂದ ಹೊರ ಬೀಳುತ್ತಾರೆ. ಅಂಬಾನಿಯ ಕಂಪನಿ ಬೆಳೆಸಲು ಈಗಾಗಲೇ ಬಿಎಸ್‌ಎನ್‌ಎಲ್ ನಾಶ ಮಾಡಲಾಗಿದೆ. ಮುಂದೆ ಎಪಿಎಂಸಿ ಮಾರಿ ಖಾಸಗಿ ಮಾರುಕಟ್ಟೆಗೆ ಉತ್ತೇಜಿಸಲು ಮುಂದಾಗಿದ್ದಾರೆ. ಕಾಯ್ದೆಗಳು ಜಾರಿಯಾದರೆ ಮುಂದೊಂದು ದಿನ ಕಾರ್ಪೊರೇಟ್ ಕಂಪನಿಗಳು ರೈತರ ಭೂಮಿ ಖರೀದಿಸುತ್ತವೆ. ರೈತನ ಭೂಮಿ ಕಾಳ ಸಂತೆಕೋರರು, ರಾಜಕಾರಣಿಗಳು, ಅಧಿಕಾರಿಗಳ ಹೆಸರಿಗೆ ವರ್ಗವಾಗಿ, ರೈತ ಬೀದಿಗೆ ಬರುತ್ತಾನೆ ಎಂದು ಎಚ್ಚರಿಸಿದರು.

ಕಂಪನಿಗಳು ಬಂದು ತನ್ನ ಕೃಷಿ ಭೂಮಿಯನ್ನು ಗುತ್ತಿಗೆ ಪಡೆಯುವುದನ್ನು ರೈತ ಸಂತಸದಿಂದಲೇ ಎದುರು ನೋಡುಷ್ಟರ ಮಟ್ಟಿಗೆ ಒಕ್ಕಲುತನವನ್ನು ಭಾರ ಮಾಡಲಾಗಿದೆ. ಮುಂದೆ ರೈತನನ್ನು ಅನ್ನದಾತ ಎನ್ನಲಾಗದು. ಕಂಪನಿಗಳು ಯಂತ್ರಗಳ ಮೂಲಕ ಒಕ್ಕಲುತನ ಮಾಡುತ್ತವೆ. ಆಗ ರೈತ ಕೃಷಿ ಕಾರ್ಮಿಕನಾಗಿಯೂ ಉಳಿಯುವುದಿಲ್ಲ. ಒಂದು ಬಾರಿ ರೈತ ತನ್ನ ಭೂಮಿಯನ್ನು ಕಂಪನಿಗೆ ಒಪ್ಪಿಸಿದರೆ, ಉತ್ತಮ ಇಳುವರಿಗಾಗಿ ಅತಿಯಾಗಿ ರಾಸಾಯನಿಕ ಬಳಸಿ ಭೂಮಿಯನ್ನು ಬರಡು ಮಾಡಿಕೊಳ್ಳಬೇಕಾಗುತ್ತದೆ ಹೇಳಿದರು.

2011ರ ಜನಗಣತಿ ಪ್ರಕಾರ ಶೇ.51ರಷ್ಟು ಜನರು ಒಕ್ಕಲುತನ ಕೈ ಬಿಟ್ಟಿದ್ದಾರೆ. ಶೇ.40ರಷ್ಟು ಜನರು ಬೇರೆ ಅವಕಾಶ ಸಿಕ್ಕರೆ ಒಕ್ಕಲುತನ ಬಿಟ್ಟು ಹೋಗುವುದಾಗಿ ಹೇಳಿದ್ದರೆ. ಇಂತಹ ವಾತಾವರಣವನ್ನು ಉದ್ಯಮಿಗಳು, ಸರ್ಕಾರ ದುರುಪಯೋಗ ಪಡಿಸಿಕೊಳ್ಳಲು ಹುನ್ನಾರ ನಡೆಸಿವೆ ಎಂದು ಡಾ.ಸಿದ್ದನಗೌಡ ಪಾಟೀಲ ಹೇಳಿದರು.

ಇದೇ ಸಂದರ್ಭದಲ್ಲಿ ನೂತನವಾಗಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರಿಗೆ ಸನ್ಮಾನಿಸಲಾಯಿತು. ಎಐಕೆಎಸ್ ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ಐರಣಿ ಚಂದ್ರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಿಸಾನ್ ಸಭಾದ ಅಧ್ಯಕ್ಷ ಹೆಚ್.ಜಿ. ಉಮೇಶ್ ಆವರಗೆರೆ ಅಧ್ಯಕ್ಷತೆ ವಹಿಸಿದ್ದರು. ಎಐಕೆಎಸ್ ರಾಜ್ಯ ಉಸ್ತುವಾರಿ ಪಿ.ಬಿ. ಲೋಕೇಶ್, ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಹೆಚ್.ಕೆ. ರಾಮಚಂದ್ರಪ್ಪ, ಪಾಲವ್ವನಹಳ್ಳಿ ಪ್ರಸನ್ನಕುಮಾರ್, ಆನಂದರಾಜ್, ಆವರಗೆರೆ ಚಂದ್ರು, ಟಿ.ಎಸ್. ನಾಗರಾಜ್, ಸಿದ್ದೇಶ್ ಹಾಲೇಕರ್, ಭೀಮಾರೆಡ್ಡಿ ಉಪಸ್ಥಿತರಿದ್ದರು. ಕೆ.ಬಾನಪ್ಪ ನಿರೂಪಿಸಿದರು. ನರಗ ರಂಗನಾಥ್ ವಂದಿಸಿದರು.


## 20 ನೇ ವರ್ಷದ ಪುಣ್ಯಸ್ಮರಣೆ



**ಎನ್.ಎಂ.ಗುರುಸ್ವಾಮಿ,** ಎಲ್.ಟಿ.(ಕಬ್ಸ್)

ಜನನ: 16.12.1930, ಮರಣ: 26.01.2001

*ನೀವು ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ ಇದ್ದು, ನಿಮ್ಮ ಆದರ್ಶಗಳನ್ನು ಪಾಲಿಸುತ್ತಾ ಮುನ್ನಡೆಯುತ್ತಿರುವ,*

**ದುಃಖತಪ್ತ ಕುಟುಂಬದವರು, ಬಂಧು-ಮಿತ್ರರು ಮತ್ತು ಸ್ಕೌಟ್ಸ್ ಸಂಸ್ಥೆಯ ಸದಭಿಮಾನಿಗಳು.**

## ಮಂಜುನಾಥ್ ಘಾಟ್ಗೆ ನಿಧನ



ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್ 9ನೇ ಕ್ರಾಸ್ ವಾಸಿ,

**ಶ್ರೀ ಮಂಜುನಾಥ್ ಘಾಟ್ಗೆ** ಅವರು ದಿನಾಂಕ 25.01.2021ರ ಸೋಮವಾರ ಮಧ್ಯಾಹ್ನ 2.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 55 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರಿ, ಅಳಿಯ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 26-01-2021ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಿ.ಬಿ. ರಸ್ತೆಯ ಮೋತಿ ರಾಮರಾವ್ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು. ಮೃತರ ಪಾರ್ಥಿವ ಶರೀರವನ್ನು ಎಂ.ಸಿ.ಸಿ. 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿರುವ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿದೆ.

**- ದುಃಖತಪ್ತ ಕುಟುಂಬ ವರ್ಗ**

॥ ಶ್ರೀ ಶಿವ ನಾರದಮುನಿ ಪ್ರಸನ್ನ ॥

## 14ನೇ ವರ್ಷದ ಪುಣ್ಯಸ್ಮರಣೆ



**ದಿ॥ ಶ್ರೀಮತಿ ನಂಜಮ್ಮ ದಿ॥ ಶ್ರೀ ಬಸಪ್ಪ ಬಸವನಗೌಡ್ರು**

**ಗಾಂಧಿ ನಗರ**

ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ,


**✦ ಜಿ.ಬಿ. ನಟರಾಜ್ ✦ ಜಿ.ಬಿ. ನಾಗರಾಜ್ ಮತ್ತು**

**✦ ಡಾ॥ ಚಂದ್ರನಾಥ್,** ಗಾಂಧಿನಗರ. **✦ ನಟರಾಜ ಪ್ರಾವಿಜನ್ ಸ್ಟೋರ್ಸ್**

**✦ ನಟರಾಜ ಎಂಟರ್‌ಪ್ರೈಸಸ್,** ಚಾಮರಾಜಪೇಟೆ, ದಾವಣಗೆರೆ.

**✦ ನಂಜಮ್ಮ ಹಾಸ್ಪಿಟಲ್,** ಮಾಲೂರು.


## ಹಮೀದ್ ಜಾನ್ ನಿಧನ



ಬಿಳಿಚೋಡು ವಾಸಿ ದಿ.ಬಾಬು ಸಾಬ್ ಅವರ ಮಗ ಬೃಂದಾವನ ಲಾರಿ ಮಾಲೀಕರು, ಕಿರಾಣಿ ಮರ್ಚೆಂಟ್ಸ್ ಕೆ.ಹಮೀದ್ ಜಾನ್ (75) ಅವರು ದಿನಾಂಕ 25.1.2021 ರಂದು ರಾತ್ರಿ 8 ಕ್ಕೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.01.2021 ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮ ಬಿಳಿಚೋಡಿನಲ್ಲಿ ನೆರವೇರಲಿದೆ.

## ಸಿ.ವೀರಭದ್ರಪ್ಪ ನಿಧನ



ಜಗಳೂರು ತಾ. ಮರಿಕುಂಟೆ ಗ್ರಾಮದ ವಾಸಿ ನಿವೃತ್ತ ಮುಖ್ಯೋಪಾಧ್ಯಾಯರಾದ ಸಿ.ವೀರಭದ್ರಪ್ಪ (80) ಅವರು ದಿನಾಂಕ 25.01.2021 ರಂದು ಸೋಮವಾರ ಸಂಜೆ 5 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ ವೀರಮ್ಮ ಸೇರಿದಂತೆ ಮೂವರು ಪುತ್ರರು, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.01.2021 ರ ಮಧ್ಯಾಹ್ನ 1 ಗಂಟೆಗೆ ಜಗಳೂರು ತಾಲ್ಲೂಕು ಮರಿಕುಂಟೆ ಗ್ರಾಮದಲ್ಲಿ ನೆರವೇರಲಿದೆ.

## ಮುಕ್ತೇನಹಳ್ಳಿ ಮಠದ ಸದಾಶಿವಯ್ಯ ನಿಧನ



ಹರಿಹರದ ಹೊಸ ಬರಂಪುರ ನಿವಾಸಿ, ಕಿರ್ಲೋಸ್ಕರ್ ಕಂಪನಿಯ ನಿವೃತ್ತ ನೌಕರರಾದ ಶ್ರೀ ಮುಕ್ತೇನಹಳ್ಳಿ ಮಠದ ಸದಾಶಿವಯ್ಯ ಅವರು (76) ದಿನಾಂಕ 25.1.2021ರ ಸೋಮವಾರ ರಾತ್ರಿ 11.50ಕ್ಕೆ ನಿಧನರಾದರು. ಪತ್ನಿ ಶ್ರೀಮತಿ ನೀಲಮ್ಮ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 26.1.2021 ಮಂಗಳವಾರ ಮಧ್ಯಾಹ್ನ 1.30ಕ್ಕೆ ಹರಿಹರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಚನ್ನಗಿರಿಯಲ್ಲಿ ರಸ್ತೆ ಅಪಘಾತ : ಸಾವು

ಚನ್ನಗಿರಿ,ಜ.25- ಕಾರು ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಉಬ್ರಾಣಿ ಹೋಬಳಿಯ ಚನ್ನಗಿರಿ-ಬೀರೂರು ರಸ್ತೆಯಲ್ಲಿ ನಡೆದಿದೆ.

ಮಸಣಿಕೆರೆ ಶೇಖರಪ್ಪ (40) ಮೃತ ದುರ್ದೈವಿ. ಬೈಕ್‌ನಲ್ಲಿದ್ದ ಹಿಂಬದಿ ಸವಾರ ರುದ್ರಪ್ಪ ಗಂಭೀರವಾಗಿ ಗಾಯಗೊಂಡಿದ್ದಾನೆ. ಈ ಸಂಬಂಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜ.26 - '72 ನೇ ಗಣರಾಜ್ಯೋತ್ಸವದ ಸಂಭ್ರಮ'

ಜನವರಿ 26 ಬಂತೆಂದರೆ ಪ್ರತಿಯೊಬ್ಬ ಭಾರತೀಯರ ಮನೆ, ಮನಗಳಲ್ಲಿ ಮೂಡುವುದು ಗಣರಾಜ್ಯೋತ್ಸವದ ಸಂಭ್ರಮ. ಇದನ್ನು ಪ್ರಜಾ ರಾಜ್ಯೋತ್ಸವವೆಂತಲೂ ಕರೆಯುವರು, ಏಕೆಂದರೆ ಇದು ಭಾರತದಲ್ಲಿರುವ 135 ಕೋಟಿ ಪ್ರಜೆಗಳೆಲ್ಲರೂ ಸೇರಿ ಆಚರಿಸುವ ಒಂದು ರಾಷ್ಟ್ರೀಯ ಹಬ್ಬ. 1950 ಜನವರಿ 26 ರಂದು ಸಂವಿಧಾನ ಜಾರಿಗೆ ಬಂದ ಸವಿನೆನಪಿಗಾಗಿ ಪ್ರತಿ ವರ್ಷ ಜನವರಿ 26 ರಂದು ದೇಶದೆಲ್ಲೆಡೆ ಗಣರಾಜ್ಯೋತ್ಸವವನ್ನು ಅತ್ಯಂತ ಸಡಗರ, ಸಂಭ್ರಮದಿಂದ ಆಚರಿಸಲಾಗುವುದು. ಇಂದು ವಿಶೇಷವಾಗಿ ಸಂವಿಧಾನದ ಪಿತಾಮಹ ಡಾ. ಬಿ. ಆರ್. ಅಂಬೇಡ್ಕರ್ ರವರನ್ನು ಹಾಗೂ ಇದರ ರಚನೆಗೆ ಶ್ರಮಿಸಿದ ಇತರೆ ಎಲ್ಲಾ ಮಹನೀಯರುಗಳನ್ನು ನೆನಪಿಸಿಕೊಳ್ಳುವ ದಿನವೂ ಹೌದು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ಆಳ್ವಿಕೆಯ ಜೊತೆಗೆ ಅನೇಕ ಸಣ್ಣಪುಟ್ಟ ಸಂಸ್ಥಾನಗಳು ವಿವಿಧ ಪ್ರಾಂತ್ಯಗಳನ್ನು ಆಳ್ವಿಕೆ ಮಾಡುತ್ತಿದ್ದವು. ಇವರಿವರಲ್ಲಿಯೇ ಆಗಾಗ್ಗೆ ಸಾಮ್ರಾಜ್ಯ ವಿಸ್ತರಣೆಯ ದೃಷ್ಟಿಯಿಂದ ಘರ್ಷಣೆಗಳು ನಡೆಯುತ್ತಿದ್ದವು, ಇದಲ್ಲದೆ ವಿವಿಧ ಭಾಷೆಗಳನ್ನಾಡುವ ಜನರು ದೇಶದ ಉದ್ದಗಲಕ್ಕೂ ಹರಿದು ಹಂಚಿ ಹೋಗಿದ್ದರ ಪರಿಣಾಮ ದೇಶವನ್ನು ಭಾಷೆಗಳ ಆಧಾರದ ಮೇಲೆ ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಿಸಿ, ಎಲ್ಲಾ ಪ್ರಾಂತ್ಯ (ರಾಜ್ಯ)ಗಳನ್ನು ಒಂದು ಒಕ್ಕೂಟ ವ್ಯವಸ್ಥೆಯಡಿಯಲ್ಲಿ ತಂದು



ಸಂವಿಧಾನವು ಪ್ರಮುಖವಾಗಿ ಸರ್ಕಾರದ ಸ್ವರೂಪ ಮತ್ತು ಸ್ವಭಾವವನ್ನು ನಿರ್ಧರಿಸುವ ನಿಯಮ ಮಾತ್ರವಾಗಿರದೆ, ರಾಜ್ಯದ ಮೂಲ ತತ್ವಗಳನ್ನೂ ಪ್ರತಿಬಿಂಬಿಸುವುದು. ರಾಜ್ಯವು ತನಗಾಗಿ ಆಯ್ಕೆ ಮಾಡಿಕೊಂಡ ಜೀವನದ ಒಂದು ಮಾರ್ಗವಾಗಿರದೆ, ಸಮಗ್ರ ರಾಜಕೀಯ ತಳಪಾಯವೂ ಆಗಿದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಾಜ್ಯದ ಪರಮೋಚ್ಚ ಅಧಿಕಾರವನ್ನು ಹಂಚಿಕೆ ಮಾಡುವಲ್ಲಿ ಪ್ರಭಾವ ಬೀರುವ ನಿಯಮಗಳನ್ನು ಸಂವಿಧಾನವು ಒಳಗೊಂಡಿದೆ. ಈ ಎಲ್ಲಾ ಅಂಶಗಳನ್ನು ಪ್ರಜೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಗಣರಾಜ್ಯೋತ್ಸವ ಸಂಭ್ರಮ ಸಹಕಾರಿಯಾಗುವುದು.

**- ಡಾ. ಎಸ್. ಶಿವಯ್ಯ**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ.
s.shivaiah26@gmail.com

ಆಡಳಿತವನ್ನು ವಿಕೇಂದ್ರೀಕರಣಗೊಳಿಸಿ, ಪ್ರಜಾಪ್ರಭುತ್ವದ ನೈಜ ನೆಲೆಗಟ್ಟಿನಲ್ಲಿ ಅಧಿಕಾರವನ್ನು ನಡೆಸುವ ದೃಷ್ಟಿಯಿಂದ ಸಂವಿಧಾನದ ರಚನೆಯ ಅಗತ್ಯತೆಯನ್ನು ಮನಗಂಡ ರಾಷ್ಟ್ರೀಯ ನಾಯಕರು, ದೇಶಕ್ಕೊಂದು ಸುಭದ್ರವಾದ ಸಂವಿಧಾನವನ್ನು ರಚಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಅದರಂತೆ ಡಿಸೆಂಬರ್ 06, 1946 ರಂದು ಸಂವಿಧಾನ ರಚನಾ ಸಭೆಯನ್ನು ಸ್ಥಾಪಿಸಿದರು. ಈ ರಚನಾ ಸಭೆಯು ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ ಸರಿ ಸುಮಾರು 328 ಪ್ರತಿನಿಧಿಗಳನ್ನು ಒಳಗೊಂಡಿತ್ತು. ಇದರ ಮೊದಲನೆಯ ಸಭೆ ಡಿಸೆಂಬರ್ 09, 1946 ರಂದು ಪಾರ್ಲಿಮೆಂಟ್ ಭವನದ ಸಭಾಂಗಣದಲ್ಲಿ ಸಮಾವೇಶಗೊಂಡಿತು. ಸಂವಿಧಾನ ರಚನಾ ಸಭೆಯ (Constituent assembly) ಅಧ್ಯಕ್ಷತೆಯನ್ನು ಡಾ. ಬಾಬು ರಾಜೇಂದ್ರ ಪ್ರಸಾದ್ ರವರು ಮತ್ತು ಕರಡು ರಚನಾ ಸಮಿತಿಯ (Drafting committee) ಅಧ್ಯಕ್ಷತೆಯನ್ನು ಡಾ. ಬಿ. ಆರ್. ಅಂಬೇಡ್ಕರ್ ರವರು ವಹಿಸಿಕೊಂಡರು. ಇವರ ಜೊತೆಗೆ ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಬಾಯಿ ಪಟೇಲ್, ಆಚಾರ್ಯ ಕೃಪಲಾನಿ, ಮೌಲಾನಾ ಅಬ್ದುಲ್ ಕಲಾಂ ಆಜಾದ್, ಸರ್ದಾರ್ ಬಲದೇವ ಸಿಂಗ್, ಸಿ. ರಾಜಗೋಪಾಲಚಾರಿ, ಸರೋಜಿನಿ ನಾಯ್ಡು, ವಿಜಯಲಕ್ಷ್ಮಿ ಸಿಂಗ್, ಕರ್ನಾಟಕದವರಾದ ಎಸ್. ನಿಜಲಿಂಗಪ್ಪ, ಬೆನಗಲ್ ಶಿವರಾಂ, ಕೆ. ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ, ಫಾದರ್ ಡಿಸೋಜ ಇನ್ನು ಮುಂತಾದವರು ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಇವರೆಲ್ಲರೂ ರಾಷ್ಟ್ರಕ್ಕೊಂದು ಉತ್ತಮ ಸಂವಿಧಾನವನ್ನು ಕೊಡಬೇಕೆಂಬ ಸದುದ್ದೇಶದಿಂದ ವಿಶ್ವದ ಹಲವು ರಾಷ್ಟ್ರಗಳಾದ ಬ್ರಿಟನ್, ಅಮೆರಿಕಾ, ಐರ್ಲೆಂಡ್, ಫ್ರಾನ್ಸ್, ಕೆನಡಾ, ದಕ್ಷಿಣ ಆಫ್ರಿಕಾ, ಸೋವಿಯತ್ ರಷ್ಯಾ, ಜಪಾನ್ ಇನ್ನು ಮೊದಲಾದ ದೇಶಗಳಿಗೆ ಭೇಟಿ ನೀಡಿ, ಅಲ್ಲಿನ ಸಂವಿಧಾನಗಳು ಒಳಗೊಂಡ ಅಂಶಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ, ಅವುಗಳಲ್ಲಿ ನಮಗೆ ಅಗತ್ಯವಾಗಿ ಬೇಕಾದ ಅಂಶ ಗಳನ್ನು ಗಣನೆಗೆ ತೆಗೆದುಕೊಂಡು ಸಂವಿಧಾನವನ್ನು ರಚಿಸಲು ಮುಂದಾದರು. ಇವರು ಸಂವಿಧಾನ ರಚನೆಗೆ ತೆಗೆದುಕೊಂಡ ಸಮಯ 2 ವರ್ಷ, 11 ತಿಂಗಳು, 18 ದಿನ. ಇದರ ಪರಿಶೀಲನೆಗೆಂದು 114 ದಿನಗಳನ್ನು ತೆಗೆದುಕೊಳ್ಳಲಾಯಿತು. ರಚನೆಗೆ ತಗುಲಿದ ವೆಚ್ಚ 6.4 ಕೋಟಿ ರೂ.ಗಳು. 1949 ರ ನವೆಂಬರ್ 26 ರಂದು ಅಂಗೀಕೃತವಾದ ಸಂವಿಧಾನ ಮೂಲತಃ 395 ವಿಧಿಗಳು, 22 ಅಧ್ಯಾಯಗಳು ಮತ್ತು 8 ಅನುಸೂಚಿಗಳನ್ನು ಒಳಗೊಂಡಿತ್ತು.

ಸಂವಿಧಾನದ ಪೂರ್ವಪೀಠಿಕೆಯು (preamble of the constitution) ಏಕ ವಾಕ್ಯದಿಂದ ಕೂಡಿದ್ದು ಅದು ಹೀಗಿದೆ : "ಭಾರತದ ಪ್ರಜೆಗಳಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯ ವನ್ನಾಗಿ ನಿರ್ಮಿಸುವ ಸಲುವಾಗಿ ಮತ್ತು ಇಲ್ಲಿನ ಸಮಸ್ತ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು, ವಿಚಾರ, ಅಭಿವ್ಯಕ್ತಿ, ನಂಬಿಕೆ, ವಿಶ್ವಾಸ ಹಾಗೂ ಅವರೆಲ್ಲರಲ್ಲಿನ ವ್ಯಕ್ತಿಗತ ಗೌರವ ಹಾಗೂ ರಾಷ್ಟ್ರದ ಏಕತೆ ಮತ್ತು ಸಮಗ್ರತೆಯ ಆಶ್ವಾಸನೆಯೊಂದಿಗೆ ಭ್ರಾತೃತ್ವವನ್ನು ವೃದ್ಧಿಗೊಳಿಸಲು ಈ ದಿನ ಅಂದರೆ 26ನೇ ನವೆಂಬರ್ 1949 ರಂದು ಈ ಸಂವಿಧಾನವನ್ನು ಅಂಗೀಕರಿಸಿ ನಮಗೆ ನಾವೇ ಸಮರ್ಪಿಸಿಕೊಂಡಿದ್ದೇವೆ". ಇದು ಇಡೀ ಸಂವಿಧಾನದ ಮೂಲ ತಿರುಳನ್ನು ಸ್ಪಷ್ಟಪಡಿಸುತ್ತದೆ. ಈ ವಿಚಾರವನ್ನು ಗಣರಾಜ್ಯೋತ್ಸವ ದಿನದಂದು ಭಾರತೀಯರೆಲ್ಲರಿಗೂ ತಿಳಿ ಹೇಳುವ ಸಮಯ ಇದಾಗಿದೆ .

ಭಾರತದ ಸಂವಿಧಾನವು ವಿಶ್ವದಲ್ಲಿಯೇ ಅತ್ಯಂತ ವ್ಯಾಪಕ ಮತ್ತು ಸುದೀರ್ಘ ಲಿಖಿತ ಸಂವಿಧಾನವೆಂಬ ಹೆಗ್ಗಳಿಕೆಯಿದ್ದು, ಅಂತಿಮವಾಗಿ 1950 ಜನವರಿ 26 ರಂದು ಅಸ್ತಿತ್ವಕ್ಕೆ ಬಂದಿತು. ಇಂತಹ ಮಹತ್ವದ ದಿನವನ್ನು ದೇಶಾದ್ಯಂತ ಇಂದು ಗಣರಾಜ್ಯ ದಿನವನ್ನಾಗಿ ಆಚರಿಸಲಾಗುತ್ತಿದೆ.

ಸಂವಿಧಾನವು ಪ್ರಮುಖವಾಗಿ ಸರ್ಕಾರದ ಸ್ವರೂಪ ಮತ್ತು **(4ನೇ ಪುಟಕ್ಕೆ)**

## ಮೌಢ್ಯದಿಂದ ಇಬ್ಬರು ಹೆಣ್ಣು ಮಕ್ಕಳ ಕೊಂದ ಪಾಲಕರು

ಹೈದರಾಬಾದ್, ಜ. 25 – ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಮದನಪಲ್ಲಿಯಲ್ಲಿ ತಂದೆ ತಾಯಿಗಳೇ ಇಬ್ಬರು ಹೆಣ್ಣು ಮಕ್ಕಳನ್ನು ಡಂಬಲ್ಸ್‌ಗಳಿಂದ ಬರ್ಬರವಾಗಿ ಬಡಿದು ಕೊಂದ ಘಟನೆ ನಡೆದಿದೆ.

27 ವರ್ಷದ ಅಲಕ್ಯ ಹಾಗೂ 22 ವರ್ಷದ ಸಾಯಿ ದಿವ್ಯ ಅವರನ್ನು ತಂದೆ - ತಾಯಿಗಳು ಬಡಿದು ಕೊಲ್ಲುವಾಗ ಅವರ ಚೀರಾಟವನ್ನು ಕೇಳಿದ ನೆರೆಹೊರೆಯವರು ಪೊಲೀಸರಿಗೆ ಕರೆ ಮಾಡಿದರು. ಪೊಲೀಸರು ಬರುವ ವೇಳೆಗೆ ಹತ್ಯೆ ನಡೆದಿತ್ತು.

ತಾಯಿ ವಿ. ಪದ್ಮಜ ಪ್ರಾಂಶುಪಾಲೆಯಾಗಿದ್ದರೆ, ತಂದೆ ಪುರುಷೋತ್ತಮ ನಾಯ್ಡು ಉಪನ್ಯಾಸಕ. ಉಭಯರೂ ಮೌಢ್ಯಕ್ಕೆ ಸಿಲುಕಿ ಹೆಣ್ಣು ಮಕ್ಕಳನ್ನು ಹತ್ಯೆಗೈದಿದ್ದಾರೆ. ತನ್ನ ಮಕ್ಕಳು ಮತ್ತೆ ಹುಟ್ಟಿ ಬರುವ ಪೂಜಾ ವಿಧಿ ನಡೆಸುತ್ತಿರುವುದಾಗಿ ಪದ್ಮಜ ಹೇಳಿದ್ದಾಗಿ ಪೊಲೀಸರು ತಿಳಿಸಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಹೆಣ್ಣು ಮಕ್ಕಳ ನಡುವೆ ಪುರುಷೋತ್ತಮ ಸ್ತಂಭೀಭೂತನಾಗಿ ನಿಂತಿದ್ದಾಗಿಯೂ ಪೊಲೀಸರು ತಿಳಿಸಿದ್ದಾರೆ.

ಅಲಕ್ಯ ಸ್ನಾತಕೋತ್ತರ ಪದವಿ ಪೂರೈಸಿದ್ದರು. ಸಾಯಿ ದಿವ್ಯ ಬಿ.ಬಿ.ಎ. ಪದವಿ ಮುಗಿಸಿ ಸಂಗೀತ ಕಲಿಯುತ್ತಿದ್ದರು. ಉಭಯರು ತಲೆಯನ್ನು ಮೊಂಡು ಆಯುಧದಿಂದ ಬಡಿದು ಹತ್ಯೆ ಮಾಡಲಾಗಿದೆ. ಪೊಲೀಸರು ಬಂದಾಗ ತಾಯಿ ಪದ್ಮಜ ಗೋಡೆಯನ್ನೇ ನೋಡುತ್ತಿದ್ದಳು. ನಮ್ಮ ಉಪಸ್ಥಿತಿಯೂ ಗೊತ್ತಾಗಿರುವಂತಿಲ್ಲ ಎಂದು ಡಿ.ಎಸ್.ಪಿ. ರವಿ ಚಾರಿ ಹೇಳಿದ್ದಾರೆ.

ಪೊಲೀಸರು ಮನೆಯೊಳಗೆ ಪ್ರವೇಶಿದ ವೇಳೆ ಒಬ್ಬ ಯುವತಿ ಪೂಜಾ ಕೋಣೆಯಲ್ಲಿ ಶವವಾಗಿದ್ದರೆ, ಇನ್ನೊಬ್ಬ ಯುವತಿ ಮತ್ತೊಂದು ಕೋಣೆಯಲ್ಲಿ ಹೆಣವಾಗಿ ಕಂಡುಬಂದಿದ್ದಾಳೆ. ಎರಡೂ ಶವಗಳ ದೇಹಕ್ಕೆ ಕೆಂಪು ಬಣ್ಣದ ಬಟ್ಟೆ ಸುತ್ತಲಾಗಿದ್ದು ಸುತ್ತ ಕೆಲವು ಪೂಜಾ ಸಾಮಗ್ರಿಗಳನ್ನು ಇರಿಸಲಾಗಿತ್ತು.

ದಂಪತಿ ಮೆಹರ್ ಬಾಬಾ, ಸಾಯಿ ಬಾಬಾ ಹಾಗೂ ಓಶೋ ರಜನೀಶ್ ಅನುಯಾಯಿಗಳಾಗಿದ್ದರು. ನಿಯಮಿತವಾಗಿ ಶಿರಡಿಗೆ ಭೇಟಿ ನೀಡುತ್ತಿದ್ದರು. ಅಲಕ್ಯ ಇತ್ತೀಚಿನ ಸಾಮಾಜಿಕ ಜಾಲತಾಣದ ಪೋಸ್ಟ್‌ಗಳೂ ಸಹ ಧಾರ್ಮಿಕ ನಂಬಿಕೆಗಳ **(4ನೇ ಪುಟಕ್ಕೆ)**

## ಜನ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಜಿಲ್ಲೆಯಿಂದ 50 ವಾಹನಗಳು ಭಾಗಿ



### ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಚಾಲನೆ

ದಾವಣಗೆರೆ, ಜ.25- ಬೆಂಗಳೂರಿನಲ್ಲಿ ಜ.26ರಂದು ನಡೆಯಲಿರುವ ಜನ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಜಿಲ್ಲೆಯಿಂದ ರೈತರ ವಾಹನಗಳು ಸೇರಿ ಸುಮಾರು 40ರಿಂದ 50 ವಾಹನಗಳು ಭಾಗವಹಿಸಲಿದ್ದು, ಈ ಹಿನ್ನೆಲೆಯಲ್ಲಿ ಇಂದು ಸಂಜೆ ನಗರದ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಜನ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಲಿರುವ ವಾಹನಗಳಿಗೆ ಜಿಲ್ಲಾ ಪಂಚಾಯ್ತಿ ಸದಸ್ಯ ತೇಜಸ್ವಿ ಪಟೇಲ್ ಚಾಲನೆ ನೀಡಿದರು.

ರೈತ ವಿರೋಧಿ ಕಾನೂನುಗಳ ವಿರುದ್ಧ ಬೆಂಗಳೂರಿನಲ್ಲಿ ರಾಜ್ಯದ ರೈತರು ತಮ್ಮ-ತಮ್ಮ ವಾಹನಗಳ ಮೂಲಕ ಜನ ಗಣರಾಜ್ಯೋತ್ಸವ ಪರೇಡ್ ನಡೆಸುತ್ತಿದ್ದಾರೆ. ಅಲ್ಲಿನ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಮುಖ ರೈತ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ಹೋರಾಟಕ್ಕೆ ಸರ್ಕಾರ ಮಣಿದು ಕಾಯ್ದೆಗಳನ್ನು ವಾಪಾಸ್ ಪಡೆಯದಿದ್ದರೆ, ಮುಂದಿನ ದಿನಗಳಲ್ಲಿ ಹೋರಾಟದ ರೂಪು ರೇಷೆಗಳನ್ನು ಬದಲಾಯಿಸಬೇಕಾಗುತ್ತದೆ ಎಂದು ಸರ್ಕಾರಗಳಿಗೆ ಎಚ್ಚರಿಕೆ ನೀಡಿದರು.

ವಕೀಲ ಅನೀಸ್ ಪಾಷ ಮಾತನಾಡಿ, ಸರ್ಕಾರಗಳು ಕಾನೂನುಗಳನ್ನು ಬದಲಾಯಿಸಿ ರೈತರ ಮೇಲೆ ದೌರ್ಜನ್ಯ ಎಸೆಗುತ್ತಿವೆ. ಈ ದೌರ್ಜನ್ಯಗಳನ್ನು ಪ್ರಶ್ನಿಸಿ ಹೋರಾಟಕ್ಕೆ ಇಳಿದರೆ, ಬೇರೆ-ಬೇರೆ ರೀತಿಯಲ್ಲಿ ಹೋರಾಟಗಳನ್ನು ಹತ್ತಿಕ್ಕುವಂತಹ ಕೆಲಸವನ್ನು ಸರ್ಕಾರಗಳು ಮಾಡುತ್ತಿವೆ. ಆದರೆ ಈ ಬಾರಿ ಮಾತ್ರ ರೈತರು ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ. ನಮ್ಮ ಹೋರಾಟ ಇನ್ನೂ ತೀವ್ರಗೊಳ್ಳಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಸಾದ್ ರೆಡ್ಡಿ ಕಬ್ಬಳ, ಬಲ್ಲೂರು ಆರ್. ನಾಗರಾಜರೆಡ್ಡಿ, ತ್ಯಾವಣಿಗೆ ಕರಿಬಸಪ್ಪ, ಕರೇಕಟ್ಟೆ ಗದಿಗೇಶಿ, ಜಿ. ಅಣ್ಣಪ್ಪ, ಬಲ್ಲೂರ್ ಪರಶುರಾಮ್ ರೆಡ್ಡಿ, ನಾಗರಕಟ್ಟೆ ಬಸವನಗೌಡ, ಆವರಗೆರೆ ಬಸಜ್ಜ, ಆವರಗೆರೆ ಜಯಣ್ಣ, ಪಾಮೇನಹಳ್ಳಿ ಲಿಂಗರಾಜ್, ಈಚಘಟ್ಟೆ ಕರಿಬಸಪ್ಪ, ಸತೀಶ್ ಅರವಿಂದ್, ಮುಸ್ತಾಫಾ ಸೇರಿದಂತೆ ಇತರರು ಇದ್ದರು.

## ಸಾರೆ ಜಹಾಂ ಸೆ ಅಚ್ಛಾ ಹಿಂದೂಸ್ತಾನ್ ಹಮಾರಾ ಹಮಾರಾ...

ಈ ಶುಭ ದಿನವು ಭಾರತ ದೇಶ ಬ್ರಿಟಿಷರ ಆಳ್ವಿಕೆಯ ಗುಲಾಮಗಿರಿಯ ಸರಪಳಿಗಳನ್ನು 1947 ರಲ್ಲಿ ಕಳಚಿ ಸ್ವತಂತ್ರಗೊಂಡ ನಂತರ ನಮ್ಮ ಘನ ಸಂವಿಧಾನವನ್ನು ನಮ್ಮ ಸಾರ್ವಭೌಮ ದೇಶದ ಅಖಂಡತೆಯ ಪ್ರತೀಕವಾಗಿ 26ನೇ ಜನವರಿ 1950 ರಂದು ಅಳವಡಿಸಲ್ಪಟ್ಟ ದಿನವಾಗಿ ಆಚರಿಸಲಾಗುತ್ತಿದೆ.

"ಧರ್ಮವು ಸರ್ವೋತ್ತಮ, ಮತಾಂಧತೆಯು ನಿಂದನೀಯ ಅಖಂಡತೆ, ಸಮಗ್ರತೆ ಮತ್ತು ಪ್ರಜಾಪ್ರಭುತ್ವವನ್ನು ಉಳಿಸೋಣ"...

ಬನ್ನಿ ಜಾತಿ, ಮತ, ಪಂಗಡ, ಭಾಷೆ, ಸಂಪ್ರದಾಯ, ಆಚರಣೆ ಇತ್ಯಾದಿ ಕಚ್ಚಾಟಗಳನ್ನು ತೊರೆದು ಸತ್ಯ, ಸಾಮಾಜಿಕ ನ್ಯಾಯ ಮತ್ತು ಮಾನವ ಧರ್ಮದ ಮೌಲ್ಯಗಳ ಆಧಾರದ ಮೇಲೆ ದೇಶವನ್ನು ಕಟ್ಟೋಣ". ನಮ್ಮ ದೇಶ ಭಾರತ ಸಂಸಾರದಲ್ಲಿ ಅತಿ ಹೆಚ್ಚು ವೈವಿಧ್ಯಗಳಲ್ಲಿ ಏಕತೆಯ ಅಪರೂಪದ ಸ್ವರೂಪವಾಗಿದೆ. ಇಲ್ಲಿ ವಿವಿಧ ಧರ್ಮಗಳು, ಸಂಸ್ಕೃತಿಗಳು, ಭಾಷೆಗಳು, ಸಂಪ್ರದಾಯಗಳು, ಜಾತಿ, ಮತ, ಪಂಗಡ ಹಾಗೂ ಆಚರಣೆಗಳಿದ್ದು, ನಾವೆಲ್ಲರೂ ಭಾರತೀ



ಯರೆಂದು ಒಂದಾಗಿ ಸಾಮರಸ್ಯದಿಂದ ನೂರಾರು ವರ್ಷಗಳಿಂದ ಬಾಳುತ್ತಿರುವುದು ನಮ್ಮ ಐತಿಹಾಸಿಕ ಪರಂಪರೆಯಾಗಿದೆ.

ಸಾಮಾಜಿಕ ಅನ್ಯಾಯವನ್ನು ಹೋಗಲಾಡಿಸಿ, ಸಾಮರಸ್ಯದ ವಾತಾವರಣವನ್ನು ನಿರ್ಮಿಸೋಣ. ಸಮಾಜದಲ್ಲಿ ಸಹಬಾಳ್ವೆ, ನೆಮ್ಮದಿಯನ್ನು ನಿರ್ಮಿಸೋಣ.

ಒಂದು ಕಟು ಸತ್ಯ ಏನೆಂದರೆ ಒಂದು ದಿನ ನಾವೆಲ್ಲರೂ ಒಬ್ಬೊಬ್ಬರಾಗಿ ಮೃತ್ಯುಕೂಪವನ್ನು ಸೇರುವ ವರೇ ಎಂದು ಮನದಲ್ಲಿಟ್ಟುಕೊಂಡು ಸಿಕ್ಕ ಅವಕಾಶವನ್ನು ಪರೋಪಕಾರಕ್ಕೆ ಉಪಯೋಗಿಸಿಕೊಳ್ಳೋಣ.

ಮೃತ್ಯು, ನೈಸರ್ಗಿಕ ಅವಘಡಗಳು, ಮಹಾಪೂರಗಳು, ಚಂಡಮಾರುತಗಳು, ಸಿಡಿಲು, ಚಕ್ರಾವರ್ತಗಳು, ಬೆಂಕಿ ಅನಾಹುತಗಳು, ಸಾಂಕ್ರಾಮಿಕ ಮಹಾಮಾರಿಗಳಿಂದ ಸುರಕ್ಷಿತವಾಗಿರಲು ಸಾಧ್ಯವೇ? ಯಾವುದೇ ಧರ್ಮ ಮತ, ಪಂಗಡ, ಭಾಷೆ, ಸಂಪ್ರದಾಯ ಆಚರಣೆಗಳಿಂದ ನೈಸರ್ಗಿಕ ನಿಯಮಾವಳಿಯಿಂದ ವಿಮುಖನಾಗಲು ಸಾಧ್ಯವೇ...

ಉದಾ : ಹವಾಮಾನ, ಹವೆ, ನೀರು, ಮಳೆ, ಬಿಸಿಲು, ಸೂರ್ಯ, ಚಂದ್ರ, ನಕ್ಷತ್ರಗಳು, ಆಕಾಶ, ಭೂಮಿ, ಸಮುದ್ರ, ಜನನ, ಮರಣ, ಹೆಣ್ಣು, ಗಂಡು ಹಾಗೂ ಮಕ್ಕಳು, ಗಿಡ, ಮರ, ಪರ್ವತ, ಅರಣ್ಯ, ಕಾಡುಗಳು ಇವೆಲ್ಲವುಗಳೂ ಮಾನವ ಜಾತಿಗೆ ಅತಿ ಅಮೂಲ್ಯವಾದ ಪ್ರಕೃತಿಯ ಕೊಡುಗೆಗಳು.

ಮಾನವ ಧರ್ಮವು ಶುದ್ಧ ನೀರಿನ ಹಾಗೆ. ಬಂಗಾರದ ತೊಟ್ಟಿಯಲ್ಲಿ ವಜ್ರದ ನಳಗಳನ್ನು ಕೂಡಿಸಿ, ಅದರಲ್ಲಿಯ ನೀರಿಗೆ ವಿಷ ಬೆರೆಸಿದರೆ ವಿಷವೇ ಹೊರ ಸೂಸುವುದು. ಬಂಗಾರ ವಜ್ರಗಳಿಂದ ನೀರು ಶುದ್ಧವಾಗುವುದೇ. ಅದೇ ರೀತಿಯಾಗಿ ಪ್ಲಾಸ್ಟಿಕ್ ತೊಟ್ಟಿಗಳಲ್ಲಿ ಶುದ್ಧ ನೀರನ್ನು ತುಂಬಲಾಗಿ ಹೊರ ಸೂಸುವುದು ಶುದ್ಧ ನೀರು. ಇದೇ ತೆರನಾಗಿ ನಮ್ಮ ಹೃದಯಗಳಲ್ಲಿ ಶುದ್ಧತೆ ಹಾಗೂ ಸತ್ಯದ ತೊಟ್ಟಿಗಳನ್ನು ಕ್ರೋಢೀಕರಿಸಿ ಬಾಳಿದರೆ ನಮ್ಮ ಧರ್ಮ, ಸಮಾಜ ದೇಶದಲ್ಲಿ ನೆಮ್ಮದಿಯನ್ನು ಕಾಣಬಹುದು.

ದೇವರು - ಜೀವದ ಕೊಡುಗೆ, ತಾಯಿ - ಜನ್ಮದ ಕೊಡುಗೆ, ಹುಟ್ಟೂರು - ರಾಷ್ಟ್ರೀಯ ಜನಗಣತಿ ಕಡತ, ಸ್ವಾತಂತ್ರ್ಯತೆ - ಸಾರ್ವಭೌಮತೆ, ಸಾರ್ವಭೌಮತೆ - ಇಚ್ಛಾ ನುಸಾರ ಆನಂದದಿಂದ ಜೀವಿಸುತ್ತಾ ಬೇರೆಯವರಿಗೆ ಜೀವಿಸಲು ಅನುವಾಗಿರುವುದು, ಪ್ರಜಾಪ್ರಭುತ್ವ - ಪ್ರಜೆ ಗಳು, ಪ್ರಜೆಗಳಿಂದ, ಪ್ರಜೆಗಳಿಗಾಗಿ ನಡೆಯುವ ಆಡಳಿತ, ಸಾಮಾಜಿಕತೆ - ಎಲ್ಲರೂ ಸಮಾನರು, ಮಾನವೀಯ ಸಾಮಾಜಿಕ ಹಾಗೂ ನ್ಯಾಯ, ಕಾನೂನಿನ ಚೌಕಟ್ಟಿನಲ್ಲಿ. ಪರಿಶುದ್ಧ ಆತ್ಮ ನಡವಳಿಕೆ, ಬಾಳ್ವೆ, ಸತ್ಯ, ಅಹಿಂಸೆಯನ್ನು ಆಧರಿಸಿ, ಶಾಂತಿಯುತವಾದ ಜೀವನ ನಡೆಸಲು ಸಾಧ್ಯ.

**- ಅಲ್ಲಾವಲಿ ಸಮೀವುಲ್ಲಾ ಖಾನ್,**
**- ಅಲ್ಲಾವಲಿ ಅಶ್ರಫುಲ್ಲಾ ಖಾನ್**
ವ್ಯಾಪಾರಿಗಳು, ಆರ್.ಎಂ.ಸಿ. ಯಾರ್ಡ್,
ದಾವಣಗೆರೆ.

## ಲಸಿಕೆ: ಅಪಪ್ರಚಾರ ತಡೆಗೆ ಸೂಚನೆ

ನವದೆಹಲಿ, ಜ. 25 – ಕೊರೊನಾ ಲಸಿಕೆಯ ಕುರಿತು ಅಪಪ್ರಚಾರ ಮಾಡುವುದನ್ನು ರಾಜ್ಯಗಳು ತಡೆಯಬೇಕು ಹಾಗೂ ತಪ್ಪು ಮಾಹಿತಿಯನ್ನು ಹರಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ.

ಕೊವಿಶೀಲ್ಡ್ ಹಾಗೂ ಕೊವ್ಯಾಕ್ಸಿನ್ ಲಸಿಕೆಗಳು ಸುರಕ್ಷಿತ ಹಾಗೂ ರೋಗ ನಿರೋಧಕತೆ ತರುತ್ತವೆ ಎಂಬುದನ್ನು ರಾಷ್ಟ್ರೀಯ ಔಷಧ ನಿಯಂತ್ರಕರು ಖಚಿತಪಡಿಸಿದ್ದಾರೆ ಎಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲ ಹೇಳಿದ್ದಾರೆ.

ಆದರೂ ಸಹ, ಸಾಮಾಜಿಕ ಮಾಧ್ಯಮ ಹಾಗೂ ಇತರೆಡೆಗಳ ಮೂಲಕ ಲಸಿಕೆಯ ಕುರಿತು ತಪ್ಪು ದಾರಿಗೆಳೆಯುವ ಹಾಗೂ ಆಧಾರ ರಹಿತ ವರದಿಗಳನ್ನು ಪ್ರಚಾರ ಮಾಡಲಾಗುತ್ತಿದೆ. ಇಂತಹ ಗಾಳಿ ಸುದ್ದಿಗಳಿಂದ ಅದರಲ್ಲು ಸ್ವಹಿತಾಸಕ್ತಕರ ಕೃತ್ಯಗಳಿಂದ ಜನರಲ್ಲಿ ಅನಗತ್ಯ ಅನುಮಾನಗಳು ಉಂಟಾಗಿವೆ. ಹೀಗಾಗಿ ಇಂತಹ ಆಧಾರ ರಹಿತ ಬೆದರಿಕೆಯ ಕೃತ್ಯಗಳನ್ನು ತಡೆಯಬೇಕಿದೆ ಎಂದು ಭಲ್ಲ ತಿಳಿಸಿದ್ದಾರೆ. ರಾಜ್ಯಗಳು ಇಂತಹ ಅಪಪ್ರಚಾರ ತಡೆಗೆ ವ್ಯವಸ್ಥೆ ಹೊಂದಬೇಕು. ಅಪಪ್ರಚಾರದ ಬಗ್ಗೆ ಕ್ರಮ ತೆಗೆದುಕೊಳ್ಳುವ ಜೊತೆಗೆ ವಾಸ್ತವದ ಅಂಶಗಳನ್ನು ತಿಳಿಸಬೇಕು ಎಂದೂ ಅವರು ಹೇಳಿದ್ದಾರೆ.

## ಹರಪನಹಳ್ಳಿ : ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲು ಕರೆ

ಹರಪನಹಳ್ಳಿ, ಜ.25- ಶಿಕ್ಷಣ ಇಲಾಖೆ ಜಾರಿಗೊಳಿಸುತ್ತಿರುವ ಹೊಸ ಹೊಸ ಯೋಜನೆಗಳನ್ನು ಬಳಸಿಕೊಂಡು ಮಕ್ಕಳಲ್ಲಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಮಾಡ್ಲಗೇರಿ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ವೀರಭದ್ರಪ್ಪ ಬಳ್ಳೊಳ್ಳಿ ಶಿಕ್ಷಕರಿಗೆ ಸಲಹೆ ನೀಡಿದರು.

ತಾಲ್ಲೂಕಿನ ಕಾನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸ್ನೇಹಿ ಗ್ರಾಮ ಪಂಚಾಯ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಶಿಕ್ಷಣ ಇಲಾಖೆ ಕೈಗೊಂಡ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಾ ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕ ಪದ್ಧತಿ ಹೆಚ್ಚಾಗುತ್ತಿದ್ದು, ಅವುಗಳನ್ನು ತಡೆಯುವ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಜೊತೆಗೆ ಸಾರ್ವಜನಿಕ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ಬಡ್ತಿ ಮುಖ್ಯ ಶಿಕ್ಷಕಿ ಲಕ್ಷ್ಮವ್ವ ರಂಗಣ್ಣನವರ ಮಾತನಾಡಿ, ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ಮಹತ್ವದ್ದು. ಶಿಕ್ಷಕರ ಜೊತೆಗೆ


**ವೀರಭದ್ರಪ್ಪ ಬಳ್ಳೊಳ್ಳಿ**

ಗ್ರಾಮಸ್ಥರ ಸಹಕಾರವಿದ್ದರೆ ಶೈಕ್ಷಣಿಕ ಅಭಿವೃದ್ಧಿ ಜೊತೆಗೆ ಮೂಲ ಸೌಲಭ್ಯ ಸಹ ಒದಗುತ್ತದೆ ಎಂದು ಹೇಳಿದರು.

ಬಂಡ್ರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡ್ತಿ ಮುಖ್ಯ ಶಿಕ್ಷಕ ಡಿ.ರಾಮಣ್ಣ ಅಪೌಷ್ಟಿಕತೆ ಬಗ್ಗೆ ಮಾಹಿತಿ ನೀಡಿದರು. ಮುಖಂಡ ಮಾಗಳದ ರಾಮಕೃಷ್ಣ ಮಾತನಾಡಿದರು. ಅಗ್ರಹಾರದ ಷಣ್ಮುಖಪ್ಪ ಅವರು 25 ಸಾವಿರ ರೂ.ದೇಣಿಗೆಯನ್ನು ಶಾಲಾಭಿವೃದ್ಧಿಗೆ ನೀಡುವುದಾಗಿ ಭರವಸೆ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕಾನಹಳ್ಳಿ ರುದ್ರಪ್ಪ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಕೆ. ಪರಸಪ್ಪ, ಅಗ್ರಹಾರದ ವೀರಪ್ಪಜ್ಜ, ಗ್ರಾಪಂ ಸದಸ್ಯರುಗಳಾದ ಕೊಳಚಿ ನಾಗರಾಜ, ಹೆಚ್. ಉಚ್ಚೆಂಗೆಪ್ಪ, ಮಾಗಳದ ನಿರ್ಮಲ, ಮುತ್ತಿಗೆ ಪ್ರಕಾಶ, ಹಿರಿಯ ಶಿಕ್ಷಕಿ ಮಹಾಲಕ್ಷ್ಮಿ, ಮುಖ್ಯ ಶಿಕ್ಷಕರಾದ ಬಿಕ್ಕಿಕಟ್ಟೆ ತಿಮ್ಮಣ್ಣ, ಮೆಹಬೂಬ ಬಡಗಿ, ಶಿಕ್ಷಕರಾದ ಜಯಪ್ರಕಾಶ, ಗೌರಮ್ಮ, ಕಬ್ಬಳ್ಳಿ ಗೀತಾ, ಶಫಿ, ಗೌರಮ್ಮ, ಮಂಜುಳಾ, ಖಾಜಾಬೀ ಇನ್ನಿತರರಿದ್ದರು.

### ಕಾಣೆಯಾಗಿದ್ದಾರೆ



ದಾವಣಗೆರೆ ತಾಲ್ಲೂಕು ಕುಕ್ಕುವಾಡ ಗ್ರಾಮದ ವಾಸಿ ಕಮಲಮ್ಮ ದಿ.ಮಲ್ಲೇಶಪ್ಪ ಇವರ ಪುತ್ರ ಜಿ.ಎಮ್. ರವಿ ಇವರು ಬೆಂಗಳೂರಿಗೆ ಕೆಲಸಕ್ಕೆ ಸೇರುವುದಾಗಿ ಹೇಳಿ ಹೋದವರು ಇದುವರೆಗೂ ವಾಪಸ್ ಬಂದಿರುವುದಿಲ್ಲ. ಇವರ ಸುಳಿವು ಯಾರಿಗಾದರೂ ಸಿಕ್ಕಲ್ಲಿ ಹದಡಿ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಕೋರಲಾಗಿದೆ.

### ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007
ದೂರವಾಣಿ ಸಂಖ್ಯೆ:08192-208029, ಫ್ಯಾಕ್ಸ್:08192-208008

**ಸಂಖ್ಯೆ:ದಾವಿವಿ/ಶೈ/184/2020-21/4712** **ದಿನಾಂಕ:25.01.2021**

**ಅಧಿಸೂಚನೆ**

**ವಿಷಯ:- ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ (MBA) ಅಧ್ಯಯನ ವಿಭಾಗದಲ್ಲಿ 2020-21ನೇ ಶೈಕ್ಷಣಿಕ ಸಾಲಿಗೆ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಕುರಿತು.**

**ಉಲ್ಲೇಖ:- ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:22.01.2021.**

ವಿಶ್ವವಿದ್ಯಾನಿಲಯದ 2020-21ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಆಡಳಿತ ನಿರ್ವಹಣಾಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಖಾಲಿ ಇರುವ ಸೀಟುಗಳನ್ನು ಭರ್ತಿ ಮಾಡುವ ಸಂಬಂಧ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸೀಟು ಹಂಚಿಕೆ, ಪ್ರವೇಶ ಪರೀಕ್ಷೆ ಹಾಗೂ ಇತರೆ ಪ್ರಕ್ರಿಯೆಗಳನ್ನು ಈ ಕೆಳಕಂಡ ವಿಧಾನದಲ್ಲಿ ಭರ್ತಿ ಮಾಡಲಾಗುವುದು.

| ಕ್ರ.ಸಂ. | ವಿವರ | ಪ್ರವೇಶಾತಿ ದಿನಾಂಕ |
|---|---|---|
| 1 | ಪ್ರವೇಶ ಅರ್ಜಿ ವಿತರಿಸುವ ದಿನಾಂಕ (Date of Application Issuing) | 25.01.2021 |
| 2 | ಪ್ರವೇಶ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ (Last Date for submission of Application) | 30.01.2021 |
| 3 | ಪ್ರವೇಶ ಪರೀಕ್ಷಾ ದಿನಾಂಕ (Entrance Exam Date) | 01.02.2021 |
| 4 | ಪ್ರವೇಶಾತಿ ದಿನಾಂಕ (Admission Date) | 02.02.2021 |

**ನಿಬಂಧನೆಗಳು:-** (1) ಯು.ಜಿ.ಸಿ.ಯಿಂದ ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದ ಪದವೀಧರರು ಪ್ರವೇಶ ಪರೀಕ್ಷೆಗೆ ಅರ್ಹರಾಗಿರುತ್ತಾರೆ. (2) ಪ್ರವೇಶ ಪರೀಕ್ಷೆಗೆ ಸಾಮಾನ್ಯ/ಓಬಿಸಿ ವರ್ಗದ ವಿದ್ಯಾರ್ಥಿಗಳು **ಶೇ.50ರಷ್ಟು** ಹಾಗೂ ಪ.ಜಾ/ಪ.ಪಂ/ಪ್ರವರ್ಗ-1ರ ವಿದ್ಯಾರ್ಥಿಗಳು **ಶೇ.45ರಷ್ಟು** ಅಂಕಗಳನ್ನು ಪಡೆದಿರಬೇಕು. (3) ಅರ್ಜಿ ಮತ್ತು ಪ್ರವೇಶ ಪರೀಕ್ಷೆ ಶುಲ್ಕ ಸಾಮಾನ್ಯ/ಓಬಿಸಿ ವರ್ಗದವರಿಗೆ **ರೂ.965**/- ಮತ್ತು ಪ.ಜಾ/ಪ.ಪಂ/ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ **ರೂ.490**/-ಗಳನ್ನು ನಿಗದಿಪಡಿಸಲಾಗಿದೆ. (4) ನಿಗದಿತ ಶುಲ್ಕವನ್ನು ಡಿಡಿ/ ಚಲನ್ ಮೂಲಕ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರ ಪದನಾಮದಲ್ಲಿ ಪಡೆದು ಅರ್ಜಿಗೆ ಲಗತ್ತಿಸತಕ್ಕದ್ದು. (5) ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಶೈಕ್ಷಣಿಕ ದಾಖಲೆಗಳನ್ನು/ ಜಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಅರ್ಜಿಗಳಿಗೆ ಲಗತ್ತಿಸುವುದು. (6) ಪ್ರವೇಶಾತಿ ಪ್ರಕ್ರಿಯೆಗಳನ್ನು ವಿಶ್ವವಿದ್ಯಾನಿಲಯದ ಪ್ರವೇಶಾತಿ ನಿಯಮಗಳನುಸಾರ ಮೆರಿಟ್ ಕಮ್ ರೋಸ್ಟರ್ (Merit cum Roaster) ಅನುಗುಣವಾಗಿ ಮಾಡಲಾಗುವುದು.

**ಸೂಚನೆಗಳು:-** (1) ಪ್ರವೇಶ ಪರೀಕ್ಷೆಯ ಸಮಯ ಬೆಳಿಗ್ಗೆ 11:30 ರಿಂದ ಮಧ್ಯಾಹ್ನ 12:30 ರವರೆಗೆ ಫಲಿತಾಂಶದ ಸಮಯ ಮಧ್ಯಾಹ್ನ 3:00ಗಂಟೆಗೆ. (2) ದಿನಾಂಕ:02.02.2021ರಂದು ಪ್ರವೇಶಾತಿಯನ್ನು ಪ್ರಾರಂಭಿಸಲಾಗುವುದು. (3) ಹೆಚ್ಚಿನ ಮಾಹಿತಿಗಾಗಿ ಎಂ.ಬಿ.ಎ ವಿಭಾಗದ ಅಧ್ಯಕ್ಷರನ್ನು ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ:9008666889

ಆದೇಶಾನುಸಾರ
**ಕುಲಸಚಿವರು**

## ಹರಪನಹಳ್ಳಿಗೆ ಸಂಸದ ಸಿದ್ದೇಶ್ವರ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 9 ಗಂಟೆಗೆ ದಾವಣಗೆರೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ ನಡೆಯುವ 72ನೇ ವರ್ಷದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ನಂತರ ಮಧ್ಯಾಹ್ನ 12.30 ಗಂಟೆಗೆ ಹರಪನಹಳ್ಳಿ ತಾಲ್ಲೂಕಿನ ಗೌರಿಹಳ್ಳಿ ಗ್ರಾಮದಲ್ಲಿ ಪಿ.ಎಂ.ಜಿ.ಎಸ್.ವೈ ರಸ್ತೆ ನಿರ್ಮಾಣ ಕಾಮಗಾರಿಯ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

ಸಂಜೆ 5 ಗಂಟೆಗೆ ದಾವಣಗೆರೆಯ ಜಯನಗರ 'ಸಿ' ಬ್ಲಾಕ್‌ನಲ್ಲಿ ನಾಗರಿಕ ಹಿತರಕ್ಷಣಾ ಸಮಿತಿಯ ವತಿಯಿಂದ ಕದಂಬ ಉದ್ಯಾನವನದ ಆವರಣದಲ್ಲಿ ಏರ್ಪಡಿಸಿರುವ 72ನೇ ವರ್ಷದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

## ನಗರದಲ್ಲಿ ಇಂದು

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಡಿ.ಸಿ.ಎಂ. ಟೌನ್‌ಶಿಪ್ ಶಾಖೆಯ ಪ್ರಥಮ ವಾರ್ಷಿಕೋತ್ಸವ ಮತ್ತು ಗಣರಾಜ್ಯೋತ್ಸವ ಇಂದು ಮಧ್ಯಾಹ್ನ 4 ಗಂಟೆಗೆ ಡಿ.ಸಿ.ಎಂ.ಟೌನ್‌ಶಿಪ್‌ನ ಶ್ರೀ ಚೌಡೇಶ್ವರಿ ದೇವಸ್ಥಾನದ ಆವರಣದಲ್ಲಿ ಇರುವ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಎಸ್.ಟಿ.ವೀರೇಶ್ ಉದ್ಘಾಟಿಸಲಿದ್ದಾರೆ. ಶಾರದಮ್ಮ ಶಿವನಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಆರ್. ವಿಜಯಕುಮಾರ್, ಕೆ.ನಾಗರಾಜ್, ಕೆ.ಹೆಚ್.ಮಂಜುನಾಥ್, ಹೇಮಾ ಶಾಂತಪ್ಪ ಪೂಜಾರಿ, ಸುಜಾತ ಬಸವರಾಜ್, ಶಾರದಮ್ಮ ಮೂಡಲಗಿರಿಯಪ್ಪ ಆಗಮಿಸುವರು.




## ಹರಿಹರದ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ಹರಿಹರ.

**ಓ.ಎಸ್. ನಂ. 65/2009**

ವಾದಿ : ಗೋಪಿನಾಥಾಚಾರ್ ತಂದೆ ಶೇಷಗಿರಿ ಆಚಾರ್, 53 ವರ್ಷ, ವ್ಯವಸಾಯ, ನಾಡಿಗೇರ ಓಣಿ, ಕೋಟೆ, ಹರಿಹರ ನಗರ. - ವಿರುದ್ಧ-

ಪ್ರತಿವಾದಿಯರು : 2 (ಬಿ) ಕೆ. ರೂಪ ತಂದೆ ಲೇಟ್ ಶ್ರೀನಿವಾಸ ಮೂರ್ತಿ ಸುಮಾರು 35 ವರ್ಷ ವಯಸ್ಸು, ವಾಸ : ಕಸ್ತೂರಿಬಾಯಿ ಕಲ್ಯಾಣ ಮಂಟಪ ರಸ್ತೆ, ಹಳೇಹರ್ಲಾಪುರ, ಹರಿಹರ ನಗರ.

**ಪ್ರತಿವಾದಿ ನಂ. 2-(ಬಿ) ಇವರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆರ್ಡರ್ 5 ರೂಲ್ 20 (1ಎ) ರ ಪ್ರಕಾರ ನೋಟಿಸ್ಸು/ಸಮನ್ಸ್.**

ಈ ಮೇಲಿನ ಪ್ರಕರಣದಲ್ಲಿ ವಾದಿಯು ಪ್ರತಿವಾದಿಯರ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗಳ ಬಗ್ಗೆ ಹಿಸ್ಸಾ ಕೋರಿ ದಾವೆ ಸಲ್ಲಿಸಿದ್ದು, ದಿನಾಂಕ : 16.10.2001ರಂದು ಆದ ನೋಂದಣಿ ದಾನ ಪತ್ರ ದಿನಾಂಕ : 1.6.2009ರಂದು ಆದ ನೋಂದಣಿ ಕ್ರಯಪತ್ರ ತನಗೆ ಬಂಧನಕಾರಿಯಲ್ಲವೆಂದು ಘೋಷಿಸಬೇಕೆಂತಲೂ ದಾವೆ ಸಲ್ಲಿಸಲಾಗಿದ್ದು. ಸದರಿ ದಾವೆಯಲ್ಲಿ 2 (ಬಿ) ಪ್ರತಿವಾದಿಯಾದ ನಿಮಗೆ ಕೋರ್ಟ್‌ನಿಂದ ಸಮನ್ಸ್ ಕಳುಹಿಸಿದ್ದು, ನೀವು ಉದ್ದೇಶ ಪೂರ್ವಕವಾಗಿ ಅದನ್ನು ಪಡೆದಿಲ್ಲವೆಂದು ವಾದಿ ಅರ್ಜಿ ಸಲ್ಲಿಸಿದ್ದು, ಈ ಮೇಲಿನ ಪ್ರಕರಣವು ದಿನಾಂಕ : 10.02.2021ರಂದು ಬೆಳಿಗ್ಗೆ 11.00 ಗಂಟೆಗೆ ಈ ನ್ಯಾಯಾಲಯದಲ್ಲಿ ಹಾಜರಾಗಿ ನಿಮ್ಮ ತಕರಾರುಗಳಿದ್ದರೆ ತಾವಾಗಲೀ, ತಮ್ಮ ವಕೀಲರ ಮೂಲಕ ಆಗಲೀ ಅವುಗಳನ್ನು ಸಲ್ಲಿಸಲು ತಿಳಿಸಲಾಗಿದೆ. ಇಲ್ಲವಾದಲ್ಲಿ ಪ್ರಕರಣವನ್ನು ಕಾನೂನು ರೀತಿ ನಿಮ್ಮ ಗೈರು ಹಾಜರಿಯಲ್ಲಿ ಏಕತರ್ಫಿ ಇತ್ಯರ್ಥಪಡಿಸಲಾಗುವುದು ತಿಳಿಯಿರಿ. ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ : 23.01.2021 ರಂದು ನೀಡಲಾಗಿದೆ.

**ಸ್ಥಳ : ಹರಿಹರ, ದಿನಾಂಕ : 22.1.2021**
**ಸಹಿ/- ಬಿ. ಹಾಲಪ್ಪ, ಬಿ.ಎಸ್ಸಿ.ಎಲ್.ಎಲ್.ಬಿ.,**
**ವಾದಿಪರ ವಕೀಲರು, ಹರಿಹರ.**

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- (ಶಿರಸ್ತೇದಾರರು) ಪ್ರಧಾನ ಸಿವಿಲ್ ನ್ಯಾಯಾಧೀಶರು, ನ್ಯಾಯಾಲಯ.**

## ಪ್ರಜಾಪ್ರಭುತ್ವ ದೇಶ

ನಮ್ಮ ಸಂವಿಧಾನ
ಜಾರಿಗೆ ಬಂದ ಈ ಶುಭ ದಿನ
ನಮ್ಮೆಲ್ಲರಿಗೂ ಹೊಸತನ
ಅದುವೇ ಗಣರಾಜ್ಯೋತ್ಸವದ ಸುದಿನ

ನಮ್ಮದು ಅತಿದೊಡ್ಡ ಪ್ರಜಾಪ್ರಭುತ್ವ ದೇಶ
ವೇಷ ಹಲವಿದ್ದರೂ ಬಿಡೋಣ ನಮ್ಮಲ್ಲಿಯ ದ್ವೇಷ
ಸಾಧನೆಗೆ ಇರಲಿ ನಮ್ಮಲ್ಲಿ ವೈವಿಧ್ಯಮಯ ಕನಸು
ಆದರೆ ಎಲ್ಲರಲ್ಲಿ ಇರಲಿ ನಾವೆಲ್ಲ ಒಂದೇ
ಎನ್ನುವ ಏಕತಾ ಮನಸು

ಪ್ರಜೆಗಳ ಆಳಲು ಶಾಸಕಾಂಗ
ಪ್ರಜೆಗಳಿಗೆ ನ್ಯಾಯ ಒದಗಿಸಲು ನ್ಯಾಯಾಂಗ
ಜನರಿಗಾಗಿ ಕೆಲಸ ಮಾಡುವ ಕಾರ್ಯಾಂಗ
ಜಗತ್ತನ್ನೇ ಬೆರಗುಗೊಳಿಸಿದ ನಮ್ಮ
ಸಂವಿಧಾನದ ಅಂಗ

ಇಂದು ಬಾನಂಗಳದಲ್ಲಿ ಭಾರತದ ಬಾವುಟ
ಹಾರಾಡುತ್ತಿರುವುದು ಎತ್ತರದಿ ಪಟ ಪಟ
ವಿವಿಧ ಮೂಲೆಯಿಂದ ಹೊಮ್ಮುವುದು
ದೇಶ ಪ್ರೇಮದ ಭಾಷಣ
ಜೊತೆಗೆ ದೇಶದ ವಿವಿಧ ಸಂಸ್ಕೃತಿಗಳ ಚಿತ್ರಣ

ದೇಶಕ್ಕಾಗಿ ಒಗ್ಗಟ್ಟಿನಿಂದ ಹೋರಾಡೋಣ
ಶತ್ರುಗಳ ಮೆಟ್ಟಿನಿಂತು ಮುಂದೆ ಸಾಗೋಣ
ಈ ದಿನ ವೀರ ಯೋಧರ ನೆನೆಯೋಣ
ಸ್ವಾತಂತ್ರ್ಯ ಹೋರಾಟಗಾರರ ಮತ್ತೊಮ್ಮೆ ಸ್ಮರಿಸೋಣ

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಗಣರಾಜ್ಯೋತ್ಸವ

ಭಾರತೀಯರೆಲ್ಲರಿಗೂ ಹೆಮ್ಮೆಯ ದಿವಸ
ದಿನಾಂಕ ಇಪ್ಪತ್ತಾರು- ತಿಂಗಳು ಜನವರಿ
ಭಾರತ ಸಶಸ್ತ್ರ ಪಡೆಗಳ ಪ್ರಭಾತ್‌ಭೇರಿ

ಡಾ॥ ಬಿ. ಆರ್ . ಅಂಬೇಡ್ಕರ್ ರವರಿಂದ
ಭಾರತ ಸಂವಿಧಾನ ಆರಂಭ
ರಾಜಧಾನಿ ನವದೆಹಲಿಯ ರಾಜಪತ್ನಲ್ಲಿ
ಪುಷ್ಪಾಲಂಕಾರಗಳಿಂದ ಸಜ್ಜಾಗಿದೆ ಧ್ವಜಸ್ತಂಭ

ವಿವಿಧ ದೇಶಗಳಿಂದ ಅತಿಥಿಗಳ ಆಗಮನ
ನಮ್ಮ ರಾಷ್ಟ್ರಪತಿಗಳಿಂದ ಧ್ವಜಾರೋಹಣ
ಸಕಲ ಮರ್ಯಾದೆಗಳೊಂದಿಗೆ 'ಜನ ಗಣ ಮನ'
ಗಣ್ಯರಿಂದ ರಾಷ್ಟ್ರವನ್ನುದ್ದೇಶಿಸಿ ಭಾಷಣ

ಶಾಲೆಯ ಮಕ್ಕಳಿಂದ ಶಿಸ್ತಿನ ಪರೇಡು
ವಿವಿಧ ಆಚರಣೆಗಳಲ್ಲಿ ತಲ್ಲೀನ ನಾಡು
ದೇಶಭಕ್ತಿ- ಸಾಂಸ್ಕೃತಿಕ ಸಂಭ್ರಮ ಒಂದೆಡೆ
ಹಲವು ಬಗೆಯ ಸಿಹಿ ತಿನಿಸು ವಿತರಣೆ

ರಾಜಪತ್‌ನಲ್ಲಿನ ವಿಧ್ಯುಕ್ತ ಮೆರವಣಿಗೆ
ಅಭಿಮಾನಿಗಳಿಂದ 'ಸಾರೇ ಜಹಾನ್ ಸೇ ಅಚ್ಚಾ'
ಗುನುಗುವಿಕೆ
ವಿವಿಧ ರಾಜ್ಯಗಳ ಸ್ಥಬ್ದ ಚಿತ್ರದ ನೋಟ
ಕಣ್ತುಂಬಿಸಿಕೊಳ್ಳುವ ಪ್ರೇಕ್ಷಕ ಮೂಕವಿಸ್ಮಿತ

ನಮ್ಮ ದೇಶ -ನಮ್ಮ ಹೆಮ್ಮೆ
ಹಲವು ಬಗೆಯ ವೈವಿಧ್ಯತೆ
ಒಂದೇ ರಾಷ್ಟ್ರ ಬಗೆಬಗೆಯ ವೇಷ
ಅನೇಕತೆಯಲ್ಲಿ ಏಕತೆ

**- ಡಾ॥ ದೀಪಶ್ರೀ ಪ್ರಮೋದ್ ಗುಜ್ಜರ್**

## ಗಣತಂತ್ರ ದಿವಸದ ಶುಭಾಶಯಗಳು

## ಗಣತಂತ್ರವು ಬಂದಿದೆ

ಗಣತಂತ್ರದ ಶುಭದಿನವಿದು ಮತ್ತೆ ಬಂದಿದೆ
ಗುಣವಂತರಾಗಿ ನಾವ್ ಆಚರಿಸೋಣ
ಹಣ ಅಧಿಕಾರದ ಆಮಿಷ ಸುಡೋಣ
ಕಣ ಕಣದಲೂ ದೇಶಭಕ್ತರಾಗೋಣ

ಸಂವಿಧಾನವನ್ನು ಗೌರವಿಸೋಣ
ಸಂವಿಧಾನದಂತೆ ಕರ್ತವ್ಯ ಮಾಡೋಣ
ಸಂಯಮದಿ ಜೊತೆಯಾಗಿ ಮೇಲೇಳೋಣ
ಸಂಭ್ರಮದಿ ತಿರಂಗಾಧ್ವಜ ಹಾರಿಸೋಣ

ನಿದ್ದೆಯಿಂದ ಇನ್ನಾದರು ಎದ್ದೇಳೋಣ
ಬದ್ಧರಾಗಿ ದೇಶಕೆ ನಾವ್ ದುಡಿಯೋಣ
ಮುದ್ದಾದ ಮಕ್ಕಳಲಿ ಕಿಚ್ಚಚ್ಚೋಣ
ಗುದ್ದಾಟ ನಿಲ್ಲಿಸಿ ಒಂದಾಗೋಣ

ವಿಜ್ಞಾನ ತಂತ್ರಜ್ಞಾನ ಅಧ್ಯಾತ್ಮಿಕತೆ
ಸುಜ್ಞಾನದ ಬೀಡೇ ಈ ಭಾರತ ಮಾತೆ
ಅಜ್ಞಾನದ ಕತ್ತಲು ಹೊರದೂಡೋಣ
ಪ್ರಾಜ್ಞ ಪ್ರಜೆಗಳಾಗಿ ಜಯ ಕೋರೋಣ

ಬನ್ನಿ ಬನ್ನಿ ಇಂದೇ ಸಂಕಲ್ಪ ಮಾಡೋಣ
ತನ್ನಿ ತನ್ನಿ ಮನಃಸ್ಸಾಕ್ಷಿ ಕಂಕಣ ಕಟ್ಟೋಣ
ಇನ್ನು ಮುಂದೆ ಏಳಿಗೆಯೆ ಧ್ಯೇಯವೆನ್ನೋಣ
ತನುಮನಧನ ಕೊಟ್ಟು ದೇಶ ಕಾಪಾಡೋಣ

**- ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್**

## ಭಾರತವಿದು 'ಸಾರ್ವಭೌಮ ಗಣರಾಜ್ಯ'

ಭಾರತ ನಮ್ಮದು 'ಸಾರ್ವಭೌಮ ಗಣರಾಜ್ಯ'
ಹಕ್ಕು ಬಾಧ್ಯತೆಗಳ ಬಗೆಗೆ 'ನಮ್ಮಲ್ಲಿಲ್ಲ ವ್ಯಾಜ್ಯ'
ಎಲ್ಲದನೂ ಸ್ಪಷ್ಟವಾಗಿ ಹೇಳಿದೆ ಸಂವಿಧಾನ
ಇದರ ರಚನೆಯಲ್ಲಿ ನಾವು ಮಾಡಲಿಲ್ಲ ನಿಧಾನ.

ಜಾರಿಗೆ ಬಂತಿದು 1950ರ ಜನವರಿ ಇಪ್ಪತ್ತಾರಕೆ
ಮೆರೆದಿದೆ ವಿಶ್ವದೆಲ್ಲೆಡೆ ಭಾರತದ ಕೀರ್ತಿ ಪತಾಕೆ,
ನಮ್ಮ ಸಂವಿಧಾನವಿದು ಜಗತ್ತಲಿ ಸರ್ವ ಶ್ರೇಷ್ಠ
ಇದರಲ್ಲಿನ ವಿಧಿ, ಪರಿಚ್ಛೇದಗಳೆಲ್ಲವೂ ಉತ್ಕೃಷ್ಟ

'ಜಾತ್ಯತೀತವು' ನಮ್ಮ ದೇಶ 'ಪೂರ್ಣ ಸ್ವತಂತ್ರ'
ನಿಜವಾಗಿದೆ ಇಲ್ಲಿ ಸರ್ವ ಸಮಾನತೆ ಮಂತ್ರ,
'ಪ್ರಜಾಸತ್ತಾತ್ಮಕ ಗಣರಾಜ್ಯ'ವಿಲ್ಲಿ ಸಾಕಾರ
ಜನರಿಂದಾಯ್ಕೆಗೊಂಡವರಿಂದಲೇ ಸರ್ಕಾರ.

ಬೃಹತ್ ಆರ್ಥಿಕ ಶಕ್ತಿಯಾಗಿ ಹೊಮ್ಮಬೇಕಿದೆ ದೇಶ
ಇದರಲ್ಲಿದೆ ಯುವ ಜನತೆಗೆ ಮಹದವಕಾಶ
ರಾಷ್ಟ್ರ ರಕ್ಷಣೆಗೆ ಅಸುನೀಗಿದ ಯೋಧರು ಅಮರ
ಹೃದಯ ತುಂಬಿ ಹೇಳುವ 'ಭಾರತ ಮಾತೆಗೆ ಜಯಕಾರ'

**- ಹೆಚ್.ಬಿ.ಮಂಜುನಾಥ, ಹಿರಿಯ ಪತ್ರಕರ್ತ**

## ತ್ರಿವರ್ಣ ಧ್ವಜಕ್ಕೆ ನಮನ

ಹೆಮ್ಮೆಯ ಹಬ್ಬ ಇಂದು
ಹಿರಿಮೆಯ ಗರಿ ಭಾರತೀಯರಿಗಿಂದು
ಹಿರಿದಾದ ಸಂವಿಧಾನದ ಉಗಮ
ಹಾಸುಹೊಕ್ಕಾಗಿದೆ ನಮ್ಮ ಹಕ್ಕು ಬಾಧ್ಯತೆ

ಸ್ವತಂತ್ರಕ್ಕಾಗಿ ಶ್ರಮಿಸಿದವರ
ಸ್ವತಂತ್ರಕ್ಕಾಗಿ ಬಲಿದಾನ ಮಾಡಿದವರ
ಸ್ವತಂತ್ರ ತಂದುಕೊಟ್ಟವರ
ಸ್ವತಂತ್ರ ಯೋಧರ ನೆನೆವೆವೆಲ್ಲಾ

ಸಂವಿಧಾನ ಪಿತಾಮಹರು
ಸರ್ವರಲ್ಲೂ ದೇಶಪ್ರೇಮ ಉಕ್ಕಿಸಿದವರು
ಸರ್ವಮತಗಳು ಒಂದೇ ಎಂದು ಸಾರಿದವರು
ಸಮಸ್ತ ಭಾರತೀಯರ ಕಣ್ಮಣಿ ಡಾ. ಅಂಬೇಡ್ಕರರು

ತ್ರಿವರ್ಣ ಧ್ವಜಕ್ಕೆ ನಮಿಸುವ
ತ್ರಿವಿಧ ಸೇವೆಯ ಗಡಿ ರಕ್ಷಕರಿಗೆ ನಮಿಸುವ
ವಂದೇಮಾತರಂ ಎಂದು ಹಾಡುವ
ಜೈ ಭಾರತ್ ಎಂದು ಗರ್ವದಿಂದ ಬೀಗುವ

1950ರ ಜನವರಿ 26 ರಂದು ಸಂವಿಧಾನದ ಉಗಮ
ಗಣರಾಜ್ಯೋತ್ಸವ ಆಚರಣೆ ಮಹಿಮ
ಗಣನಿಯ ದೇಶಪ್ರೇಮ ಮೆರೆವಾ ಗರ್ವಪಡುವ
ನಾವು ಭಾರತಿಯರೆಂದು

**- ಕೋಮಲ ವಿ.ಕುಮಾರ್**

## ಗಣ ರಾಜ್ಯೋತ್ಸವ ಜನಮನ ಉತ್ಸವ

ಗಣ ಗಣ ಗಣಸಂಗಮ
ಭಾರತ ಭೂರಮೆ ವಿಹಂಗಮ
ಗಣ ರಾಜ್ಯೋತ್ಸವ ನವ ಚೈತನ್ಯ
ಭಾವೈಕ್ಯತೆಯಲಿ ಬೆರೆತ ಬಂಧನ.

ಸಂಸ್ಕೃತಿಯದು ಮಣ್ಣಿನ ಕಣದಲ್ಲಿ
ಕಂಪನು ಬೀರುತ ಬೆಸುಗೆಯಲಿ
ಪ್ರಕೃತಿ ಮಾತೆಯ ಮಮತೆಯಲಿ
ಅರಳಿತು ರಾಜ್ಯವು ಚೆಲುವಿನಲಿ.

ಪುರಾಣ-ಇತಿಹಾಸದ ವೈಭವವು
ಮೆರೆದಿದೆ ನಮ್ಮ ಮಹಾಭಾರತವು
ವಿಭಿನ್ನತೆಯಲ್ಲಿಹ ಏಕತೆಯಲ್ಲಿ....
ಮಾನವತೆ ಬಿಂಬಿಸಿದ ಸಂಸ್ಕೃತಿಯು.

ಭಾಷೆಯು-ವೇಷವು ಪರಿಪರಿಯಲ್ಲಿ
ಭಾವುಕ ಮನಸದು ಕಾರುಣ್ಯದಲಿ
ಭಾರತ ದೇಶದ ರಾಜ್ಯವು ಸಿರಿಸಂಪದವು
ಹಿರಿಮೆ-ಗರಿಮೆಯಲಿ ವಿಶ್ವವಿಖ್ಯಾತವು.

**- ವೀಣಾ ಕೃಷ್ಣಮೂರ್ತಿ, ದಾವಣಗೆರೆ.**

# '72 ನೆಯ ಗಣರಾಜ್ಯೋತ್ಸವದ ಸಂಭ್ರಮ'

**(3ನೇ ಪುಟದಿಂದ)** ಸ್ವಭಾವವನ್ನು ನಿರ್ಧರಿಸುವ ನಿಯಮ ಮಾತ್ರವಾಗಿರದೆ, ರಾಜ್ಯದ ಮೂಲ ತತ್ವಗಳನ್ನೂ ಪ್ರತಿಬಿಂಬಿಸುವುದು. ರಾಜ್ಯವು ತನಗಾಗಿ ಆಯ್ಕೆ ಮಾಡಿಕೊಂಡ ಜೀವನದ ಒಂದು ಮಾರ್ಗವಾಗಿರದೆ, ಸಮಗ್ರ ರಾಜಕೀಯ ತಳಪಾಯವೂ ಆಗಿದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ರಾಜ್ಯದ ಪರಮೋಚ್ಚ ಅಧಿಕಾರವನ್ನು ಹಂಚಿಕೆ ಮಾಡುವಲ್ಲಿ ಪ್ರಭಾವ ಬೀರುವ ನಿಯಮಗಳನ್ನು ಸಂವಿಧಾನವು ಒಳಗೊಂಡಿದೆ. ಈ ಎಲ್ಲಾ ಅಂಶಗಳನ್ನು ಪ್ರಜೆಗಳಿಗೆ ತಲುಪಿಸುವ ನಿಟ್ಟಿನಲ್ಲಿ ಗಣರಾಜ್ಯೋತ್ಸವ ಸಂಭ್ರಮ ಸಹಕಾರಿಯಾಗುವುದು.

ಭಾರತ ವಿಶ್ವದಲ್ಲಿಯೇ ಅತ್ಯಂತ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಪ್ರಜೆಗಳೇ ಪ್ರಭುಗಳು. ನಾವು ಎಂತಹ ನಾಯಕರನ್ನು ಆರಿಸಿ, ಸರ್ಕಾರ ರಚಿಸಲು ಕಳುಹಿಸಿಕೊಡುತ್ತೇವೆ ಎಂಬುದು ಮುಖ್ಯ. ಅಮೆರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ರವರು 'ಪ್ರಜಾಪ್ರಭುತ್ವ ' ಎಂಬ ಪದವನ್ನು "ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ (by the people, for the people, of the people) ಆಡಳಿತ ನಡೆಸುವ ಸರ್ಕಾರ ಎಂದು ಬಣ್ಣಿಸಿದ್ದಾರೆ. ಆದರೆ ಈ ಮಾತು ಆ ಕಾಲಕ್ಕೆ ಸರಿ, ಇದೀಗ ಇದಕ್ಕೆ ಬೇರೆಯದೇ ಅರ್ಥವಿದೆ. ಅಂದರೆ, buy the people, far the people and off the people ಎನ್ನುವಂತಾಗಿದೆ. ಪ್ರಜಾಪ್ರಭುತ್ವದ ಅಳಿವು ಉಳಿವು ದೇಶದ ಸತ್ ಪ್ರಜೆಗಳಲ್ಲಿದೆ. ಚುನಾವಣಾ ಸಂದರ್ಭದಲ್ಲಿ ಪ್ರಜೆಗಳು ಯಾವುದೇ ಹಣದ ಆಮಿಷಕ್ಕೆ ಒಳಗಾಗದೆ ತಮ್ಮ ಪವಿತ್ರವಾದ ಮತವನ್ನು ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡಲು ಬಳಕೆ ಮಾಡಿಕೊಳ್ಳಬೇಕು. ಆದರೆ ವಾಸ್ತವ ಪರಿಸ್ಥಿತಿ ಹಾಗಿಲ್ಲ. 'ಓಟು ಕೊಡಿ ನೋಟು ತಗೊಳ್ಳಿ' ಅರ್ಥಾತ್ 'ಓಟಿಗಾಗಿ ನೋಟು' ಎಂಬಂತಾಗಿದೆ. ಈ ತರದ ಸನ್ನಿವೇಶಗಳನ್ನು ಹತ್ತಿಕ್ಕಲು ಚುನಾವಣಾ ಆಯೋಗ ಏನೇ ಕ್ರಮಗಳನ್ನು ತೆಗೆದುಕೊಂಡರೂ ಎಗ್ಗಿಲ್ಲದೆ ನಡೆಯುತ್ತಲೇ ಇದೆ. ಮೊದಲು ಪ್ರಜೆಗಳು ಬುದ್ಧಿವಂತರಾದರೆ ಮಾತ್ರ ಇವುಗಳಿಗೆ ತಡೆ ನೀಡಬಹುದು, ಆಗ ಮಾತ್ರ ನಾವು ಬಯಸಿದ ಸರ್ಕಾರವನ್ನು ತರಬಹುದು . ಇದರ ಜೊತೆಗೆ ಸಂವಿಧಾನವು ಒದಗಿಸಿಕೊಟ್ಟಿರುವ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ವೈಯಕ್ತಿಕ ಹಾಗೂ ಸಾಮೂಹಿಕವಾಗಿ ಚಿಂತನೆ ನಡೆಸುವ ಮಹತ್ವದ ದಿನ ಇಂದಿನ ಗಣರಾಜ್ಯೋತ್ಸವದ ದಿನ.

ಈ ಎಲ್ಲದರ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಗಣರಾಜ್ಯೋತ್ಸವವನ್ನು ದೇಶದೆಲ್ಲೆಡೆ ಬಹಳ ಅರ್ಥಪೂರ್ಣವಾಗಿ ಆಚರಿಸಲಾಗುವುದು. ಪ್ರತಿಯೊಬ್ಬ ಭಾರತೀಯನೂ ಇಂದಿನ ದಿನದ ಆಚರಣೆಯ ಉದ್ದೇಶವನ್ನು ಅರಿತು ಅದನ್ನು ಸದಾ ಮನಸ್ಸಿನಲ್ಲಿ ಜಾಗೃತವಾಗಿರಿಸಿಕೊಂಡು ಕಾರ್ಯರೂಪಕ್ಕೆ ತಂದಲ್ಲಿ ಇದೇ ನಾವುಗಳು ದೇಶಕ್ಕೆ ನೀಡುವ ಅತಿ ದೊಡ್ಡ ಕಾಣಿಕೆ. ಒಟ್ಟಾರೆ ನಾವೆಲ್ಲರೂ ಸಂವಿಧಾನದ ಆಶಯಗಳಿಗೆ ಪೂರಕವಾಗಿ ನಡೆದುಕೊಳ್ಳೋಣ, ದೇಶದ ಅಭಿವೃದ್ಧಿಗೆ ಪಣ ತೊಡೋಣ, ಈ ರಾಷ್ಟ್ರವನ್ನು ಕಟ್ಟಲು ಮುಂದಾಗೋಣ.

## ರಾಜ್ಯಮಟ್ಟದ ಪಂದ್ಯದಲ್ಲಿ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ಗೆ ಸಮಗ್ರ ಪ್ರಶಸ್ತಿ



ದಾವಣಗೆರೆ, ಜ.25 - ಹೊಸಪೇಟೆಯ ವಿಜಯನಗರ ಬಾಸ್ಕೆಟ್‌ಬಾಲ್ ಕ್ಲಬ್ ಇವರ ಆಶ್ರಯದಲ್ಲಿ ಮೊನ್ನೆ ಏರ್ಪಡಿಸಿದ್ದ ರಾಜ್ಯ ಮಟ್ಟದ ಆಹ್ವಾನಿತ ಬಾಸ್ಕೆಟ್ ಬಾಲ್ ಪಂದ್ಯಾವಳಿಯಲ್ಲಿ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ನ ಕ್ರೀಡಾಪಟುಗಳು ಮೂರು ವಿಭಾಗಗಳಲ್ಲಿ ಸಮಗ್ರ ಪ್ರಶಸ್ತಿಗೆ ಭಾಜನರಾಗಿ ದಾವಣಗೆರೆ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ.

17 ವರ್ಷದ ಒಳಗಿನ ಬಾಲಕರ ವಿಭಾಗದಲ್ಲಿ ಹಾಗೂ 14 ಮತ್ತು 17 ವರ್ಷದೊಳಗಿನ ಬಾಲಕಿಯರ ವಿಭಾಗಗಳಲ್ಲಿ ದಾವಣಗೆರೆ ಬಾಸ್ಕೆಟ್‌ಬಾಲ್ ಕ್ಲಬ್‌ನ ಕ್ರೀಡಾಪಟುಗಳು ಭಾಗವಹಿಸಿದ್ದರು.

17 ವರ್ಷದ ಬಾಲಕರ ವಿಭಾಗದಲ್ಲಿ ಬಿಜಾಪುರ ತಂಡವನ್ನು ಮಣಿಸಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. 14 ಮತ್ತು 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಹೊಸಪೇಟೆ ತಂಡವನ್ನು ಮಣಿಸಿ ಪ್ರಥಮ ಸ್ಥಾನವನ್ನು ಪಡೆದುಕೊಂಡು ಸಮಗ್ರ ಪ್ರಶಸ್ತಿಗೆ ಭಾಜನರಾಗಿರುತ್ತಾರೆ.

ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ನ ಆಡಳಿತ ಮಂಡಳಿಯವರು ಹಾಗೂ ತರಬೇತುದಾರ ಆರ್. ವೀರೇಶ್ ಹಾಗೂ ಆರ್. ದರ್ಶನ್ ಪ್ರಶಸ್ತಿ ಪಡೆದ ಬಾಲಕ-ಬಾಲಕಿಯರಿಗೆ ಅಭಿನಂದಿಸಿದ್ದಾರೆ.

## ಮಕ್ಕಳ ಕೊಂದ ಪಾಲಕರು

**(3ನೇ ಪುಟದಿಂದ)** ಕುರಿತದ್ದಾಗಿತ್ತು. ಹತ್ಯೆ ಬಗ್ಗೆ ಪದ್ಮಜಗೆ ಪೊಲೀಸರು ಕೇಳಿದಾಗ ತೀವ್ರ ಆಕ್ರೋಶಗೊಂಡ ಆಕೆ, ಮೃತಪಟ್ಟ ಹೆಣ್ಣು ಮಕ್ಕಳಿಗೆ ಮತ್ತೆ ಜನ್ಮ ನೀಡುವ ಕ್ರಿಯೆಗೆ ಅಡ್ಡಿಪಡಿಸಿದ್ದಾಗಿ ಹೇಳಿದ್ದಾಳೆ. ಕೊರೊನಾ ಬಂದ ನಂತರದಿಂದಲೂ ನಾಲ್ವರ ಕುಟುಂಬ ಏಕಾಂಗಿಯಾಗಿತ್ತು. ಮನೆಕೆಲಸದವರನ್ನೂ ಒಳಗೆ ಬಿಟ್ಟುಕೊಳ್ಳುತ್ತಿರಲಿಲ್ಲ ಎಂದು ರವಿ ಚಾರಿ ತಿಳಿಸಿದ್ದಾರೆ.

ತಂದೆ - ತಾಯಿಗಳಿಬ್ಬರೂ ವಿಚಾರಣೆಗೆ ಒಳಪಡುವ ಸ್ಥಿತಿಯಲ್ಲಿ ಇಲ್ಲ. ತನ್ನ ಕಿರಿಯ ಮಗಳ ತಲೆಯಲ್ಲಿ ಭೂತ ಸೇರಿಕೊಂಡಿದೆ. ಹೀಗಾಗಿ ತಲೆ ಒಡೆದಿದ್ದಾಗಿ ತಾಯಿ ಹೇಳುತ್ತಿದ್ದಾಳೆ. ನಾವು ನೋಡಿದ್ದನ್ನು ವಿವರಿ ಸಲು ಅರ್ಥ ಮಾಡಿಕೊಳ್ಳಲು ಕಷ್ಟ ಎಂದು ಡಿ.ಎಸ್.ಪಿ. ರವಿ ಚಾರಿ ಹೇಳಿದ್ದಾರೆ. ಪದ್ಮಜ ಹಾಗೂ ಪುರುಷೋತ್ತಮ ವಿರುದ್ಧ ಹತ್ಯೆ ಪ್ರಕರಣ ದಾಖಲಿಸಲಾಗಿದೆ. ಮನೋವೈದ್ಯರ ಮೂಲಕ ಅವರ ಮಾನಸಿಕ ಸ್ಥಿತಿ ತಿಳಿಯುವ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆನಂತರವೇ ಬಂಧನದ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

## ನಗರದಲ್ಲಿಂದು ಯೋಧರಿಂದ ಗಣರಾಜ್ಯೋತ್ಸವ

ಜಿಲ್ಲಾ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘದಿಂದ ಇಂದು ಬೆಳಿಗ್ಗೆ 10.30 ಕ್ಕೆ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಇಂದು ಆಚರಿಸಲಾಗುತ್ತಿದೆ. ನಂತರ ಮಧ್ಯಾಹ್ನ 12 ಕ್ಕೆ ಸಂಘದ ಸಭೆ ನಡೆಯಲಿದೆ.


**ಮನೆ ಬಾಡಿಗೆಗೆ (ಇಂಡಿಪೆಂಡೆಂಟ್)**
ದಕ್ಷಿಣ, 3 BHK, 40x60 ಎಂ.ಸಿ.ಸಿ. 'ಬಿ' ಬ್ಲಾಕ್ ನಲ್ಲಿ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409

**ಮನೆಗಳು ಮಾರಾಟಕ್ಕಿವೆ**
ವಿದ್ಯಾನಗರ 40x60 (ಉತ್ತರ), ಸಿದ್ದವೀರಪ್ಪ ಬಡಾವಣೆ 40x70 (ಪೂರ್ವ) ಡುಪ್ಲೆಕ್ಸ್ , 30x40, ಮನೆ ಮತ್ತು ಮೇಲೆ ರೂಂಗಳು, ನಿಜಲಿಂಗಪ್ಪ ಬಡಾವಣೆ 30x35 ಉತ್ತರ ಬಾಗಿಲ ಮನೆ , 30x40 ಪೂರ್ವ, ಬಾಲಾಜಿ ಲೇಔಟ್ 30x40 (ಪೂರ್ವ), 30x50 (ಪಶ್ಚಿಮ) ಎಂ.ಸಿ.ಸಿ. 'ಎ' ಬ್ಲಾಕ್ 44x60 (ಪೂರ್ವ) ಮೇಲೆ ಕೆಳಗೆ ಮನೆ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
ಸುರೇಶ್ 95911 60520,
ಐಗೂರು ವಿಜಯಕುಮಾರ್ 99457 02495

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂ ಮನೆ ಇಂಡಿಪೆಂಡೆಂಟ್ ಹೌಸ್
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130
99166 12110

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ 30x50 ಪೂರ್ವ ಅಕ್ಕ-ಪಕ್ಕ 30x48 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ ದಕ್ಷಿಣ ಕಾರ್ನರ್
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಸೈಟ್ ಮಾರಾಟಕ್ಕಿದೆ**
ಕರ್ನಾಟಕ ಗೃಹ ಮಂಡಳಿ, KHB, 30x50 ದಕ್ಷಿಣ (120 ಅಡಿ ರಸ್ತೆಗೆ ಹತ್ತಿರ ಇದೆ)
ಮಂಜುನಾಥ್
ರಿಯಲ್ ಎಸ್ಟೇಟ್ ಏಜೆಂಟ್
98444 91792

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಸೈಟು ಮಾರಾಟಕ್ಕೆ (ದಕ್ಷಿಣ)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ) 40x60 ದಕ್ಷಿಣ
ಬೂಸ್ನೂರ್ ಕಿರಣ್ (ಏಜೆಂಟ್)
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಮತ್ತು ಕೇವಲ ಅರ್ಧ ಪರ್ಸೆಂಟ್ ($^1/_2$%) ಕಮೀಷನ್ ಗೆ)
ಆಫೀಸ್ ನಂ. 97315-63409 98440-63409

**ಹೊಸ ಮನೆ ಲೀಸ್‌ಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 3 ಬೆಡ್‌ರೂಮ್‌ನ ಹೊಸ ಡೂಪ್ಲೆಕ್ಸ್ ಮನೆ ಲೀಜ್‌ಗೆ ಇದೆ.
78996 81386
99866 17483

**ಕ್ಲಿನಿಕ್ ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.**
ವಿಳಾಸ: ಡಾ. ಎನ್.ಹೆಚ್.ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

**ಸೈಟ್‌ಗಳು ಮಾರಾಟಕ್ಕಿವೆ**
ವಾಜಪೇಯಿ ಬಡಾವಣೆ 34x40 (ಪೂರ್ವ), 54x40 (ಪೂರ್ವ ಕಾರ್ನರ್) 30x50 (ಪಶ್ಚಿಮ) , ಜೆ.ಹೆಚ್. ಪಟೇಲ್ ಬಡಾವಣೆ 40x60 (ಉತ್ತರ) ಮೇಲೆ ಎರಡು ಮನೆ.
ಸೈಟ್‌ಗಳನ್ನು ಕೊಡುವುದಕ್ಕೆ ಮತ್ತು ತೆಗೆದುಕೊಳ್ಳುವುದಕ್ಕೆ ಸಂಪರ್ಕಿಸಿ
ಸುರೇಶ್: 95911 60520
ಐಗೂರು ವಿಜಯ್ ಕುಮಾರ್ 99457 02495

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ, ವಿವೇಕಾನಂದ ಬಡಾವಣೆಯಲ್ಲಿ, ಆಂಜನೇಯ ಬಡಾವಣೆಯಲ್ಲಿ 40x84 North, 70x50, Corner, 80x60 East, 30x50 North, 30x40 Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ಸೈಟ್‌ಗಳು ಮಾರಾಟಕ್ಕಿವೆ**
ಬಾಟಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ, ಬನಶಂಕರಿ ಬಡಾವಣೆಯಲ್ಲಿ 50x50 ಕಾರ್ನರ್ ಉತ್ತರ ಪೂರ್ವ, ವಾಜಪೇಯಿ ಲೇಔಟ್‌ನಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಸೈಟು, ಮನೆ ಖರೀದಿಗೆ ಬೇಕಾಗಿದೆ**
ಕೇವಲ ($^1/_2$%) ಅರ್ಧ ಪರ್ಸೆಂಟ್ ಕಮೀಷನ್‌ಗೆ ನಾವು ನಿಮ್ಮ ಸೈಟು, ಮನೆ ಮಾರಿಸಿಕೊಡುತ್ತೇವೆ.
ಕಿರಣ್ ಬೂಸ್ನೂರ್ (ಏಜೆಂಟ್)
ಮೊ.98440-63409

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳೆಯಗಳಲ್ಲಿ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಉಚಿತ ಊಟ, ವಸತಿ ಸೌಲಭ್ಯವಿದೆ.
98440-63507

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿ ಕೊಳ್ಳಿ, ಕಡಿಮೆ ದರದಲ್ಲಿ
72046 33302

**ಪಾಸ್‌ಪೋರ್ಟ್ ಕಳೆದಿದೆ**
ಬಿ. ಚಾಂದಬಾಷಾ ಬಿನ್ ಬಿ. ಅಬ್ದುಲ್ ಅಜೀಜ #146, 3ನೇ ಮೇನ್, ರಜಾವುಲ್ ಮುಸ್ತಾಫ ನಗರ, ದಾವಣಗೆರೆ ವಾಸಿಯಾದ ನಾನು ನನ್ನ ಪಾಸ್‌ಪೋರ್ಟ್ (HO430748) ದಿನಾಂಕ : 10.01.2021ರ ಭಾನುವಾರ ಸಂಜೆ 4.30ರ ಸಮಯದಲ್ಲಿ ಜೆರಾಕ್ಸ್ ಮಾಡಿಸಲು ಹೋದಾಗ ಮಾರ್ಗ ಮಧ್ಯದಲ್ಲಿ ಸದರಿ ದಾಖಲೆ ಕಳೆದುದೋಗಿರುತ್ತದೆ. ಸಿಕ್ಕವರು ಈ ನಂಬರ್ ತಿಳಿಸಲು ವಿನಂತಿ.
ಫೋ. : 8951892954

**ಸೈಟು ಮಾರಾಟಕ್ಕೆ**
ಜೆ.ಹೆಚ್. ಪಟೇಲ್ ಬಡಾವಣೆ ಪಕ್ಕ 30x40 ಪಶ್ಚಿಮ, 30x40 ಪಶ್ಚಿಮ
ಕಿರಣ್ ಬೂಸ್ನೂರ್ (ಏಜೆಂಟ್ )
98440-63409, 97315-63409

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ, 38$^{1/2}$x40 (ಪಶ್ಚಿಮ), 36x105 (ಪೂರ್ವ), 37 x75 (ಉತ್ತರ), 30x40 (ಕಾರ್ನರ್ ಪೂರ್ವ), ಹೊಸ ಬನಶಂಕರಿ 30x55 (ಪಶ್ಚಿಮ), ಮಲ್ಲಿಕಾರ್ಜುನ ಬಡಾವಣೆ, 30x55 (ಪೂರ್ವ)
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಇಂಧನ ಹಾಕಲು 25 ವರ್ಷದೊಳಗಿರುವ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ.
ಭಾರತ್ ಪೆಟ್ರೋಲಿಯಂ ಪೆಟ್ರೋಲ್ ಬಂಕ್
ಐಟಿಐ ಕಾಲೇಜ್ ಎದುರು, ಹದಡಿ ರಸ್ತೆ,ದಾವಣಗೆರೆ.

**URGENT REQUIRED**
Accounts Administration
Tele Calling, Receptionist
Sales Executive, Billing
Male or Females
Salary - Smart Salary. Contact :
99866 93009, 95132 22622

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ರಾಣೇಬೆನ್ನೂರು, ಹರಿಹರ, ಭರಮಸಾಗರಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ, ವಸತಿ ESI, PF ಸೌಲಭ್ಯವಿದೆ.
ಸಫಾಜ್ ಸೆಕ್ಯೂರಿಟಿ ಸರ್ವೀಸ್
ಎಸ್.ಎನ್.ಎ ಪ್ಲಾಜಾ, ವಿನೋಬನಗರ, 3ನೇ ಮೇನ್ ಪಿ.ಬಿ. ರೋಡ್, ದಾವಣಗೆರೆ.
91130 53483

**FOR RENT**
41x100 for showroom Premises
Near Reliance Market, P.B. Road, Davangere.
94492 39097
98449 05070

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ಮಳಿಗೆ ಲೀಜ್/ಬಾಡಿಗೆಗೆ**
15x30 N.R. Road, Hasabavi Circle
89041 29928

**ಔಟ್ ಹೌಸ್ ಬಾಡಿಗೆಗಿದೆ**
ಪಿ.ಜೆ. ಬಡಾವಣೆ ಅಕ್ಕಮಹಾದೇವಿ ರಸ್ತೆಯಲ್ಲಿ 2 ಬಿ.ಹೆಚ್.ಕೆ. ಔಟ್ ಹೌಸ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
98440-63507

**WANTED**
Female Trainer for Reputed
VETA SPOKEN ENGLISH CENTRE
Contact with Resume
97313 57714
98450 40493

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು 18 ರಿಂದ 30 ವರ್ಷದೊಳಗಿನ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಪ್ರಕಾಶ ಟಿ.ವಿ. ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಮನೆ ಬಾಡಿಗೆಗಿದೆ**
ಸರಸ್ವತಿ ಬಡಾವಣೆಯಲ್ಲಿ ಮನೆ ಬಾಡಿಗೆಗೆ ಇದೆ
ನಗರದ ಸರಸ್ವತಿ ಬಡಾವಣೆಯ ನೀರಿನ ಟ್ಯಾಂಕಿನ ಬಳಿ 3 ಬೆಡ್ ರೂಂ, ಕಾರ್ಪೊರೇಷನ್ ಮತ್ತು ಬೋರ್‌ವೆಲ್ ನೀರಿನ ವ್ಯವಸ್ಥೆಯಿರುವ ಸುಸಜ್ಜಿತ ಮೊದಲನೇಯ ಮಹಡಿ ಮನೆ ಬಾಡಿಗೆಗೆ ಇದೆ. ಮುಖ್ಯದ್ವಾರದ ದಿಕ್ಕು : ಪಶ್ಚಿಮ.
ಸಂಪರ್ಕಿಸಿ : 96631 00400

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ ಸಂಬಳ 6000 ರಿಂದ 7000 ಊಟ, ರೂಂ, ಉಚಿತ. ನೆಲ, ಬಾತ್‌ರೂಂ ಕ್ಲೀನಿಂಗ್ ಕೆಲಸ ಸಂಪರ್ಕಿಸಿ:
97400 98047, 97400 98064

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ಎಪಿಎಂಸಿ 'ಎ' ಬ್ಲಾಕ್ ನಲ್ಲಿ 45x100 ಅಳತೆಯ ಗೋಡೌನ್ ಬಾಡಿಗೆಗೆ ಇದೆ.
ಸಂಪರ್ಕಿಸಿ :
ಮೊ.94481-14684

**ಬೇಕಾಗಿದ್ದಾರೆ**
ಫ್ಯಾಕ್ಟರಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ವಯೋಮಿತಿ 20 ರಿಂದ 35
ಇಂಡಸ್ಟ್ರೀಯಲ್ ಏರಿಯಾ ಲೋಕಿಕೆರೆ ರೋಡ್, ದಾವಣಗೆರೆ.
97422 66668

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿಯಲ್ಲಿ 2 ಬೆಡ್‌ರೂಂ, ಬೋರ್‌ವೆಲ್ ಹಾಗೂ ಕಾರ್ಪೊರೇಷನ್ ನೀರು ಇರುವ ಮನೆ 4ನೇ ಮೇನ್, 7ನೇ ಕ್ರಾಸ್ ವಿದ್ಯಾನಗರ ಪಾರ್ಕ್ ಪಕ್ಕ ಇರುವ ಮನೆ ಖಾಲಿ ಇದೆ.
95917 47333
97416 78794

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಮಳಿಗೆ ಬಾಡಿಗೆಗೆ ಇದೆ**
ಕೋರ್ಟ್ ಹತ್ತಿರ ಮಳಿಗೆ ಹಾಗೂ ಹಾಲ್ ಬಾಡಿಗೆಗೆ ಇದೆ. ಮನೆ ಶಿಫ್ಟಿಂಗ್‌ಗಾಗಿ
ಸಂಪರ್ಕಿಸಿ
86181 82332

**FOR RENT/LEASE**
1400 sqft, North Facing, 2BHK & One Room with all facilities @ Frist floor, near Vidyanagar 1st Bus Stop
63615 93954

**ALPHABET COACHING**
**B.E / DIPLOMA CLASSES**
Free M1 & M2 Classes for Diploma Students
Photoshop CS6/Tally
8217624367, 8971279127

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಜರ್ ಬೇಕಾಗಿದ್ದಾರೆ. ESI-PF ಜೊತೆ ಆಕರ್ಷಕ ಸಂಬಳ ಇರುತ್ತದೆ. ತಕ್ಷಣ ಸಂಪರ್ಕಿಸಿ.
ಫೋ. : 94358 83109
98448 18900

**ಮನೆಗಳು ಮಾರಾಟಕ್ಕಿವೆ**
ಮೌನೇಶ್ವರ ಬಡಾವಣೆಯಲ್ಲಿ 20x30 (ಪೂರ್ವ-ದಕ್ಷಿಣ ಕಾರ್ನರ್) ಎರಡು ಫ್ಲೋರ್ ಮನೆ 38 ಲಕ್ಷಕ್ಕೆ, ಶಕ್ತಿ ನಗರದಲ್ಲಿ 26x40 (ಪಶ್ಚಿಮ) ಹೊಸ ಮನೆ 58 ಲಕ್ಷಕ್ಕೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ:
98804 40602

**ಬೆಣ್ಣೆ ದೋಸೆ ಭಟ್ಟರು ಬೇಕಾಗಿದ್ದಾರೆ**
ಸಿರ್ಸಿ ಹೃದಯ ಭಾಗ, ಹಳೇ ಬಸ್ ನಿಲ್ದಾಣ ಹತ್ತಿರದ ಹೋಟೆಲ್‌ಗೆ ಬೆಣ್ಣೆ ದೋಸೆ ಭಟ್ಟರು ಬೇಕಾಗಿದ್ದಾರೆ. ಊಟ, ವಸತಿ, ಆಕರ್ಷಕ ಸಂಬಳ ನೀಡಲಾಗುವುದು.
99168 80310

**ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣಾ ಸಂಘ (ರಿ.)**
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ.
ಉದ್ಯೋಗ ಮಾಹಿತಿ ಕೇಂದ್ರ
81470 12999, 89512 72999

**ಮನೆ ಬಾಡಿಗೆಗೆ ಇದೆ**
ಬಾಲಾಜಿ ನಗರ ಪಾರ್ಕ್ ಎದುರು ಕುಂದುವಾಡ ರೋಡ್, ದಾವಣಗೆರೆ ಇಲ್ಲಿ ಮೊದಲನೇ ಮಹಡಿಯಲ್ಲಿ 2BHK ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
94817 21551
97417 45102

**ಮನೆ ಲೀಸ್‌ಗೆ ಇದೆ**
**HOUSE FOR LEASE**
ಡಬಲ್ ಬೆಡ್ ರೂಂ ಸ್ವಾಮಿ ವಿವೇಕಾನಂದ ಬಡಾವಣೆ, 8ನೇ ಮೇನ್.
96860 32923
97312 89904

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
2-3 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಆಸಕ್ತರು ವಿಚಾರಿಸಿ
(ಸಂಪರ್ಕಿಸುವ ಸಮಯ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ)
99865 38099

**ಮಾರಾಟಕ್ಕೆ**
ಸಿದ್ದವೀರಪ್ಪ ಬಡಾವಣೆ ಮನೆ-27×44, ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆ-20×30, DCM ಮನೆ- 30×35, ಶ್ರೀರಾಮ ಬಡಾವಣೆ ಮನೆ ಡೂಪ್ಲೆಕ್ಸ್-20×30, ಸರಸ್ವತಿ ಬಡಾವಣೆ ಮನೆ-20×35, ಸಿದ್ದಗಂಗಾ ಬಡಾವಣೆ ಮನೆ-30×40, SS ಲೇಔಟ್ ಮನೆ-30×40, 30×47
7899636597, 9916525828

**NEW BATCHES COMMENCED**
**VETA**
EXPERTS IN SPOKEN ENGLISH
93439 44659
99028 60360

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**Change of Name**
I Saif Ali Nadaf H S/o Mahaboob Hazarath Ali, 19 Years resident @ # 3459/2, 2nd Main, 5th cross, UBDT College, west gate, MCC 'B' Block, Davanagere. Wrongly Entered My name in passport Saif Ali Nadaf H instead Hazarath Ali Saif Ali As per affidavit dated 25.01.2021 before Notary Davanagere. In Future all my Transacation and documents will be in may name as Undersigned.
Saif Ali Nadaf H.

**WANTED**
Wanted Receptionist For Clinic with good English & Computer Knowledge.
Contact
79759 56819

**SSLC/PUC CORRESPONDENCE**
ಸುವರ್ಣ ಅವಕಾಶ ಸಿಂಚನ ಅಕಾಡೆಮಿ
SBI ATM ಹತ್ತಿರ, ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 86601 95955

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ನಿಮ್ಮ ಗಮನಕ್ಕೆ**
ನಿಮ್ಮ ದೇಹದ ತೂಕ ಕಡಿಮೆ/ ಹೆಚ್ಚಿಸಿಕೊಳ್ಳಿ
(ಉಚಿತ ತಪಾಸಣೆ ಇರುತ್ತದೆ)
ಇಂದೇ ಕರೆ ಮಾಡಿ
90970 70333

**ಲೀಜ್ ಮತ್ತು ಬಾಡಿಗೆಗೆ**
3BHK ಗ್ರೌಂಡ್ ಫ್ಲೋರ್ ಪೂರ್ವ ದಿಕ್ಕು, ಬಾಡಿಗೆಗೆ ಆಂಜನೇಯ ಬಡಾವಣೆ ಮತ್ತು ಜಯನಗರ ಸರಸ್ವತಿ ಬಡಾವಣೆ 2BHK ಗ್ರೌಂಡ್ ಫ್ಲೋರ್ ಉತ್ತರ ದಿಕ್ಕು ಲೀಜಿಗೆ,
9902383936, 8217214069
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ನೇರ ಪರೀಕ್ಷೆಗಳು**
NTC: ನರ್ಸರಿ ಟೀಚರ್ಸ್ ಟ್ರೈನಿಂಗ್
SSLC, PUC, BA, B.Com, MA, M.Com, B.Ed, M.Ed.
ಮಾನಸ ಗಂಗೋತ್ರಿ ವಿದ್ಯಾಸಂಸ್ಥೆ
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013
ಪಾಂಪ್ಲೆಟ್ಸ್ ಹಂಚಲು ಯುವಕರು ಬೇಕಾಗಿದ್ದಾರೆ.

**House for Sale**
#1822, 2nd (B) Cross, 3rd Main Road vinobha Nagara, Davanagere.
Area-15ft (width) x 44ft (lenght) Contact :
99167 02382, 97389 24977

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬಾಲಾಜಿ ಸ್ಟೋನ್ ಕ್ರಷರ್**
ಉತ್ತಮ ಗುಣಮಟ್ಟದ ಡಬಲ್ ಫಿಲ್ಟರ್ ಎಂ.ಸ್ಯಾಂಡ್, ಪಿ.ಸ್ಯಾಂಡ್, ಬೋಡ್ರಸ್, 6 ಎಂ.ಎಂ, 12ಎಂ.ಎಂ, 20 ಎಂ.ಎಂ. (ಡಬಲ್ ವಿಎಸ್‌ಐ) 40 ಎಂ.ಎಂ ಜಲ್ಲಿ ದೊರೆಯುತ್ತದೆ. ಸಂಪರ್ಕಿಸಿ:
98446 21102, 97424 63115

**ಹೆಸರು/ಜನ್ಮ ದಿನಾಂಕ ಸ್ಪಷ್ಟೀಕರಣ**
ಹೇಮಪ್ಪ ಹೆಚ್.ಬಿ ತಂದೆ ದಿ.ಹೆಚ್. ಬಸಪ್ಪ # 609/1, 6ನೇ ಕ್ರಾಸ್, ಕೆ.ಬಿ. ಬಡಾವಣೆ ದಾವಣಗೆರೆ ವಾಸಿಯಾದ ನಾನು ಈ ಮೂಲಕ ಸ್ಪಷ್ಟೀಕರಿಸುವುದೇನೆಂದರೆ ನನ್ನ ಆಧಾರ್ ಕಾರ್ಡ್‌ನಲ್ಲಿ ಹೇಮಪ್ಪ ಹೆಚ್.ಬಿ ತಂದೆ ಲೇ ಹೆಚ್. ಬಸಪ್ಪ ಎಂದೂ ಜನ್ಮ ದಿನಾಂಕ 1.08.1955 ಎಂದು ಸರಿಯಾಗಿ ನಮೂದಾಗಿದೆ. ಆದರೆ ಡಿ.ಎಲ್. ನಲ್ಲಿ ಮಾತ್ರ ಹೇಮಂತ್ ರಾಜಪ್ಪ ತಂದೆ ಬಸಪ್ಪ ಎಂದು ಜನ್ಮ ದಿನಾಂಕ 2.11.1960 ಎಂದು ತಪ್ಪಾಗಿ ನಮೂದಾಗಿದೆ. ನನ್ನ ಎಲ್ಲಾ ವ್ಯವಹಾರಗಳು ಹೇಮಪ್ಪ ಹೆಚ್.ಬಿ ತಂದೆ ಲೇ ಹೆಚ್. ಬಸಪ್ಪ ಹೆಸರಿನಲ್ಲೇ ನಡೆಯುತ್ತದೆ (ಜನ್ಮದಿನ 1.08.1955) ಎಂದು ದಿನಾಂಕ 25.01.2021 ರಂದು ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ತಿದ್ದುಪಡಿ ಮಾಡಿಸಿದ್ದೇನೆ.
ಹೆಚ್.ಬಿ .ಹೇಮಪ್ಪ

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ:
ಗಾಂಧಿ ಸರ್ಕಲ್, ದಾವಣಗೆರೆ.
89716 99826

**P.K. Tuition**
Coaching classes for II PUC
New Batch Started
* PHYSICS, CHEMISTRY
# 577/100/91, Sri Balaji Prasanna, 4th main, 1st cross, DCM Layout, Davangere. Land mark : Near First India ATM
83105 51491, 91080 92749

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED**
**ಬೇಕಾಗಿದ್ದಾರೆ**
ವೇಟರ್ಸ್ - Waiters
ಮೆಂಟೇನೆನ್ಸ್ - Maintenance
ಆಕರ್ಷಕ ಸಂಬಳ ನೀಡಲಾಗುವುದು
ಸಂಪರ್ಕಿಸಿ:
Elements Restobar Davanagere.
93809 74740

# ಕುಡಿಯುವ ನೀರಿನ ಅವಶ್ಯಕತೆ-ನೈಜ ಪರಿಸರವಾಗಿ ಉಳಿಸಲು ಕುಂದವಾಡ ಕೆರೆ ಅಭಿವೃದ್ಧಿ

ದಾವಣಗೆರೆ, ಜ.25- ಕುಂದವಾಡ ಕೆರೆಯು ನಗರದ ಕುಡಿಯುವ ನೀರಿನ ಪ್ರಮುಖ ಸಂಗ್ರಹಗಾರವಾಗಿದ್ದು, ಸ್ಮಾರ್ಟ್ ಸಿಟಿ ಯೋಜನೆಯಡಿ ಜನರಿಗೆ ಅಗತ್ಯ ಕುಡಿಯುವ ನೀರು ಪೂರೈಸಲು ಹಾಗೂ ಕೆರೆಯ ಸುತ್ತಮುತ್ತಲ ಪ್ರದೇಶದಲ್ಲಿ ಪರಿಸರವನ್ನು ಜೀವ ವೈವಿಧ್ಯಗಳ ವಿಕಸನಕ್ಕೆ ಅನುಕೂಲವಾಗುವಂತೆ ನೈಜ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಅವರು ತಿಳಿಸಿದ್ದಾರೆ.

ದಾವಣಗೆರೆ ಸ್ಮಾರ್ಟ್ ಸಿಟಿ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ಏರ್ಪಡಿಸಲಾಗಿದ್ದ ಸಿಟಿ ಲೆವೆಲ್ ಅಡ್ವೈಸರಿ ಫೋರಂ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸ್ಮಾರ್ಟ್ ಸಿಟಿ ಯೋಜನೆಯ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಅವರು, ಕೆರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿ, ಕೆರೆಯು ನಗರದ ಕುಡಿಯುವ ನೀರಿನ ಪ್ರಮುಖ ಸಂಗ್ರಹಗಾರವಾಗಿದ್ದು, ಬೇಸಿಗೆಯಲ್ಲಿ ಕೆರೆ ಏರಿ ಮೇಲಿನ ಕಳೆ, ಗಿಡಗಂಟೆ ಇತ್ಯಾದಿಗಳ ಕೊಳೆಯುವಿಕೆಯಿಂದ ನೀರು ಹಸಿರುಗಟ್ಟಿ ಕುಡಿಯಲು ಯೋಗ್ಯವಲ್ಲದ ರೀತಿ ಪರಿವರ್ತನೆಯಾಗುತ್ತದೆ. ನೀರು ಕಲುಷಿತಗೊಳ್ಳುವುದರಿಂದ ಕೆರೆಯಲ್ಲಿನ ಮೀನುಗಳು, ಜೀವವೈವಿಧ್ಯಗಳು ಸಾಯುತ್ತವೆ. ಇದನ್ನು ಈ ಹಿಂದೆಯೂ ಗಮನಿಸಲಾಗಿದೆ. ಕೆರೆಯ ಏರಿಯಲ್ಲಿನ ನೀರು ಬಸಿಯುವಿಕೆ, ಹಾಳಾಗಿರುವ ಏರಿ ಮೇಲಿನ ಕಲ್ಲು ಹೊದಿಕೆ ಮುಂತಾದ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹರಿಸಲು ಕೆರೆ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗಿದ್ದು, ಒಂದೂವರೆ ವರ್ಷದ ಹಿಂದೆಯೇ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆ.

ಸಾರ್ವಜನಿಕರ ಅನುಕೂಲಕ್ಕೆ ಏರಿಯ ಮೇಲೆ ವಿದ್ಯುತ್ ದೀಪ ಅಳವಡಿಕೆ, ಹೂವಿನ ಗಿಡಗಳನ್ನು ಹಾಕುವುದು, ಕಲ್ಲು ಬೆಂಚು ಅಳವಡಿಕೆ, ವಾಕಿಂಗ್ ಪಾತ್, ಸೈಕಲ್ ಟ್ರ್ಯಾಕ್ ನಿರ್ಮಾಣ ಮಾಡಲಾಗುತ್ತಿದೆ. ಕೆರೆಯ ಒಳಗೆ ಸಾರ್ವಜನಿಕರು ಹಾಗೂ ಪ್ರಾಣಿಗಳು ಹೋಗದಂತೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸಲು ಉದ್ದೇಶಿಸಲಾಗಿದೆ. ಈ ಕೆರೆಗೆ ಯಾವುದೇ ಮಳೆ ನೀರಿನ ಒಳಹರಿವು ಇಲ್ಲದಿರುವುದರಿಂದ ತುಂಗಭದ್ರಾ ನದಿ ಮತ್ತು ಭದ್ರಾ ಕಾಲುವೆ ಮೂಲಕ ನೀರು ಹರಿಸಿ ತುಂಬಿಸಲಾಗುತ್ತಿದೆ. ಸಾರ್ವಜನಿಕರಿಗೆ ಕುಡಿಯುವ ನೀರಿನ ಪೂರೈಕೆಯ ವಿಷಯವಾಗಿರುವುದರಿಂದ, ಕೆರೆಯಲ್ಲಿ ಸ್ವಚ್ಛ ಪರಿಸರ ಹಾಗೂ ನೈರ್ಮಲ್ಯ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ ಎಂದರು.



**ಚರಂಡಿ, ರಾಜಕಾಲುವೆ ನಿರ್ಮಾಣಕ್ಕೆ ಅಡ್ಡಿ :** ನಗರದಲ್ಲಿ ಮಳೆ ಹೆಚ್ಚು ಬಂದಾಗ ನೀರು ಸರಾಗವಾಗಿ ಹರಿಯದೆ, ತಗ್ಗು ಪ್ರದೇಶಗಳಿಗೆ ನುಗ್ಗಿ, ತೊಂದರೆ ಉಂಟಾಗುವುದನ್ನು ತಪ್ಪಿಸಲು ರಾಜ ಕಾಲುವೆ ಹಾಗೂ ಚರಂಡಿಗಳ ನಿರ್ಮಾಣವಾಗುತ್ತಿದ್ದು, ಶೇ.50 ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ನಗರದಲ್ಲಿನ ರಾಜ ಕಾಲುವೆ (ಮುಖ್ಯ ಚರಂಡಿ) ಮಾರ್ಗಕ್ಕೆ ಹಲವೆಡೆ ಅನುಮೋದಿತ ಬಡಾವಣೆಯಲ್ಲಿ ಸೂಕ್ತ ಸ್ಥಳಾವಕಾಶ ಇಲ್ಲದಿರುವುದರಿಂದ ತೊಂದರೆ ಉಂಟಾಗಿದೆ. ಅಲ್ಲದೇ ನಗರದ ಹಳೆಯ ಭಾಗದಲ್ಲಿ ಚರಂಡಿ ಹಾಗೂ ರಸ್ತೆಯಲ್ಲಿ ನೀರಿನ ತೊಟ್ಟಿ, ಶೌಚಾಲಯ, ಮೆಟ್ಟಿಲುಗಳು, ಸ್ಟೇರ್‌ಕೇಸ್, ಸ್ಟೋರ್‌ರೂಂ ಇತ್ಯಾದಿಗಳನ್ನು ಅನಧಿಕೃತವಾಗಿ ಕಟ್ಟಿಕೊಂಡಿರುವು ದನ್ನು ಗಮನಿಸಲಾಗಿದ್ದು, ಕಾಮಗಾರಿಗಳಿಗೆ ತೊಂದರೆಯಾಗಿದೆ. ಮಹಾನಗರ ಪಾಲಿಕೆಯಿಂದ ತೆರವು ಮಾಡಿಕೊಟ್ಟಲ್ಲಿ, ಚರಂಡಿ ನಿರ್ಮಾಣ ಕಾರ್ಯ ಪೂರ್ಣಗೊಳಿಸಲಾಗುವುದು ಎಂದು ರವೀಂದ್ರ ಮಲ್ಲಾಪುರ ಹೇಳಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಪ್ರತಿಕ್ರಿಯಿಸಿ, ಮಹಾನಗರ ಪಾಲಿಕೆ ಆಯುಕ್ತರು ಕೂಡಲೇ ಅಂತಹ ಒತ್ತುವರಿಯನ್ನು ತೆರವುಗೊಳಿಸಿ, ಚರಂಡಿ ನಿರ್ಮಾಣ ಕಾರ್ಯಕ್ಕೆ ಅನುವು ಮಾಡಿಕೊಡಬೇಕು. ಇದರಲ್ಲಿ ಯಾವುದೇ ಪ್ರಭಾವಗಳಿಗೆ ಮಣಿಯದೆ ತುರ್ತಾಗಿ ತೆರವುಗೊಳಿಸುವಂತೆ ನಿರ್ದೇಶನ ನೀಡಿದರು.

**ಇ-ಟಾಯ್ಲೆಟ್ ಸಮರ್ಪಕ ನಿರ್ವಹಣೆ :** ನಗರ ವ್ಯಾಪ್ತಿಯಲ್ಲಿ ಈಗಾಗಲೇ 1 ಮತ್ತು 2 ನೇ ಹಂತದಲ್ಲಿ ಒಟ್ಟು 29 ಇ-ಟಾಯ್ಲೆಟ್‌ಗಳನ್ನು ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಾಣವಾಗಿದ್ದು, ಇನ್ನೂ 17 ನಿರ್ಮಾಣವಾಗಬೇಕಿದೆ. ಆದರೆ, ಹಲವೆಡೆ ಇ-ಟಾಯ್ಲೆಟ್‌ಗಳ ಅಸಮರ್ಪಕ ನಿರ್ವಹಣೆಯಿಂದ ಹಾಳಾಗಿದ್ದು, ದೂರುಗಳು ಕೇಳಿಬರುತ್ತಿವೆ ಎಂದು ಸಂಸದರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯ ರವೀಂದ್ರ ಮಲ್ಲಾಪುರ ಉತ್ತರಿಸಿ, ಇ-ಟಾಯ್ಲೆಟ್‌ಗಳನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಸದುದ್ದೇಶದಿಂದ ನಿರ್ಮಿಸಿದ್ದು, ಕೆಲವು ಕಿಡಿಗೇಡಿಗಳು ಕಾಯಿನ್ ಬಾಕ್ಸ್‌ನಲ್ಲಿ ಕಬ್ಬಿಣದ ತುಂಡು, ಕಟ್ಟಿಗೆ ತುಂಡುಗಳನ್ನು ಹಾಕಿ ಹಾಳು ಮಾಡುತ್ತಿದ್ದಾರೆ. ನಗರದಲ್ಲಿ ಎಲ್ಲಾ 46 ಇ-ಟಾಯ್ಲೆಟ್‌ಗಳನ್ನು ನಿರ್ಮಾಣ ಮಾಡಿ, ನಿರ್ವಹಣೆಗಾಗಿ ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಲಾಗುವುದು. ರಸ್ತೆ ಸುರಕ್ಷತೆಗಾಗಿ ನಗರದಲ್ಲಿ ಹಾಕಿರುವ ಫ್ಲೆಕ್ಸಿಬಲ್ ಮೀಡಿಯನ್, ಮಾರ್ಕರ್, ಸೋಲಾರ್ ಬ್ಲಿಂಕರ್ಸ್‌ಗಳನ್ನು ದುಷ್ಕರ್ಮಿಗಳು ಕತ್ತರಿಸಿ ಕಳುವು ಮಾಡಿಕೊಂಡು, ತಮ್ಮ ವಾಹನಗಳಿಗೆ ಅಳವಡಿಸಿರುವುದು ಕಂಡುಬಂದಿದ್ದು, ಅಂತಹ ವಾಹನಗಳ ಫೋಟೋ ಸಹಿತ ನಗರದ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಪೊಲೀಸ್ ಅಧಿಕಾರಿಗಳು ಇನ್ನೂ ಕ್ರಮ ಕೈಗೊಂಡಿಲ್ಲ ಎಂದರು.

ಸಭೆಯಲ್ಲಿ ಶಾಸಕ ಎಸ್.ಎ.ರವೀಂದ್ರನಾಥ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಮಹಾಪೌರ ಬಿ.ಜಿ.ಅಜಯ್‌ಕುಮಾರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮತ್ತಿತರರು ಉಪಸ್ಥಿತರಿದ್ದರು.

### ವಿರೋಧ ಏಕೆ ?

**"ವಾಸ್ತವ ಸಂಗತಿಗಳನ್ನು ಅರಿಯದೇ, ಕುಂದವಾಡ ಕೆರೆ ಅಭಿವೃದ್ಧಿ ಯೋಜನೆಯು ಪರಿಸರ ವಿರೋಧಿಯೆಂದು ಕೆಲವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಕುಂದವಾಡ ಕೆರೆ ಪ್ರಸ್ತುತ ಕೇವಲ ಕೆರೆ ಮಾತ್ರವಲ್ಲದೆ, ನಗರಕ್ಕೆ ಕುಡಿಯುವ ನೀರಿಗೆ ಆಧಾರವಾಗಿರುವ ಪ್ರಮುಖ ನೀರು ಸಂಗ್ರಹಗಾರವಾಗಿದೆ. ಅಧಿಕಾರಿಗಳು ಕುಂದವಾಡ ಕೆರೆ ಅಭಿವೃದ್ಧಿಯ ಉದ್ದೇಶ ಕುರಿತ ವಾಸ್ತವ ಅಂಶಗಳನ್ನು ಸರಿಯಾದ ರೀತಿಯಲ್ಲಿ ಪ್ರಚುರಪಡಿಸಿದಲ್ಲಿ, ಯೋಜನೆ ಅಭಿವೃದ್ಧಿ ಕುರಿತಂತೆ ಇರುವ ತಪ್ಪು ಅಭಿಪ್ರಾಯಗಳು ದೂರವಾಗಲು ಸಾಧ್ಯ, ಈ ನಿಟ್ಟಿನಲ್ಲಿ ಸ್ಮಾರ್ಟ್ ಸಿಟಿ ಅಧಿಕಾರಿಗಳು ಜನಜಾಗೃತಿ ಮೂಡಿಸಿ.**

**-ಜಿ.ಎಂ. ಸಿದ್ದೇಶ್ವರ,** ಲೋಕಸಭಾ ಸದಸ್ಯರು

# ಮಾಧ್ಯಮಗಳಿಗೆ ಟ್ರಿಬ್ಯೂನಲ್ : ನೋಟಿಸ್

ನವದೆಹಲಿ, ಜ. 25 – ಮಾಧ್ಯಮಗಳು ಹಾಗೂ ವಾಹಿನಿಗಳ ವಿರುದ್ಧ ಬರುವ ದೂರುಗಳ ಪರಿಶೀಲನೆಗಾಗಿ ಮಾಧ್ಯಮ ಟ್ರಿಬ್ಯೂನಲ್ ಒಂದನ್ನು ಸ್ಥಾಪಿಸಬೇಕು ಎಂಬ ಅರ್ಜಿಯ ಬಗ್ಗೆ ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ, ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಸೋಸಿಯೇಷನ್‌ಗಳಿಗೆ ನೋಟಿಸ್ ಕಳಿಸಿದೆ.

ಮಾಧ್ಯಮಗಳಿಗೆ ಸಂಬಂಧಿಸಿದಂತೆ ಇಡೀ ಕಾನೂನು ಚೌಕಟ್ಟು ಪರಿಶೀಲಿಸಲು ಸುಪ್ರೀಂ ಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಇಲ್ಲವೇ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಸ್ವತಂತ್ರ ಸಮಿತಿ ಸ್ಥಾಪಿಸಬೇಕು ಎಂದೂ ಅರ್ಜಿಯಲ್ಲಿ ಕೇಳಿರುವ ಬಗ್ಗೆ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬ್ಡೆ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಹಾಗೂ ವಿ. ರಾಮಸುಬ್ರಮಣ್ಯಂ ಅವರನ್ನು ಒಳಗೊಂಡ ಪೀಠ ನೋಟಿಸ್ ಕಳಿಸಿದೆ. ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಫೆಡರೇಷನ್ ಹಾಗೂ ನ್ಯೂಸ್ ಬ್ರಾಡ್‌ಕಾಸ್ಟಿಂಗ್ ಸ್ಟ್ಯಾಂಡರ್ಡ್ಸ್ ಅಥಾರಿಟಿಗಳಿಗೂ ಸಹ ನೋಟಿಸ್ ಕಳಿಸಲಾಗಿದೆ.

ಚಿತ್ರ ನಿರ್ಮಾಪಕ ನೀಲೇಶ್ ನವಲಖ ಹಾಗೂ ಸಿವಿಲ್ ಇಂಜಿನಿಯರ್ ನಿತಿನ್ ಮೆಮನೆ ಎಂಬುವವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದು, ಮಾಧ್ಯಮ ಗಳು ಅದರಲ್ಲೂ ಎಲೆಕ್ಟ್ರಾನಿಕ್ ಮಾಧ್ಯಮಗಳು ಕಡಿವಾಣ ವಿಲ್ಲದ ಕುದುರೆಯಂತಾಗಿವೆ. ಅವುಗಳನ್ನು ಪಳಗಿಸಬೇಕಿದೆ ಎಂದು ಕೇಳಿದ್ದಾರೆ.

# ಮಲೇಬೆನ್ನೂರು : ನಿವೇಶನಕ್ಕೆ ಆಗ್ರಹಿಸಿ ಪುರಸಭೆಗೆ ಮುತ್ತಿಗೆ



ಮಲೇಬೆನ್ನೂರು, ಜ.25- ಪಟ್ಟಣದಲ್ಲಿ ವಾಸವಾಗಿರುವ ನಿವೇಶನ ರಹಿತರಿಗೆ ನಿವೇಶನಗಳನ್ನು ಒದಗಿಸುವಂತೆ ಆಗ್ರಹಿಸಿ ಕನ್ನಡ ರಕ್ಷಣಾ ಸಮಿತಿಯ ಮಹಿಳಾ ವಿಭಾಗದ ಕಾರ್ಯಕರ್ತರು ಇಲ್ಲಿನ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಬಡವರಿಗೆ ತಕ್ಷಣವೇ ನಿವೇಶನ ಸಹಿತ ಮನೆಗಳನ್ನು ಕಟ್ಟಿಕೊಡುವ ಬಗ್ಗೆ ಗಮನ ಹರಿಸುವಂತೆ ಪುರಸಭೆ ಅಧ್ಯಕ್ಷರಾದ ಶ್ರೀಮತಿ ನಾಹೀದಾ ಅಂಜುಂ ಸೈಯದ್ ಇಸ್ರಾರ್, ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್ ಅವರಿಗೆ ನೀಡಿದ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿ ಧರಣೇಂದ್ರಕುಮಾರ್ ಅವರು ಈ ಕುರಿತು ಪುರಸಭೆಯ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ, ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಲಾಗುವುದೆಂದರು. ಯಶೋಧಮ್ಮ, ಚಂದ್ರಮ್ಮ, ಸುಂದ್ರಮ್ಮ, ರಂಜಿತ, ಸುನೀತ, ಪುಷ್ಪಾ, ರತ್ನಮ್ಮ, ಶೋಭಾ, ದೀಪಾ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ರಾಮಮಂದಿರಕ್ಕೆ ಗೌಡ್ರ ಜಯದೇವಪ್ಪ ಪ್ರಕಾಶ್ 50 ಸಾವಿರ ರೂ. ದೇಣಿಗೆ



ದಾವಣಗೆರೆ, ಜ.25- ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರ ನಿರ್ಮಾಣಕ್ಕಾಗಿ ದೇಣಿಗೆ ಸಂಗ್ರಹಿಸುವ ಕಾರ್ಯ ನಡೆದಿದ್ದು, ವರ್ತಕ ಗೌಡ್ರ ಜಯದೇವಪ್ಪ ಪ್ರಕಾಶ್ ಅವರು 50 ಸಾವಿರ ರೂ. ದೇಣಿಗೆ ನೀಡಿದ್ದಾರೆ. ಜಿ.ಎಂ. ಲಿಂಗರಾಜ್, ಮುದೇಗೌಡ್ರ ವಿಶ್ವನಾಥ್, ಇಂಜಿನಿಯರ್ ಆನಂದಪ್ಪ, ಜೆ. ರುದ್ರಯ್ಯ, ಗೌಡ್ರ ಮನು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ವೇಣುಗೋಪಾಲ ರೆಡ್ಡಿ ಅಧ್ಯಕ್ಷ

**(1ನೇ ಪುಟದಿಂದ)** ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಲ್ಲಿ ಆರಂಭದಿಂದಲೂ ನಿರ್ದೇಶಕರಾಗಿದ್ದಾರೆ. ಈ ಬ್ಯಾಂಕಿನಲ್ಲಿ ಒಟ್ಟು ಮೂರು ಬಾರಿ ನಿರ್ದೇಶಕರಾಗಿರುವ ಅವರು, 2009ರಲ್ಲಿ ಅಧ್ಯಕ್ಷರೂ ಆಗಿದ್ದರು. ಇದೀಗ ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಬ್ಯಾಂಕಿನ ನಿರ್ದೇಶಕ ಕೆಂಗಲಹಳ್ಳಿ ಕೆ.ಹೆಚ್.ಷಣ್ಮುಖಪ್ಪ ಅವರು ವೇಣುಗೋಪಾಲ ರೆಡ್ಡಿ ಅವರ ಹೆಸರನ್ನು ಸೂಚಿಸಿದಾಗ, ಅದನ್ನು ಮತ್ತೋರ್ವ ನಿರ್ದೇಶಕ ಜಗದೀಶಪ್ಪ ಬಣಕಾರ್ ಅನುಮೋದಿಸಿದರು.

ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಕುಮಾರಸ್ವಾಮಿ ಚುನಾವಣಾಧಿಕಾರಿಯಾಗಿದ್ದರು.

**ಬಿಜೆಪಿ ಸೇರಿದ ತಕ್ಷಣ ಒಲಿದ ಅಧಿಕಾರ :** ಜಗಳೂರು ತಾಲ್ಲೂಕಿನ ಕಾಂಗ್ರೆಸ್ ಮುಖಂಡರಾಗಿದ್ದ ವೇಣುಗೋಪಾಲ ರೆಡ್ಡಿ ಅವರು ಶಾಸಕ ಎಸ್.ವಿ. ರಾಮಚಂದ್ರ ಮತ್ತು ಸಂಸದ ಜಿ.ಎಂ. ಸಿದ್ದೇಶ್ವರ ಅವರುಗಳ ನೇತೃತ್ವದಲ್ಲಿ ಕಳೆದ ತಿಂಗಳು ಬಿಜೆಪಿಗೆ ಸೇರ್ಪಡೆಯಾಗಿದ್ದರು.

ಬಿಜೆಪಿ ಸೇರಿದ ತಕ್ಷಣವೇ ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಪಟ್ಟ ಒಲಿದು ಬಂದಿದೆ. ಅಲ್ಲದೇ, ಹಿಂದುಳಿದ ಜಗಳೂರು ತಾಲ್ಲೂಕಿನ ವರಿಗೆ ಅಧ್ಯಕ್ಷ ಸ್ಥಾನ ದೊರೆತಂತಾಗಿದೆ ಎಂದು ಕಾರ್ಯಕರ್ತರು ಸಂತಸ ವ್ಯಕ್ತಪಡಿಸಿದ್ದಾರೆ.

# ದೇಶದಲ್ಲಿ ವಾಟ್ಸ್‌ಆಪ್ ಪಕ್ಷಪಾತ

**(1ನೇ ಪುಟದಿಂದ)** ಸರ್ಕಾರ ಹೇಳಿದೆ.

ನ್ಯಾಯಮೂರ್ತಿ ಸಂಜೀವ್ ಸಚ್‌ದೇವ ಅವರ ಪೀಠದ ಎದುರು ಹೆಚ್ಚುವರಿ ಸಾಲಿಸಿಟರ್ ಜನರಲ್ ಚೈತನ್ ಶರ್ಮ ಅವರು ಈ ವಿವರ ನೀಡಿದ್ದಾರೆ.

ವಾಟ್ಸ್‌ಆಪ್‌ನ ಹೊಸ ನೀತಿಯ ವಿರುದ್ಧ ವಕೀಲರೊಬ್ಬರು ಅರ್ಜಿ ದಾಖಲಿಸಿದ್ದು, ಆ ಬಗ್ಗೆ ಹೈಕೋರ್ಟ್ ವಿಚಾರಣೆ ನಡೆಸುತ್ತಿದೆ.

ವಿಚಾರಣೆ ವೇಳೆ ವಾದ ಮಂಡಿಸಿದ ಎ.ಎಸ್.ಜಿ. ಶರ್ಮ, ತಮ್ಮ ಖಾಸಗಿತನದ ಮಾಹಿತಿ ಹಂಚಿಕೊಳ್ಳುವ ಬಗ್ಗೆ ಗ್ರಾಹಕರಿಗೆ ವಾಟ್ಸ್‌ಆಪ್ ಆಯ್ಕೆ ನೀಡಿಲ್ಲ. ಬಳಕೆದಾರರು ತನ್ನಂತೆ ಕೇಳಬೇಕು, ಇಲ್ಲದಿದ್ದರೆ ಹೊರ ನಡೆಯಬೇಕು ಎಂದು ವರ್ತಿಸಿದೆ ಎಂದಿದ್ದಾರೆ.

ಯುರೋಪಿನಲ್ಲಿ ವಾಟ್ಸ್‌ಆಪ್ ನಿಯಮಗಳ ಪ್ರಕಾರ ಮಾಹಿತಿಯನ್ನು ಅದರ ಮಾತೃಕಂಪನಿಯಾದ ಫೇಸ್‌ಬುಕ್ ಜೊತೆ ಹಂಚಿಕೊಳ್ಳುವಂತಿಲ್ಲ. ಈ ಅಂಶ ಭಾರತದ ಗ್ರಾಹಕರಿಗೆ ನೀಡುತ್ತಿಲ್ಲ. ಈ ಭೇದಭಾವ ಸರ್ಕಾರಕ್ಕೆ ಕಳವಳ ತಂದಿದೆ ಎಂದವರು ಹೇಳಿದ್ದಾರೆ.

ಬಳಕೆದಾರರ ಜೊತೆ ಈ ರೀತಿ ವರ್ತಿಸುವುದರಿಂದ ಅವರ ಖಾಸಗಿತನದ ಮಾಹಿತಿ ಹಾಗೂ ಮಾಹಿತಿ ಸುರಕ್ಷತೆಯ ಮೇಲೆ ಪರಿಣಾಮವಾಗುತ್ತದೆ ಎಂದೂ ಶರ್ಮ ತಿಳಿಸಿದ್ದಾರೆ.

ಈ ವಿಷಯವು ವಾಟ್ಸ್‌ಆಪ್ ಹಾಗೂ ಬಳಕೆದಾರರ ನಡುವಿನ ವಿಷಯ. ಆದರೆ, ಇದು ಬೃಹತ್ ಪ್ರಮಾಣ ಬಳಕೆದಾರರನ್ನು ಹೊಂದಿರುವ ಕಾರಣ, ಸೂಕ್ತ ನೀತಿ ಗಳು ಇರಬೇಕಿದೆ. ಇಂತಹ ವಿಷಯಗಳಿಗಾಗಿ ವೈಯಕ್ತಿಕ ಮಾಹಿತಿ ರಕ್ಷಣಾ ಮಸೂದೆಯ ಕುರಿತು ಕ್ರಮ ತೆಗೆದು ಕೊಳ್ಳಲಾಗುತ್ತಿದೆ ಎಂದವರು ಹೇಳಿದ್ದಾರೆ. ನ್ಯಾಯಾ ಲಯ ವಿಚಾರಣೆಯನ್ನು ಮಾರ್ಚ್ 1ಕ್ಕೆ ಮುಂದೂಡಿದೆ.

# ಜಿಲ್ಲೆಯಲ್ಲಿ ಇಂದು - ನಾಳೆ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಪ್ರವಾಸ

ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಇಂದು - ನಾಳೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಇಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ಗಣರಾಜ್ಯೋತ್ಸವ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 12.30 ರವರೆಗೆ ಪ್ರವಾಸಿ ಮಂದಿರದಲ್ಲಿ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡುವರು. ಮಧ್ಯಾಹ್ನ 1 ಗಂಟೆಗೆ ಮಲೇಬೆನ್ನೂರಿನ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವರು. ಮಧ್ಯಾಹ್ನ 3.30 ಕ್ಕೆ ನಗರಕ್ಕೆ ವಾಪಸ್ಸಾಗುವರು.

ನಾಳೆ ಬುಧವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆವರೆಗೆ ಜಗಳೂರಿನ ಗುರುಭವನದಲ್ಲಿ ಏರ್ಪಡಾಗಿರುವ ಜನಸ್ಪಂದನ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸುವರು.

# ನಗರದಲ್ಲಿ ಇಂದು ಪವರ್‌ಲಿಫ್ಟಿಂಗ್, ಜಿಲ್ಲಾ ದೇಹದಾರ್ಢ್ಯ ಸ್ಪರ್ಧೆಗಳು

ಶ್ರೀ ಸಾಯಿ ಜಿಮ್ನಾಷಿಯಂ ಮತ್ತು ಶ್ರೀ ಸಾಯಿ ಹೈಟೆಕ್ ಜಿಮ್ ಇವರ ಆಶ್ರಯದಲ್ಲಿ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಗಳು ಹಾಗೂ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಗಳನ್ನು (ಎತ್ತರದ ವಿಭಾಗ) ನಗರದ ಆರ್ಯ ಈಡಿಗ ವಿದ್ಯಾರ್ಥಿ ನಿಲಯದ ಒಳಾಂಗಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಆಯೋಜಿಸಲಾಗಿದೆ.

ಇದೇ ಸಂದರ್ಭದಲ್ಲಿ 21ನೇ ವಿಶ್ವ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿ ವಿಶ್ವ ಬಲಿಷ್ಟ ವ್ಯಕ್ತಿ ಪ್ರಶಸ್ತಿ ಹಾಗೂ ಚಿನ್ನದ ಪದಕ ಪಡೆದ ಐದು ಜನ ಕ್ರೀಡಾಪಟುಗಳಿಗೆ ಸನ್ಮಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಪವರ್ ಲಿಫ್ಟಿಂಗ್ ಕ್ರೀಡೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಒಬ್ಬ ವ್ಯಕ್ತಿಗೆ ಶ್ರೀ ಸಾಯಿ ಜಿಮ್ನಾಷಿಯಂ ವತಿಯಿಂದ ಜೀವಮಾನ ಕ್ರೀಡಾ ಸಾಧನಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಕೆ.ಎಸ್. ಸಾಯಿನಾಥ್ ತಿಳಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ಬನಶಂಕರಿ ಜಾತ್ರೆ



ದಾವಣಗೆರೆಯ ಡಿಸಿಎಂ ಲೇಔಟ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಶ್ರೀ ಬನಶಂಕರಿ ದೇವಿಯ 7ನೇ ವರ್ಷದ ಜಾತ್ರಾ ಮಹೋತ್ಸವವು ಇಂದಿನಿಂದ ಮೂರು ದಿನ ನಡೆಯಲಿದೆ.

ದೇವಾಂಗ ಜಗದ್ಗುರು ದಯಾನಂದಪುರಿ ಶ್ರೀಗಳ ಕೃಪಾಶೀರ್ವಾದದೊಂದಿಗೆ ಬನಶಂಕರಿ ದೇವಸ್ಥಾನ ಸಮಿತಿ ಮತ್ತು ಬನಶಂಕರಿ ಯುವಕರ ಸಂಘದ ವತಿಯಿಂದ ಜರುಗಲಿರುವ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 9.30ಕ್ಕೆ ನಂದಿ ಧ್ವಜಾರೋಹಣ, ಮಹಾ ಮಂಗಳಾರತಿ ನೆರವೇರಲಿದೆ. ನಾಳೆ ಬುಧವಾರ ಬೆಳಗ್ಗೆ 7.30ಕ್ಕೆ ಗಂಗಾ ಪೂಜೆ, ಸಂಜೆ 5ಕ್ಕೆ ಶಾಖಾಂಬರಿ ವ್ರತ, ವಿಶೇಷ ತರಕಾರಿ ಅಲಂಕಾರ ಮಾಡಲಾಗುವುದು.

ದಿನಾಂಕ 28ರ ಗುರುವಾರ ಬೆಳಿಗ್ಗೆ 6ಕ್ಕೆ ಪಂಚಾಮೃತ ಅಭಿಷೇಕ, ಬೆಳಗ್ಗೆ 10.20ರಿಂದ ವಿಶೇಷ ಅಲಂಕಾರ, ಮಹಾಮಂಗಳಾರತಿ ನೆರವೇರುವುದು. ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಮಧ್ಯಾಹ್ನ 3.30ಕ್ಕೆ ನಿಟ್ಟುವಳ್ಳಿಯ ರಾಜ ಬೀದಿಗಳಲ್ಲಿ ಬನಶಂಕರಿ ದೇವಿಯ ಬೃಹತ್ ಮೆರವಣಿಗೆ ನಡೆಯಲಿದೆ.

# ಎಸ್‌ಪಿಬಿ, ವೈದ್ಯ ಬಿ.ಎಂ. ಹೆಗಡೆ, ಜಪಾನ್ ಮಾಜಿ ಪ್ರಧಾನಿ ಅಬೆಗೆ 'ಪದ್ಮವಿಭೂಷಣ'

**(1ನೇ ಪುಟದಿಂದ)** ಪದ್ಮಭೂಷಣ ಹಾಗೂ 102 ಪದ್ಮ ಪ್ರಶಸ್ತಿಗಳಿವೆ.

ದಿವಂಗತರಾದ ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯ್ ಹಾಗೂ ಕೇಂದ್ರ ಸಚಿವರಾದ ಕೇಶುಭಾಯಿ ಪಟೇಲ್ ಹಾಗೂ ರಾಮ್ ವಿಲಾಸ್ ಪಾಸ್ವಾನ್ ಅವರಿಗೆ ಪದ್ಮಭೂಷಣ ಪ್ರಶಸ್ತಿಗೆ ಪ್ರಕಟಿಸಲಾಗಿದೆ. ಲೋಕಸಭೆಯ ಮಾಜಿ ಸ್ಪೀಕರ್ ಸುಮಿತ್ರ ಮಹಾಜನ್ ಅವರೂ ಪದ್ಮ ಭೂಷಣ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಈ ಬಾರಿ ಪದ್ಮ ಪ್ರಶಸ್ತಿ ಪಡೆದವರಲ್ಲಿ 29 ಮಹಿಳೆಯರಿದ್ದಾರೆ. ವಿದೇಶಿಯರು, ಅನಿವಾಸಿಯರಲ್ಲಿ ಹತ್ತು ಜನರಿದ್ದರೆ, ಒಬ್ಬರು ತೃತೀಯ ಲಿಂಗಿಯಾಗಿದ್ದಾರೆ. 16 ಜನರಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ.

ಮರಳು ಕಲಾವಿದ ಸುದರ್ಶನ್ ಸಾಹೂ ಅವರು ಪದ್ಮವಿಭೂಷಣ ಪಡೆದುಕೊಂಡಿದ್ದಾರೆ. ಪ್ರಧಾನ ಮಂತ್ರಿಯವರ ಮಾಜಿ ಪ್ರಧಾನ ಕಾರ್ಯದರ್ಶಿಯಾಗಿದ್ದ ನೃಪೇಂದ್ರ ಮಿಶ್ರ, ಧಾರ್ಮಿಕ ಮುಖಂಡರಾಗಿದ್ದ ದಿ. ಕಲ್ಬೇ ಸಾಧಿಕ್ ಹಾಗೂ ಸಾಮಾಜಿಕ ಕಾರ್ಯಕರ್ತ ತಾರಾಲೋಚನ್ ಸಿಂಗ್ ಅವರು ಪದ್ಮಭೂಷಣ ಪಡೆದುಕೊಂಡಿದ್ದಾರೆ.

ಮಾಜಿ ರಾಜ್ಯಪಾಲೆ ಮೃದುಲಾ ಸಿನ್ಹಾ ಅವರಿಗೆ ಮರಣೋತ್ತರವಾಗಿ ಪದ್ಮಶ್ರೀ ನೀಡಲಾಗಿದೆ. ಮಾಜಿ ಕೇಂದ್ರ ಸಚಿವೆ ಬಿಜೊಯ್ ಚಕ್ರವರ್ತಿ ಅವರಿಗೂ ಪದ್ಮಶ್ರೀ ದೊರೆತಿದೆ.

# ಜಿಲ್ಲಾ ಸಹಕಾರ ಸಂಘಗಳ ನೌಕರರ ಒಕ್ಕೂಟಕ್ಕೆ ಆಯ್ಕೆ



ದಾವಣಗೆರೆ, ಜ.25- ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟದ ಆಡಳಿತ ಮಂಡಳಿಗೆ ಪದಾಧಿಕಾರಿಗಳ ಆಯ್ಕೆ ನಡೆದಿದೆ. ಒಕ್ಕೂಟದ ಅಧ್ಯಕ್ಷರಾಗಿ ಹೆಚ್.ಬಿ. ಭೂಮೇಶ್ವರಪ್ಪ, ಉಪಾಧ್ಯಕ್ಷರಾಗಿ ಬಿ. ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಟಿ.ಸಿ. ಕರಿಬಸಪ್ಪ, ಸಂಘಟನಾ ಕಾರ್ಯದರ್ಶಿ ಹೆಚ್.ಜಿ. ಗಣೇಶ್, ಖಜಾಂಚಿ ಎನ್. ತಿಪ್ಪೇಶ್, ಮಾಧ್ಯಮ ವಕ್ತಾರರಾಗಿ ಹೆಚ್.ಕೆ. ದೇವರಾಜ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಡಿ.ಎನ್. ಮಹೇಶ್ವರಪ್ಪ, ಎಂ. ಶೇಖರಪ್ಪ, ಬಿ.ಎಸ್. ಶಿವಕುಮಾರ, ಎಂ.ಜಿ. ಬಸವರಾಜ, ಸಿ. ಶಿವಕುಮಾರ್, ಎನ್. ಸುರೇಶ್, ಎಂ. ಬಸವರಾಜ್, ಟಿ.ಪಿ. ಯೋಗೇಶ್, ಬಿ. ಹರೀಶ್, ಕೆ. ಈಶ್ವರಪ್ಪ, ರುದ್ರಾನಾಯ್ಕ ಆಯ್ಕೆಯಾಗಿದ್ದಾರೆ.

# ನಗರದಲ್ಲಿ ಇಂದು ಬ್ರಾಹ್ಮಣ ಪುರೋಹಿತರ ಜಿಲ್ಲಾ ಸಮಿತಿ ಉದ್ಘಾಟನೆ

ದಾವಣಗೆರೆ, ಜ. 25- ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಜಿಲ್ಲಾ ಕಾರ್ಯಕಾರಿಣಿ ಸಮಿತಿಯ ಉದ್ಘಾಟನಾ ಸಮಾರಂಭವನ್ನು ಜಯದೇವ ವೃತ್ತದಲ್ಲಿರುವ ಕೂಡಲೀ ಶಂಕರಮಠದಲ್ಲಿ ನಾಳೆ ದಿನಾಂಕ 26ರ ಮಂಗಳವಾರ ಸಂಜೆ 4.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದು ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ಪವನಕುಮಾರ ಕುಲಕರ್ಣಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಯು.ನಾಗೇಶ್ ಐತಾಳ್, ಪಿ.ಸಿ. ಶ್ರೀನಿವಾಸ್, ಪಿ. ರಮೇಶ್ ಜೋಯ್ಸ್, ಪ್ರದೀಪ್ ಭಟ್ ಎಂ.ಬಿ., ಡಾ.ಬಿ.ಟಿ. ಅಚ್ಯುತ್, ಶ್ರೀ ಶಂಕರನಾರಾಯಣ ಶಾಸ್ತ್ರಿ, ಸತ್ಯನಾರಾಯಣರಾವ್, ಡಾ.ಮೋಹನ್ ನಾಡಿಗೇರ್ ಆಗಮಿಸಲಿದ್ದಾರೆ.

# ಉತ್ತಮ ನಾಯಕನ ಆರಿಸದ ಹೊರತು ಉತ್ತಮ ಆಡಳಿತ ನಿರೀಕ್ಷಿಸಲು ಸಾಧ್ಯವಿಲ್ಲ

### ರಾಷ್ಟ್ರೀಯ ಮತದಾರರ ದಿನಾಚರಣೆಯಲ್ಲಿ ಜಿಲ್ಲಾಧಿಕಾರಿ ಬೀಳಗಿ ಕಿವಿಮಾತು

ದಾವಣಗೆರೆ, ಜ.25- ಮತದಾರರು ತಮ್ಮ ಮತದಾನದ ಹಕ್ಕನ್ನು ಚಲಾಯಿಸಿ ಉತ್ತಮ ನಾಯಕನನ್ನು ಆರಿಸದ ಹೊರತು ಉತ್ತಮ ಆಡಳಿತ ನಿರೀಕ್ಷಿಸಲು ಆಗುವುದಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದರು.

ನಗರ ಪಾಲಿಕೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ನಗರ ಪಾಲಿಕೆ ವತಿಯಿಂದ ಇಂದು ಹಮ್ಮಿಕೊಂಡಿದ್ದ 11ನೇ ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾವು ಬದಲಾಗದೇ ಎದುರಿಗೆ ಇರುವವರು ಬದಲಾಗಬೇಕು ಎಂದು ನಿರೀಕ್ಷಿಸಲು ಬರುವುದಿಲ್ಲ. ಹಾಗಾಗಿ ಉತ್ತಮ ನಾಯಕನನ್ನು ಆರಿಸುವ ಕರ್ತವ್ಯ ಮೆರೆಯಬೇಕು ಎಂದು ಹೇಳಿದರು.

ದೇಶ, ರಾಜ್ಯಗಳನ್ನಾಳಲು ಸಮರ್ಥ ನಾಯಕರನ್ನು ಆರಿಸಲು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 18 ವರ್ಷ ತುಂಬಿದ ಪ್ರತಿ ವ್ಯಕ್ತಿಗೆ ಮತದಾನದ ಹಕ್ಕನ್ನು ನಮ್ಮ ಸಂವಿಧಾನ ನೀಡಿದೆ. ಆದರೆ ಮತದಾನದ ಪ್ರಮಾಣದಲ್ಲಿ ಇಳಿಕೆ ಕಂಡು ಬರುತ್ತಿದೆ ಎಂದು ವಿಷಾದಿಸಿದರು.

ಸುಶಿಕ್ಷಿತರು ಹೆಚ್ಚಿರುವ ನಗರ ಪ್ರದೇಶಗಳಲ್ಲೇ ಶೇ.50 ರಿಂದ 60 ಮತದಾನವಾಗುತ್ತಿದೆ. ಆದರೆ ಗ್ರಾ.ಪಂ ಚುನಾವಣೆಯಲ್ಲಿ ಶೇ. 85 ಮತದಾನವಾಗಿದ್ದನ್ನು ನೋಡಬಹುದು. ಕೇವಲ ಗುರುತಿನ ಚೀಟಿ ರೀತಿಯಲ್ಲಿ ಎಪಿಕ್ ಕಾರ್ಡ್ ಬಳಕೆಯಾಗಬಾರದು ಎಂದರು.

ಯುವಜನತೆಯನ್ನು ಬದಲಿಸಿದರೆ ಎಲ್ಲರನ್ನೂ ಬದಲಿಸಲು ಸಾಧ್ಯ. ಯುವಜನತೆ ತಾವು ಅರಿತರೆ ತಮ್ಮ ಸುತ್ತಲಿನ ಸಮಾಜದಲ್ಲಿ ಅರಿವು ಮೂಡಿಸಲು ಸಾಧ್ಯವಿದೆ. ಜಿಲ್ಲೆಯಲ್ಲಿ ಸ್ವೀಪ್ ಅಡಿಯಲ್ಲಿ ವಿನೂತನವಾದ ಮತ್ತು ಪರಿಣಾಮಕಾರಿಯಾದ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮತದಾನ ಕುರಿತು ಅರಿವು ಮೂಡಿಸಲಾಗುತ್ತಿದೆ. ಮತದಾರರ ಪಟ್ಟಿಯಲ್ಲಿ ಲಿಂಗಾನುಪಾತ ಸುಧಾರಣೆಯಲ್ಲಿಯೂ ಸ್ವೀಪ್ ಪೂರಕ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.



ಜಿಲ್ಲಾ ಪಂಚಾಯಿತಿ ಸಿಇಓ ಪದ್ಮಾ ಬಸವಂತಪ್ಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸುಶಿಕ್ಷಿತರ ಮತದಾನ ಕಡಿಮೆ ಆಗುತ್ತಿದ್ದು, ಮತದಾನದ ದಿನವನ್ನು ರಜಾ ದಿನವೆಂದು ಪರಿಗಣಿಸುತ್ತಿದ್ದಾರೆ. ಇದು ಉತ್ತಮ ಬೆಳವಣಿಗೆ ಅಲ್ಲ ಎಂದು ಅಭಿಪ್ರಾಯಪಟ್ಟರು.

ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮಾತನಾಡಿ, ಮತದಾನ ಮಾಡುವುದು ನಮ್ಮ ಹಕ್ಕಿನ ಜೊತೆಗೆ ಪ್ರಜಾಸತ್ತಾತ್ಮಕ ಮೌಲ್ಯದ ಪಾಲನೆಯಾಗಿದೆ. ಲೋಕಸಭಾ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಶೇ.50 ರಿಂದ 60 ಮಾತ್ರ ಮತದಾನ ಆಗುತ್ತಿದ್ದು, ಚುನಾವಣಾ ಆಯೋಗವು ಮತದಾರರಿಗೆ ಮನವೊಲಿಸುವಂತಹ ಕಾರ್ಯ ಮಾಡುತ್ತಿದೆ ಎಂದರು.


ಎಎಸ್ಪಿ ಎಂ. ರಾಜೀವ್ ಮಾತನಾಡಿ, ಇತ್ತೀಚಿನ ಅಂಕಿ -ಅಂಶಗಳಲ್ಲಿ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಕಡಿಮೆಯಾಗಿದೆ. ಅದರಲ್ಲೂ ವಿದ್ಯಾವಂತರೇ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ನಮ್ಮ ನಾಯಕನ್ನು ನಾವೇ ಆಯ್ಕೆ ಮಾಡುವುದು ನಮ್ಮ ಜವಾಬ್ದಾರಿ. ಜಾತಿ, ಜನಾಂಗ, ಧರ್ಮ, ಮತಕ್ಕೆ ಸೀಮಿತವಾಗದೆ ಕಡ್ಡಾಯವಾಗಿ ಮತದಾನ ಮಾಡಬೇಕೆಂದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ಪರಮೇಶ್ವರಪ್ಪ, ಡಿಡಿಪಿಯು ನಾಗರಾಜ್ ಇದ್ದರು.

ಸಿದ್ದಗಂಗಾ ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ನಗರಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಸ್ವಾಗತಿಸಿದರು. ಉಪ ಆಯುಕ್ತ ಸಿ. ಚಂದ್ರಪ್ಪ ವಂದಿಸಿದರು.

**ಬಹುಮಾನ :** ಯುವ ಜನತೆಯಲ್ಲಿ ಮತದಾನದ ಅರಿವು ಮತ್ತು ಮಹತ್ವ ತಿಳಿಸುವ ಸಲುವಾಗಿ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಏರ್ಪಡಿಸಲಾಗಿದ್ದ ರಾಜ್ಯಮಟ್ಟದಲ್ಲಿ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಜಿಲ್ಲೆಯ ಜಯಶ್ರೀ ಮೊದಲನೇ ಬಹುಮಾನ, ಪೋಸ್ಟರ್ ಮೇಕಿಂಗ್ ಸ್ಪರ್ಧೆಯಲ್ಲಿ ನಿವೇದಿತಾ ಮೂರನೇ ಬಹುಮಾನ, ಪ್ರೌಢಶಾಲೆ ಮಟ್ಟದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಎಸ್.ಯು. ಭಾವನ ತೃತೀಯ ಮತ್ತು ಇಂಗ್ಲಿಷ್ ಪ್ರಬಂಧ ಸ್ಪರ್ಧೆಯಲ್ಲಿ ಅಂಕಿತ ಎರಡನೇ ಬಹುಮಾನ ಪಡೆದ್ದಾರೆ.

# 'ಜನಸಂಪರ್ಕ ಸಭೆ' ನಡೆಸಿ



ದಾವಣಗೆರೆ, ಜ.25- ಜಿಲ್ಲಾಡಳಿತದ ವತಿಯಿಂದ ಪ್ರತಿ ತಿಂಗಳು ಸೋಮವಾರ ನಡೆಸುತ್ತಿದ್ದ 'ಜನಸಂಪರ್ಕ ಸಭೆ' (ಸಾರ್ವಜನಿಕರ ಕುಂದು-ಕೊರತೆ ಸಭೆ) ಯನ್ನು ಪುನಃ ಪ್ರಾರಂಭಿಸುವಂತೆ ಎನ್.ಜಿ. ಪುಟ್ಟಸ್ವಾಮಿ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ಜಿಲ್ಲೆಯ ಎಲ್ಲಾ ಅಧಿಕಾರಿಗಳ ಸಮಕ್ಷಮದಲ್ಲಿಯೇ ಸಭೆ ನಡೆದು ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿತ್ತು. ಇದರಿಂದ ಬಡಜನರು, ರೈತರಿಗೆ ಮತ್ತು ಕೂಲಿ ಕಾರ್ಮಿಕರಿಗೆ ಅನುಕೂಲವಾಗಲಿದೆ ಎಂದು ಎನ್.ಜಿ.ಪಿ ತಿಳಿಸಿದ್ದಾರೆ.

## ನಟರಾಜ್ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷ



ದಾವಣಗೆರೆ,ಜ.25- ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯಾಧ್ಯಕ್ಷರಾಗಿ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಎನ್.ಇ. ನಟರಾಜ್ ಅವರು ಆಯ್ಕೆಯಾಗಿದ್ದಾರೆ.

ಹರಿಹರ ತಾಲ್ಲೂಕಿನ ಕೊಂಡಜ್ಜಿಯಲ್ಲಿ ನಿನ್ನೆ ಏರ್ಪಾಡಾಗಿದ್ದ 2 ದಿನಗಳ ಒಕ್ಕೂಟದ ರಾಜ್ಯ ಮಟ್ಟದ ಸಮ್ಮೇಳನದ ಸಂದರ್ಭದಲ್ಲಿ ನಡೆದ ಒಕ್ಕೂಟಕದ ಸಭೆಯಲ್ಲಿ ಈ ಆಯ್ಕೆ ಅವಿರೋಧವಾಗಿ ನಡೆಯಿತು.

ಒಕ್ಕೂಟದ ಗೌರವ ಅಧ್ಯಕ್ಷರಾಗಿ ಮಹಾದೇವಯ್ಯ ಮಠಪತಿ, ಕಾರ್ಯಾಧ್ಯಕ್ಷರಾಗಿ ಕು. ಶೋಭಾ ಲೋಕ್ ನಾಗ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಜೈಕುಮಾರ್ ಅವರುಗಳು ಆಯ್ಕೆಯಾಗಿದ್ದಾರೆ.

ಸಭೆಯಲ್ಲಿ ಉಪಸ್ಥಿತರಿದ್ದ ವಿಧಾನಸೌಧ ಸಚಿವಾಲಯ ನೌಕರರ ಸಂಘದ ಅಧ್ಯಕ್ಷ ಪಿ. ಗುರುಸ್ವಾಮಿ ಮತ್ತಿತರರು ನಟರಾಜ್ ನೇತೃತ್ವದ ಎಲ್ಲಾ ನೂತನ ಪದಾಧಿಕಾರಿಗಳನ್ನು ಅಭಿನಂದಿಸಿದ್ದಾರೆ.

# ರಾಣೇಬೆನ್ನೂರು ನಗರ ದೇವತೆಯರ ಜಾತ್ರೆಗೆ ಚಾಲನೆ



### ಹರಕೆ ತೀರಿಸಿದರಾ ಶಾಸಕ ದಂಪತಿ?



ಇಂದು ಬೆಳಿಗ್ಗೆ ಮಾರುತಿ ನಗರದ ಬೆಂಚಿ ತುಂಗಾಜಲ ಶ್ರೀ ಚೌಡೇಶ್ವರಿ ದೇವಿ ಚೌಕಿಮನೆಗೆ ಬಂದ ಶಾಸಕ ಅರುಣಕುಮಾರ ಪೂಜಾರ ಹಾಗೂ ಅವರ ಪತ್ನಿ, ಜಿಪಂ ಸದಸ್ಯೆ ಮಂಗಳಗೌರಿ ಪೂಜಾರ ಹಾಗೂ ಮಕ್ಕಳು, ಬಂಧುಗಳ ಜೊತೆ ಸೇರಿ ದೇವಿಗೆ ಎಳೆಯ ಕುರಿಮರಿಯೊಂದನ್ನು ಅರ್ಪಿಸಿ ಹರಕೆ ತೀರಿಸಿದ್ದಾರೆ ಎಂಬ ಮಾತುಗಳು ಕೇಳಿಬಂದವು.

ರಾಣೇಬೆನ್ನೂರು, ಜ.25- ನಗರ ದೇವತೆಯರ ಜಾತ್ರಾ ಸ್ಥಳ ತುಂಗಾಜಲ ಹಾಗೂ ಗಂಗಾಜಲಕ್ಕೆ ತೆರಳಲು ಶನೇಶ್ವರ ಮಠದ ಶ್ರೀ ಶಿವಯೋಗಿ ಶಿವಾಚಾರ್ಯರ ನೇತೃತ್ವದಲ್ಲಿ ಶಾಸಕ ಅರುಣಕುಮಾರ ಪೂಜಾರ ಜಯಘೋಷದೊಂದಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕರು ದೇವಿಯರ ಕೃಪೆಯಿಂದಾಗಿ ನನ್ನ ಕ್ಷೇತ್ರದ ಜನರಿಗೆ ಕ್ಷೇಮ ಹಾಗೂ ಸಕಲ ಸೌಭಾಗ್ಯಗಳು ದೊರಕಲಿವೆ ಎಂದು ಹೇಳಿದರು.

ಸಚಿವ ಆರ್.ಶಂಕರ್, ನಗರಸಭೆ ಅಧ್ಯಕ್ಷೆ ರೂಪಾ ಚಿನ್ನಿಕಟ್ಟಿ, ಜಿಪಂ ಸದಸ್ಯೆ ಮಂಗಳಗೌರಿ ಪೂಜಾರ, ಸದಸ್ಯರಾದ ಶೇಕಪ್ಪ ಹೊಸಗೌಡ್ರ, ಪ್ರಕಾಶ ಪೂಜಾರ, ಪುಟ್ಟಪ್ಪ ಮರಿಯಮ್ಮನವರ, ಶಶಿ ಬಸೇನಾಯ್ಕರ, ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ ಮುಖಂಡರುಗಳಾದ ಪ್ರಕಾಶ ಕೋಳಿವಾಡ, ಭಾರತಿ ಜಂಬಗಿ, ಎಸ್.ಎಸ್. ರಾಮಲಿಂಗಣ್ಣನವರ, ಭಾರತಿ ಅಳವಂಡಗಿ, ಬಸವರಾಜ ಹುಚ್ಚಗೊಂಡರ, ಶೇಖಪ್ಪ ನರಸಗೊಂಡರ, ರಾಮಪ್ಪ ಕೋಲಕಾರ, ಮಂಜಪ್ಪ ಗೌಡಶಿವಣ್ಣನವರ, ಸೋಮು ಗೌಡಶಿವಣ್ಣನವರ, ಮಂಜು ಕಾಟಿ, ಕೃಷ್ಣಪ್ಪ ಕಂಬಳಿ ಹಾಗೂ ಎರಡೂ ಸಮಿತಿಯ ಪದಾಧಿಕಾರಿಗಳು ಹಾಜರಿದ್ದರು.

ಸರ್ವಾಲಂಕಾರಗೊಂಡ ರಥದಲ್ಲಿ ದೇವಿಯ ಉತ್ಸವ ಮೂರ್ತಿಗೆ ಜೋಗತಿಯರು ಚಾಮರ ಬೀಸಿದರೆ, ಮುತ್ತೈದೆಯರು ಆರತಿ ಬೆಳಗಿದರು. ಬೆಳಿಗ್ಗೆ 11 ಗಂಟೆಗೆ ಸಕಲ ಮಂಗಳ ವಾದ್ಯಗಳು, ಹಾಸ್ಯಗಾರರು, ದೇವಿ ಭಕ್ತರನ್ನೊಳಗೊಂಡ ಮೈಲುದ್ದದ ಮೆರವಣಿಗೆ ಮಾರುತಿ ನಗರದ ಚೌಕಿ ಮನೆಯಿಂದ ಹೊರಟಿದ್ದು ತುಂಗಾಜಲಕ್ಕೆ ನಾಳೆ ಅಂದರೆ ದಿನಾಂಕ 26ರಂದು ಬೆಳಿಗ್ಗೆ ಬರಲಿದೆ.

ಇಂದು ಸಂಜೆ 7 ಗಂಟೆಗೆ ತಳವಾರ ಗಲ್ಲಿಯ ಊರ ಮನೆಯಿಂದ ಸಕಲ ವಾದ್ಯಗಳೊಂದಿಗೆ ಹೊರಟ ದೇವಿ ನಾಳೆ ಬೆಳಿಗ್ಗೆ ಗಂಗಾಜಲದ ಜಾತ್ರಾ ಸ್ಥಳದಲ್ಲಿ ಪ್ರತಿಷ್ಠಾಪನೆಗೊಳ್ಳಲಿದ್ದಾಳೆ.

## ಗಲ್ವಾನ್ ಯೋಧರಿಗೆ ಗೌರವ

### ಕರ್ನಲ್ ಬಾಬು ಮಹಾವೀರ, ಇತರೆ ಐವರಿಗೆ ವೀರ ಚಕ್ರ

ನವದೆಹಲಿ, ಜ. 25 – ಗಲ್ವಾನ್‌ನಲ್ಲಿ ಚೀನಾ ಪಡೆಗಳಿಗೆ ದಿಟ್ಟ ಉತ್ತರ ನೀಡಿದ ಯೋಧರಿಗೆ ಶೌರ್ಯ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಚೀನಾದ ಸೈನ್ಯ ಪೂರ್ವ ಲಡಾಖ್‌ನ ಗಲ್ವಾನ್‌ನಲ್ಲಿ ನಡೆಸಿದ ದಾಳಿ ಎದುರಿಸುವಲ್ಲಿ ಭಾರತೀಯ ಪಡೆಯ ನೇತೃತ್ವ ವಹಿಸಿದ್ದ ಕರ್ನಲ್ ಬಿಕುಮಲ್ಲ ಸಂತೋಷ್ ಬಾಬು ಅವರಿಗೆ ಮರಣೋತ್ತರವಾಗಿ ಎರಡನೇ ಅತ್ಯುನ್ನತ ಸೈನಿಕ ಗೌರವ ಮಹಾವೀರ ಚಕ್ರ ನೀಡಲಾಗಿದೆ.ಕಳೆದ ವರ್ಷ ಜೂನ್ 155ರಂದು ಚೀನಾ ಪಡೆಗಳ ಜೊತೆ ಹೊಯ್ ಕೈ ಹೊಡೆದಾಟದಲ್ಲಿ 21 ಭಾರತೀಯ ಯೋಧರು ಹುತಾತ್ಮರಾಗಿದ್ದರು. ಇದು ಎರಡು ದಶಕಗಳಲ್ಲಿ ಉಭಯ ಸೈನ್ಯಗಳ ನಡುವಿನ ಗಂಭೀರ ಸೈನಿಕ ಸಂಘರ್ಷವಾಗಿತ್ತು.

ನಾಲ್ವರು ಇತರ ಸೈನಿಕರಾದ ನಯೀಬ್ ಸುಬೇದಾರ್ ನುದುರಮ್ ಸೊರೇನ್, ಹವಲ್ದಾರ್ ಕೆ. ಪಳನಿ, ನಾಯಕ್ ದೀಪಕ್ ಸಿಂಗ್ ಹಾಗೂ ಸಿಪಾಯಿ ಗುರ್ತೇಜ್ ಸಿಂಗ್ ಅವರು ದಿಟ್ಟ ಹೋರಾಟದಲ್ಲಿ ಹುತಾತ್ಮರಾಗಿದ್ದರು. ಅವರಿಗೆ ಮರಣೋತ್ತರವಾಗಿ ವೀರ ಚಕ್ರ ಪ್ರಶಸ್ತಿ ಪ್ರಕಟಿಸಲಾಗಿದೆ.

ಹವಲ್ದಾರ್ ತೇಜಿಂದರ್ ಸಿಂಗ್ ಅವರು ಗಲ್ವಾನ್ ಸಂಘರ್ಷದಲ್ಲಿ ಭಾರತೀಯ ಪಡೆಯ ಭಾಗವಾಗಿದ್ದು, ಅವರಿಗೆ ವೀರಚಕ್ರ ನೀಡಲಾಗಿದೆ.

### ಬಜೆಟ್ ವೇಳೆ ಸಂಸತ್ತಿನ ಕಡೆ ರೈತರ ನಡಿಗೆ

ನವದೆಹಲಿ, ಜ. 25 – ಬರುವ ಫೆಬ್ರವರಿ 1ರಂದು ಕೇಂದ್ರ ಬಜೆಟ್ ಮಂಡಿಸುವಾಗ ಸಂಸತ್ತಿನ ಕಡೆ ನಡೆಯುವುದಾಗಿ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ರೈತ ಮುಖಂಡರು ತಿಳಿಸಿದ್ದಾರೆ. ಬಜೆಟ್ ದಿನ ನಾವು ಬೇರೆ ಬೇರೆ ದಿಸೆಗಳಿಂದ ಸಂಸತ್ತಿನ ಕಡೆಗೆ ಕಾಲ್ನಡಿಗೆಯಲ್ಲಿ ನಡೆಯುತ್ತೇವೆ ಎಂದು ಕ್ರಾಂತಿಕಾರಿ ಕಿಸಾನ್ ಯೂನಿಯನ್‌ನ ದರ್ಶನ್ ಪಾಲ್ ಹೇಳಿದ್ದಾರೆ.

## ಗಮನ ಸೆಳೆದ 'ಜಲಗಾರ' ನಾಟಕ




ಹರಿಹರ ತಾಲ್ಲೂಕಿನ ಕೊಂಡಜ್ಜಿಯಲ್ಲಿ ಭಾನುವಾರ ಏರ್ಪಾಡಾಗಿದ್ದ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯ ಮಟ್ಟದ ಸಮಾವೇಶದ ಸಂದರ್ಭದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಾಯೋಜಕತ್ವದಲ್ಲಿ ಮೈಸೂರಿನ ದೇವದಾಸ್ ವರಪ್ರಸಾದ್ ಮತ್ತು ತಂಡವು ಪ್ರದರ್ಶಿಸಿದ ಕುವೆಂಪು ರಚನೆಯ 'ಜಲಗಾರ' ನಾಟಕವು ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿತ್ತು.

## ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಬಿ.ಎಸ್.ಸಿ. ಕಾಲೇಜಿನ ರಶ್ಮಿ ಆಯ್ಕೆ



ದಾವಣಗೆರೆ, ಜ. 25 - ನಗರದ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕಿ ಕು॥ ಎ. ಪಿ. ರಶ್ಮಿ ಅವರು ನಾಳೆ ದಿನಾಂಕ 26ರ ಮಂಗಳವಾರ ಬೆಂಗಳೂರಿನ ಮಾಣಿಕ್ ಷಾ ಪರೇಡ್ ಗ್ರೌಂಡ್‌ನಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ದಾವಣಗೆರೆ ವಿಶ್ವ ವಿದ್ಯಾನಿಲಯದಿಂದ ಆಯ್ಕೆಯಾಗಿದ್ದಾರೆ. ರಶ್ಮಿ ಅವರನ್ನು ಕಾಲೇಜಿನ ಅಧ್ಯಕ್ಷ ಬಿ.ಸಿ ಶಿವಕುಮಾರ್ ಶುಭ ಕೋರಿದ್ದಾರೆ.


**ಜನತಾವಾಣಿ**

**ನೂತನ ಏಜೆಂಟರಾಗಿ ನೇಮಕ**



ಹೂವಿನಹಡಗಲಿ ನೂತನ ಏಜೆಂಟರಾಗಿ
**ಯಾಸೀನ್ ಬಳಿಗಾರ** ನೇಮಕಗೊಂಡಿದ್ದಾರೆ.
ಎಂ.ಪಿ.ಪ್ರಕಾಶ ನಗರ, ಹೂವಿನ ಹಡಗಲಿ.
ಮೊ: 88672 35828



ಜಾಹೀರಾತು ಹಾಗೂ ಸುದ್ದಿಗಾಗಿ ಎಂದಿನಂತೆ
**ಎಸ್. ನಿಂಗರಾಜ್**
ಇವರನ್ನು ಸಂಪರ್ಕಿಸಿ : 94486 32733



**ಹೃತ್ಪೂರ್ವಕ ಕೃತಜ್ಞತೆಗಳು**

ನನ್ನನ್ನು ದಾವಣಗೆರೆ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟ (ರಿ) ದಾವಣಗೆರೆ ಇದರ ಅಧ್ಯಕ್ಷರಾಗಿ ಪುನರ್ ಆಯ್ಕೆ ಮಾಡಿದ ನನ್ನ ಎಲ್ಲಾ ನಿರ್ದೇಶಕರುಗಳಿಗೂ ಮತ್ತು ಜಿಲ್ಲೆಯ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೂ ಹಾಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಹಿರಿಯರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳು.



**ಹೆಚ್.ಬಿ. ಭೂಮೇಶ್ವರಪ್ಪ,**
ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟ (ರಿ) ದಾವಣಗೆರೆ.



**ಹಾರ್ದಿಕ ಅಭಿನಂದನೆಗಳು**



ದಾವಣಗೆರೆ ಜಿಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಒಕ್ಕೂಟ (ರಿ) ದಾವಣಗೆರೆ ಇದರ ಅಧ್ಯಕ್ಷರಾಗಿ ಪುನರ್ ಆಯ್ಕೆಯಾದ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ

**ಶ್ರೀ ಹೆಚ್.ಬಿ. ಭೂಮೇಶ್ವರಪ್ಪ**

ಇವರಿಗೆ ತುಂಬಿಗೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ದಾವಣಗೆರೆ ತಾಲ್ಲೂಕು ಇದರ ಆಡಳಿತ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರಿಂದ ಹಾರ್ದಿಕ ಅಭಿನಂದನೆಗಳು





"ನನ್ನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೆಂದರೆ ದುರ್ಬಲರೂ ಪ್ರಬಲರಷ್ಟೇ ಸಮಾನ ಅವಕಾಶ ಹೊಂದಿರುವ ವ್ಯವಸ್ಥೆ"
ರಾಷ್ಟ್ರಪಿತ ಮಹಾತ್ಮ ಗಾಂಧೀಜಿ



"ಪ್ರಜಾಪ್ರಭುತ್ವವೆಂದರೆ ಸರ್ಕಾರದ ಒಂದು ಮಾದರಿಯಷ್ಟೇ ಅಲ್ಲ. ಸಹಬಾಳ್ವೆ, ಸಹಕಾರ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಪರಸ್ಪರ ಗೌರವ ಆದರಗಳಿಂದ ಬದುಕುವ ವಿಧಾನ"
ಭಾರತ ಸಂವಿಧಾನ ಶಿಲ್ಪಿ - ಡಾ॥ ಬಿ. ಆರ್. ಅಂಬೇಡ್ಕರ್



ಶ್ರೀ ವಜುಭಾಯಿ ವಾಲಾ
ಸನ್ಮಾನ್ಯ ರಾಜ್ಯಪಾಲರು



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಮನೋಭಾವ

**ನಮ್ಮ ಸಂವಿಧಾನ ನಮ್ಮ ಹೆಮ್ಮೆ**

**ನಾಡಿನ ಸಮಸ್ತ ಜನತೆಗೆ**
**72ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**

ಶ್ರೀ ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು




"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು".
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte